ಜಿಲ್ಲಾ ಪಂಚಾಯತ್, ದಾವಣಗೆರೆ

2017–18ನೇ ಸಾಲಿನ
ವಾರ್ಷಿಕ ಆಡಳಿತ ವರದಿ

ಮುನ್ನುಡಿ

ದಾವಣಗೆರೆ ಜಿಲ್ಲಾ ಪಂಚಾಯತಿಯ 2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಹೊರತರಲು ಹರ್ಷಿಸುತ್ತೇನೆ.

ಸರ್ಕಾರವು 2017–18ನೇ ಸಾಲಿನಲ್ಲಿ ಜಿಲ್ಲೆಗೆ ಒದಗಿಸಿರುವ ಅನುದಾನದಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳಿಗೆ ಕ್ರಿಯಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದರ ಮೂಲಕ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯನ್ನು ಮಾಡಲು ಪ್ರಯತ್ನಿಸಲಾಗಿದೆ. ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳ ವಿವರಗಳನ್ನು "ವಾರ್ಷಿಕ ಆಡಳಿತ ವರದಿ" ಯಲ್ಲಿ ಸಮೀಕರಿಸಿ ನೀಡಲಾಗಿರುತ್ತದೆ.

ಸರ್ಕಾರವು ರಾಜ್ಯ, ಕೇಂದ್ರ ಮತ್ತು ಜಿಲ್ಲಾ ವಲಯದ ಕಾರ್ಯಕ್ರಮಗಳಡಿ ನಿಗಧಿಪಡಿಸಿದ ಅನುದಾನವನ್ನು ಸಮರ್ಪಕವಾಗಿ ನಿಗದಿತ ಸಮಯದಲ್ಲಿ ಅನುಷ್ಠಾನ ಗೊಳಿಸಲು ಸಹಕಾರ ನೀಡಿದ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ, ಎಲ್ಲಾ ಜಿಲ್ಲಾ ಪಂಚಾಯತಿಯ ಸದಸ್ಯರುಗಳಿಗೆ, ಎಲ್ಲಾ ಚುನಾಯಿತಿ ಪ್ರತಿನಿಧಿಗಳಿಗೆ ಹಾಗು ಎಲ್ಲಾ ಇಲಾಖೆಯ ಮುಖ್ಯಸ್ಥರಿಗೆ ಅಭಿನಂದಿಸುತ್ತೇನೆ.

ಸರ್ವರಿಗೂ ನನ್ನ ಅಭಿನಂದನೆಗಳು,

(ಎಸ್.ಅಶ್ವತಿ)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ದಾವಣಗೆರೆ

ಜಿಲ್ಲಾ ಪಂಚಾಯತ್, ದಾವಣಗೆರೆ.

2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿ

ವಿಷಯ ಸೂಚಿ

ಕ್ರ.ಸಂ.	ಇಲಾಖೆಗಳು	ಪುಟಸಂಖ್ಯೆ
	ಅನುಬಂಧ	1–8
1.	ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು	9–11
2.	ಯೋಜನಾ ವಿಭಾಗ	12–15
3.	ಸಾರ್ವಜನಿಕ ಶಿಕ್ಷಣ	16–23
4.	ಜಿಲ್ಲಾ ವಯಸ್ಕರ ಶಿಕ್ಷಣ	24–25
5.	ಕ್ರೀಡೆ ಮತ್ತು ಯುವಜನ ಸೇವೆಗಳು	26–27
6.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	28–42
7.	ಆಯುರ್ವೇದ, ಯೋಗ,ಯುನಾನಿ, ಸಿದ್ಧ, ಹೋಮಿಯೋಪತಿ (ಆಯುಷ್)	43–46
8.	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ	47–48
9.	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹರಪನಹಳ್ಳಿ	49–51
10.	ಸಮಾಜ ಕಲ್ಯಾಣ	52–55
11.	ಪರಿಶಿಷ್ಟ ವರ್ಗಗಳ ಕಲ್ಯಾಣ	56–57
12.	ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ	58–60
13.	ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ	61–62
14.	ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ	63–64
15.	ಕೃಷಿ	65–75
16.	ತೋಟಗಾರಿಕೆ	76–78
17.	ಪಶು ಸಂಗೋಪನೆ	79–81
18.	ಮೀನುಗಾರಿಕೆ	82–86
19.	ಸಹಕಾರ	87
20.	ಗ್ರಾಮೋದ್ಯೋಗ ಮತ್ತು ಚಿಕ್ಕಪುಟ್ಟ ಉದ್ಯಮ	88
21.	ರೇಷ್ಮೆ	89–91
22.	ಕೈಮಗ್ಗ ಮತ್ತು ಜವಳಿ	92–93
23.	ಸಾಮಾಜಿಕ ಅರಣ್ಯ	94–103
24.	ತಾಲ್ಲೂಕು ಪಂಚಾಯತ್, ದಾವಣಗೆರೆ	104
25.	ತಾಲ್ಲೂಕು ಪಂಚಾಯತ್, ಹರಿಹರ	105–106
26.	ತಾಲ್ಲೂಕು ಪಂಚಾಯತ್,ಚನ್ನಗಿರಿ	107–108
27.	ತಾಲ್ಲೂಕು ಪಂಚಾಯತ್,ಹೊನ್ನಾಳಿ	109
28.	ತಾಲ್ಲೂಕು ಪಂಚಾಯತ್,ಹರಪನಹಳ್ಳಿ	110
29.	ತಾಲ್ಲೂಕು ಪಂಚಾಯತ್,ಜಗಳೂರು	111–112
30.	ನಮೂನೆಗಳು	113–118

ಅನುಬಂಧ

ದಾವಣಗೆರೆ ಜಿಲ್ಲಾ ಪಂಚಾಯತಿಯ 2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿ :

1. **ಜಿಲ್ಲಾ ಪಂಚಾಯತಿ ವ್ಯಾಪ್ತಿ (ಪ್ರಕರಣ 158) :**

ಪ್ರದೇಶ	: 5975.97 ಚ.ಕಿ.ಮೀ.
ಜನಸಂಖ್ಯೆ	: 19,45,497
ಒಟ್ಟು ಸ್ಥಾನಗಳ ಸಂಖ್ಯೆ (ಪ್ರಕರಣ 159)	
ಅ) ಚುನಾಯಿತ ಸದಸ್ಯರ ಸಂಖ್ಯೆ	: 36
ಆ) ಲೋಕಸಭಾ ಸದಸ್ಯರ ಸಂಖ್ಯೆ	: 01
ಇ) ವಿಧಾನ ಸಭಾ ಸದಸ್ಯರ ಸಂಖ್ಯೆ	: 08
ಈ) ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ	: 11
ಉ) 36 ಸದಸ್ಯರಿಗೆ ಪ್ರಯಾಣ ಭತ್ಯೆ	: ರೂ. 4,09,337–00
ಊ) ಸದಸ್ಯರಿಗೆ ದಿನಭತ್ಯೆ + ಉಪವೇತನ ಭತ್ಯೆ	: ರೂ. 72,105–00
ಋ) ಗೌರವ ಧನ	: ರೂ. 2,64,0000–00
ಪಾವತಿ ಮಾಡಿದ ಗೌರವ ಧನ ಮತ್ತು ಮನೆ ಬಾಡಿಗೆ	: ರೂ. 2,94,0000–00
ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ	: ರೂ. 6,65,873–00

2. **ಪ್ರಕರಣ 177,178 ಮತ್ತು 186 ರನ್ವಯ ಮಾಹಿತಿ :**

1) ಅಧ್ಯಕ್ಷರ ಹೆಸರು	1) ಶ್ರೀಮತಿ ಉಮಾ ಎಂ.ಪಿ ರಮೇಶ್ 01–04–2017 ರಿಂದ 18–10–2017 2) ಶ್ರೀಮತಿ ಗೀತಾ ಗಂಗಾನಾಯ್ಕ 24–10–2017 ರಿಂದ 12–12–2017 3) ಶ್ರೀಮತಿ ಮಂಜುಳ ಟಿ.ವಿ ರಾಜು 10–08–2017 ರಿಂದ 31–03–2018
2) ಉಪಾಧ್ಯಕ್ಷರು	1) ಶ್ರೀ ಸಿದ್ದಪ್ಪ 01–04–2017 ರಿಂದ 12–06–2017 2) ಶ್ರೀಮತಿ ಗೀತಾ ಗಂಗಾನಾಯ್ಕ 10–08–2017 ರಿಂದ 31–03–2018
2) ಉಪಾಧ್ಯಕ್ಷರಿಗೆ ನಿಯೋಜಿಸಲಾದ ಯಾವುದೇ ಕರ್ತವ್ಯ	ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕಾರ ಕಾರ್ಯನಿರ್ವಹಿಸಿರುತ್ತಾರೆ.
3) ಅವಿಶ್ವಾಸ ನಿರ್ಣಯ ಏನಾದರೂ ಇದ್ದಲ್ಲಿ	
ಅ) ಅಧ್ಯಕ್ಷರು ವಿರುದ್ಧ	: ಇಲ್ಲ
ಆ) ಉಪಾಧ್ಯಕ್ಷರ ವಿರುದ್ಧ	: ಇಲ್ಲ
4) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸ್ಪರ್ದಿಸಿದ್ದರೆ ಅಥವಾ ವ್ಯಾಜ್ಯಗಳಿವೆಯೇ?	: ಇಲ್ಲ
5) ಹೆಸರು ಮತ್ತು ನೇಮಕವಾದ ದಿನಾಂಕ	
ಅ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಕು॥ ಎಸ್.ಅಶ್ವತಿ ಐ.ಎ.ಎಸ್., 01–04–2017 ರಿಂದ 31–03–2018
ಆ) ಉಪ ಕಾರ್ಯದರ್ಶಿ	ಶ್ರೀ ಷಡಕ್ಷರಪ್ಪ. ಜಿ.ಎಸ್ 01–04–2017 ರಿಂದ 31–03–2018

ಇ) ಮುಖ್ಯ ಯೋಜನಾಧಿಕಾರಿ	ಶ್ರೀ ಬಸನಗೌಡ 01–04–2017 ರಿಂದ 31–03–2018.
ಈ) ಮುಖ್ಯ ಲೆಕ್ಕಾಧಿಕಾರಿ	ಶ್ರೀ ಟಿ. ಆಂಜನೇಯ. 01–04–2017 ರಿಂದ 31–03–2018.
ಉ) ಯೋಜನಾ ನಿರ್ದೇಶಕರು	ಶ್ರೀ ಷಡಕ್ಷರಪ್ಪ. ಜಿ.ಎಸ್. 01–04–2017 ರಿಂದ 31–03–2018

3. **ಚುನಾವಣೆ (ಪ್ರಕರಣ 160) :**

1) ಸಾಮಾನ್ಯ ಚುನಾವಣೆಯ ದಿನಾಂಕ	: ಇಲ್ಲ
2) ಉಪ ಚುನಾವಣೆಗಳೇನಾದರೂ ಆಗಿದ್ದಲ್ಲಿ ದಿನಾಂಕ, ಕಾರಣ ಮತ್ತು ಫಲಿತಾಂಶಗಳು	: ಇಲ್ಲ
3) ಜಿಲ್ಲಾ ಪಂಚಾಯತಿಯ ಅವಧಿ ವಿಸ್ತರಣೆಗೊಂಡಿದ್ದಲ್ಲಿ	: ಇಲ್ಲ
4) ಚುನಾವಣೆ ವ್ಯಾಜ್ಯಗಳು ಇದ್ದಲ್ಲಿ	: ಇಲ್ಲ
5) ಚುನಾವಣೆ ವೆಚ್ಚ	: ಇಲ್ಲ

4. **ಜಿಲ್ಲಾ ಪಂಚಾಯತಿ ಸಭೆಯಗಳು ಮತ್ತು ಹಾಜರಾತಿ (ಪ್ರಕರಣ 180):**

1) ಸಾಮಾನ್ಯ ಸಭೆಗಳ ಸಂಖ್ಯೆ	: 02
2) ವಿಶೇಷ ಸಭೆಗಳ ಸಂಖ್ಯೆ	: 01
3) ಮುಂದೂಡಲಾದ ಸಭೆಗಳ ಸಂಖ್ಯೆ	: ಇಲ್ಲ
4) ಸಭೆಗಳನ್ನು ನಿಯಮಿತವಾಗಿ ನಡೆಸುವುದು	: ಕ್ರಮ ಬದ್ಧವಾಗಿ
5) ಸಭೆಗಳಲ್ಲಿ ಸದಸ್ಯರ ಹಾಜರಾತಿ	: ಪೂರ್ಣ
6) ಕೋರಂಗಾಗಿ ಮುಂದೂಡಲಾದ ಸಭೆಗಳು	: 01
7) ಕಾರ್ಯನಿರ್ವಾಹಣೆ ನಿಯಮಗಳ ಕ್ರಮ	: ನಿಯಮಾನುಸಾರ
ಬಿ) ನಿರ್ಣಯಗಳ ಸಂಖ್ಯೆ :	
1) ಮಂಡಿಸಿದ್ದು	45
2) ಅಂಗೀಕರಿಸಿದ್ದು	45
3) ಚರ್ಚಿಸಿದ್ದು	45
4) ಹಿಂಪಡೆದಿದ್ದು	: ಇಲ್ಲ
5) ಕೈಬಿಟ್ಟದ್ದು	: ಇಲ್ಲ

5. **ಸ್ಥಾಯಿ ಸಮಿತಿಗಳ ಮತ್ತು ಇತರ ಸಮಿತಿಗಳು (ಪ್ರಕರಣ 186 ಮತ್ತು 188):**

1) ರಚಿಸಲಾದ ಸ್ಥಾಯಿ ಸಮಿತಿ ಹಾಗೂ ಇತರ ಸಮಿತಿಗಳ ಸಂಖ್ಯೆ	: 05
2) ಸಮಿತಿಗಳಿಗೆ ಚುನಾವಣೆ ನಡೆದ ದಿನಾಂಕ	: 14–03–2018
3) ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳ ಸಂಖ್ಯೆ	:ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 186ರಲ್ಲಿ ನಿಗದಿಪಡಿಸಿದಂತೆ
4) ಪ್ರತಿ ಸಮಿತಿಯ ಕಾರ್ಯಗಳ ಬಗ್ಗೆ ಸಂಕ್ಷಿಪ್ತ ವರದಿ	: ವಿಷಯಗಳ ಬಗ್ಗೆ ಪರಿಶೀಲನೆ ಮತು ಅವುಗಳ ತೀರ್ಮಾನ ಹಾಗೂ ಕಾನೂನಿನಲ್ಲಿ ಸೂಚಿಸಿದಂತೆ ಕಾರ್ಯನಿರ್ವಹಣೆ.
5) ಇತರೆ ಸಮಿತಿಗಳಿದ್ದಲ್ಲಿ ಅವುಗಳು ನಿರ್ವಹಿಸಿದ ಕಾರ್ಯಗಳು	: ಇಲ್ಲ

6. **ಪ್ರಕರಣ 196ರನ್ವಯ ಆಡಳಿತ :**

1) ಜಿಲ್ಲಾ ಪಂಚಾಯತಿ ಸಿಬ್ಬಂದಿ ಒಟ್ಟಾರೆ ಮಂಜೂರಾದ ಹುದ್ದೆಗಳ ಸಂಖ್ಯೆ	: 99
2) ಖಾಲಿಯಿರುವ ಹುದ್ದೆಗಳು ಹಾಗೂ ಭರ್ತಿಮಾಡದಿರುವುದಕ್ಕೆ ಕಾರಣಗಳು	: 30
3) ಪ್ರತಿ ಶಾಖೆಯ ವಾಸ್ತವಿಕ ವೆಚ್ಚ	: ಇಲ್ಲ
4) ಅಧಿಕಾರಿ ಹಾಗೂ ಸಿಬ್ಬಂದಿಗಳ ತರಬೇತಿ	: ಇಲ್ಲ
5) ಸಿಬ್ಬಂದಿಯೇತರ ತರಬೇತಿ	: ಇಲ್ಲ
6) ನಡೆಸಲಾದ ಸಮ್ಮೇಳನ ಮತ್ತು ನೀಡಲಾದ ಕೊಡುಗೆ	: ಇಲ್ಲ
7) ದಂಡನೆಗಳು	: ಇಲ್ಲ
8) ಅಧಿಕಾರ ಹಾಗೂ ನೌಕರರ ಮನವಿಗಳು	: ಇಲ್ಲ

7. **ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ, ವಸ್ತು ಪ್ರದರ್ಶನ, ಕಾರ್ಯಾಗಾರ ಮತ್ತು ಸಮ್ಮೇಳನಗಳಿಗೆ ಕೊಡುಗೆ:**

1) ಅಖಿಲ ಭಾರತ ಮಟ್ಟದ ಸಂಘ ಸಂಸ್ಥೆಗಳು	: ಇಲ್ಲ
2) ರಾಜ್ಯ ಮಟ್ಟದ ಸಂಘ ಸಂಸ್ಥೆಗಳು	: ಇಲ್ಲ
3) ಅಂತರ ರಾಜ್ಯ ಮಟ್ಟದ ಸಂಘ ಸಂಸ್ಥೆಗಳು	: ಇಲ್ಲ
4) ಆರ್ಥಿಕ ಸಂಸ್ಥೆಗಳು	: ಇಲ್ಲ
5) ಇತರೆ ಸಂಘ ಸಂಸ್ಥೆಗಳು	: ಇಲ್ಲ

8. 1) ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ನಿಗಧಿಪಡಿಸಲಾದ ಒಟ್ಟು ಅನುದಾನ	: ವಿ.ಘ.ಯೋ. ರೂ.8034.18ಲಕ್ಷ : ಗಿ.ಉ.ಯೋ. ರೂ.2760.72ಲಕ್ಷ
2) ವೆಚ್ಚ ಮಾಡಲಾದ ಮೊತ್ತ	: ವಿ.ಘ.ಯೋ. ರೂ.7035.22ಲಕ್ಷ : ಗಿ.ಉ.ಯೋ. ರೂ.4243.81ಲಕ್ಷ
9. ಜಿಲ್ಲಾ ಪಂಚಾಯತಿಯಿಂದ ತೆಗೆಯಲಾದ ಸಾಲಗಳು	: ಇಲ್ಲ
10. ಸಿಂಕಿಂಗ್ ಫಂಡ್ ರೂಪಿಸಿರುವುದು	: ಇಲ್ಲ
11. ಅಯವ್ಯಯದಲ್ಲಿ ಒಳಗೊಂಡಿರದ ಜಿಲ್ಲಾ ಪಂಚಾಯತಿಯು ಮಾಡಿರುವ ವೆಚ್ಚ ಮತ್ತು ಅದಕ್ಕೆ ಕಾರಣಗಳು	: ಇಲ್ಲ
12. ಅಯವ್ಯಯವನ್ನು ಸಕಾಲದಲ್ಲಿ ಮಂಡಿಸಲಾಗಿದೆಯೇ ?	: ಮಂಡಿಸಿದೆ
1) ಜಿಲ್ಲಾ ಪಂಚಾಯತಿಗೆ ಅಯವ್ಯಯವನ್ನು ಮಂಡಿಸಿದ ದಿನಾಂಕ	: 05–08–2017.
2) ಜಿಲ್ಲಾ ಪಂಚಾಯತಿಗೆ ಅಯವ್ಯಯವು ಅನುಮೋದನೆಗೊಂಡ ದಿನಾಂಕ ಹಾಗೂ ಅದನ್ನು ಸರ್ಕಾರಕ್ಕೆ ರವಾನಿಸುವುದು	: 05–08–2017.
3) ಅಯವ್ಯಯದ ಒಟ್ಟಾರೆ ಮೊತ್ತ	: ರೂ. 29479.54 ಲಕ್ಷಗಳು
13. ಲೆಕ್ಕ ವಿವರಗಳನ್ನು ಸಕಾಲದಲ್ಲಿ ವರ್ಗಾವಣೆ ಮಾಡಲಾಗಿದೆಯೇ	: ಮಾಡಲಾಗಿದೆ.
14. ವಸೂಲು ಮಾಡಲಾಗದ ವಜಾ ಮಾಡಲಾಗಿರುವ ಮೊತ್ತ	
1) ಜಿಲ್ಲಾ ಪಂಚಾಯತಿಯಿಂದ	: ಇಲ್ಲ
2) ಸರ್ಕಾರದ ಪೂರ್ವಾನುಮತಿಯೊಂದಿಗೆ	: ಇಲ್ಲ
15. 1) ಲೆಕ್ಕ ತಪಾಸಣೆಯ ದಿನಾಂಕ	: 11–09–2017 ರಿಂದ 26–11–2017
2) ಲೆಕ್ಕಪರಿಶೋಧಕರು ಅನುಮತಿ ನೀಡದ ಅಂಶಗಳು (Items) ಮತ್ತು ಅದರ ಮೇಲೆ ಜಿಲ್ಲಾ ಪಂಚಾಯತಿ ಆದೇಶ.	: ಇಲ್ಲ
16. ಲೆಕ್ಕಪರಿಶೋಧಕರು ಅನುಮತಿಸಿದ ವಸೂಲಾದ ಮೊತ್ತದ ಒಟ್ಟು ವಿವರಗಳುಮತ್ತು ಸದರಿ ಮೊತ್ತದ ಮೇಲೆ ವಸೂಲಾದ ಬಡ್ಡಿ.	: ಇಲ್ಲ

17. ಪ್ರಕರಣ 198ರಂತೆ ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಯು ಕೋರಿ ಪಡೆದಿರುವ ಮಾಹಿತಿ	: ಇಲ್ಲ
18. ಗ್ರಾಮ ಪಂಚಾಯತಿಗಳು ಜಾರಿಗೊಳಿಸಿರುವ ಆದೇಶಗಳನ್ನು ಪ್ರಕರಣ 237 ರಡಿಯಲ್ಲಿ ಜಿಲ್ಲಾ ಪಂಚಾಯತಿಯು ಅಮಾನತ್ತುಗೊಳಿಸಿರುವ ಪ್ರಕರಣಗಳ ಸಂಖ್ಯೆ	: ಇಲ್ಲ
19. ಪ್ರಕರಣ 268 ರಡಿಯಲ್ಲಿ ಜಿಲ್ಲಾ ಪಂಚಾಯತಿಯು ರದ್ದು ಮಾಡಿರುವ ತಾಲ್ಲೂಕು ಪಂಚಾಯತಿಗಳ ನಿರ್ಣಯಗಳ ಸಂಖ್ಯೆ	: ಇಲ್ಲ
20. ತಾಲ್ಲೂಕು ಪಂಚಾಯತಿಗಳ ಆದೇಶಗಳ ವಿರುದ್ಧ ಜಿಲ್ಲಾ ಪಂಚಾಯತಿಗೆ ಸಲ್ಲಿಸಲಾದ ಮೇಲ್ಮನವಿಗಳ ಸಂಖ್ಯೆ ಮತ್ತು ಅವುಗಳ ಮೇಲಿನ ತೀರ್ಮಾನ	: ಇಲ್ಲ
21. ಜಿಲ್ಲಾ ಪಂಚಾಯತಿಯು ಪರಿಷ್ಕರಿಸಿ ಹೊರಡಿಸಿದ ಆದೇಶಗಳ ಸಂಖ್ಯೆ	: ಇಲ್ಲ
22. ಯಾವುದೇ ಸಮಿತಿಯ ತೀರ್ಮಾನಗಳನ್ನು ಜಿಲ್ಲಾ ಪಂಚಾಯತಿಯು ಪರಿಷ್ಕರಣೆ ಮಾಡಿರುವುದರ ಸಂಖ್ಯೆ	: ಇಲ್ಲ
23. ಯಾವುದೇ ಸಮಿತಿಯ ತೀರ್ಮಾನಗಳನ್ನು ಜಿಲ್ಲಾ ಪಂಚಾಯತಿಯು ಪರಿಷ್ಕರಣೆ ಮಾರ್ಪಡಿಸಿರುವುದರ ಸಂಖ್ಯೆ	: ಇಲ್ಲ
24. ಸರ್ಕಾರದಪೂರ್ವಾನುಮೋದನೆಯೊಂದಿಗೆ ಹೊರಡಿಸಿರುವ ನಿಯಮಗಳ ಸಂಖ್ಯೆ	: ಇಲ್ಲ
25. ತಾಲ್ಲೂಕು ಪಂಚಾಯತಿಗಳು ವಿನಿಯಮಗಳನ್ನು ರಚಿಸಲು ಜಿಲ್ಲಾ ಪಂಚಾಯತಿಯು ಪೂರ್ವಾನುಮೋದನೆ ನೀಡಿರುವುದರ ಸಂಖ್ಯೆ	: ಇಲ್ಲ
26. ಜಿಲ್ಲಾ ಪಂಚಾಯತಿಗೆ ಒಟ್ಟಾರೆ ಶುಲ್ಕ ಪಾವತಿಯಾಗಿರುವುದು ಮತ್ತು ಪ್ರಕರಣ 287 ಮತ್ತು 228 ರನ್ವಯ ವಸೂಲಾಗಿರುವ ಬಾಡಿಗೆ ಮತ್ತು ಶುಲ್ಕ	: ಇಲ್ಲ
27. ಪ್ರಕರಣ 293 ರಡಿಯಲ್ಲಿ ವೆಚ್ಚಗಳಿಗೆ ಸಂಬಂಧಿಸಿದಂತೆ ವಸೂಲು ಮಾಡಲಾದ ಮೊತ್ತ	: ಇಲ್ಲ

ಸ್ಥಾಯಿ ಸಮಿತಿಗಳ ವಿವರಗಳು

1. ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

(ದಿನಾಂಕ :01–04–2017 ರಿಂದ 14–03–2018 ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಶ್ರೀಮತಿ ಉಮಾ ಎಂ.ಪಿ ರಮೇಶ್	ಅಧ್ಯಕ್ಷರು	ನ್ಯಾಮತಿ	ಹೊನ್ನಾಳಿ
2	ಶ್ರೀ ಬಿ. ಫಕೀರಪ್ಪ	ಸದಸ್ಯರು	ತ್ಯಾವಣಿಗಿ	ಚನ್ನಗಿರಿ
3	ಶ್ರೀ ಜಿ.ಸಿ. ನಿಂಗಪ್ಪ ಹದಡಿ	ಸದಸ್ಯರು	ಹದಡಿ	ದಾವಣಗೆರೆ
4	ಶ್ರೀಮತಿ ಆರುಂಡಿ ಸುವರ್ಣ ನಾಗರಾಜ	ಸದಸ್ಯರು	ಹಲವಾಗಲು	ಹರಪನಹಳ್ಳಿ
5	ಶ್ರೀಮತಿ ಶೈಲಜ ಬಸವರಾಜ್	ಸದಸ್ಯರು	ಬಾಡ	ದಾವಣಗೆರೆ
6	ಶ್ರೀ ಬಿ.ಎಂ. ವಾಗೀಶಸ್ವಾಮಿ	ಸದಸ್ಯರು	ಭಾನುವಳ್ಳಿ	ಹರಪನಹಳ್ಳಿ
7	ಶ್ರೀಮತಿ ತೇಜಸ್ವಿ ವಿ ಪಟೇಲ್	ಸದಸ್ಯರು	ಹೊಸಕೆರೆ	ಚನ್ನಗಿರಿ

(ದಿನಾಂಕ :15–03–2018 ರಿಂದ 31–03–2018 ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಮಂಜುಳ ಕೆ. ಟಿ.ವಿ. ರಾಜು	ಅಧ್ಯಕ್ಷರು	ಹೊನ್ನೆಬಾಗಿ	ಚನ್ನಗಿರಿ
2	ಆರುಂಡಿ ಸುವರ್ಣ ನಾಗರಾಜ	ಸದಸ್ಯರು	ಹಲವಾಗಲು	ಹರಪನಹಳ್ಳಿ
3	ಬಸವರಾಜ ಕೆ. ಎಸ್ (ಬಸವಂತಪ್ಪ)	ಸದಸ್ಯರು	ಆನಗೋಡು	ದಾವಣಗೆರೆ
4	ಹೇಮಾವತಿ ವಿ.ಡಿ	ಸದಸ್ಯರು	ಸಿರಿಗೆರೆ	ಹರಿಹರ
5	ಜಿ. ವೀರಶೇಖರಪ್ಪ	ಸದಸ್ಯರು	ಸಾಸ್ವೇಹಳ್ಳಿ	ಹೊನ್ನಾಳಿ
6	ತೇಜಸ್ವಿ ವಿ ಪಟೇಲ್	ಸದಸ್ಯರು	ಹೊಸಕೆರೆ	ಚನ್ನಗಿರಿ
7	ಜಿ.ಸಿ. ನಿಂಗಪ್ಪ ಹದಡಿ	ಸದಸ್ಯರು	ಹದಡಿ	ದಾವಣಗೆರೆ

2. ಸಾಮಾನ್ಯ ಸ್ಥಾಯಿ ಸಮಿತಿಯ ಸದಸ್ಯರುಗಳು

(ದಿನಾಂಕ :01–04–2017 ರಿಂದ 14–03–2018 ರವರೆಗೆ)

ಕ್ರ.ಸಂ	ಹೆಸರು	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಶ್ರೀ ಡಿ.ಸಿದ್ದಪ್ಪ	ಅಧ್ಯಕ್ಷರು	ಕಂಚಿಕೆರೆ	ಹರಪನಹಳ್ಳಿ
2	ಜಿ. ವೀರಶೇಖರಪ್ಪ	ಸದಸ್ಯರು	ಸಾಸ್ವೇಹಳ್ಳಿ	ಹೊನ್ನಾಳಿ
3	ಹೆಚ್.ಬಿ.ಪರಶುರಾಮ್	ಸದಸ್ಯರು	ನೀಲಗುಂದ	ಹರಪನಹಳ್ಳಿ
4	ಉಮಾ ವೆಂಕಟೇಶ್	ಸದಸ್ಯರು	ಬಿಳಿಚೋಡು	ಜಗಳೂರು
5	ಕೆ.ವಿ. ಶಾಂತಕುಮಾರಿ	ಸದಸ್ಯರು	ದೊಣ್ಣೆಹಳ್ಳಿ	ಜಗಳೂರು
6	ಸಾಕಮ್ಮ ಬಿ.ಎಸ್	ಸದಸ್ಯರು	ಕೋಗಲೂರು	ಚನ್ನಗಿರಿ
7	ರಶ್ಮಿ. ಜಿ.ರಾಜಪ್ಪ	ಸದಸ್ಯರು	ಉಚ್ಚಂಗಿದುರ್ಗ	ಹರಪನಹಳ್ಳಿ

3. ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ

(ದಿನಾಂಕ :01–04–2017 ರಿಂದ 14–03–2018 ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಎನ್.ಜಿ. ನಟರಾಜ	ಅಧ್ಯಕ್ಷರು	ಮಾಯಕೊಂಡ	ದಾವಣಗೆರೆ
2	ಡಿ.ಜಿ. ವಿಶ್ವನಾಥ್	ಸದಸ್ಯರು	ಚೀಲೂರು	ಹೊನ್ನಾಳಿ
3	ಜಯಶೀಲ ಕೆ.ಆರ್	ಸದಸ್ಯರು	ತೆಲಗಿ	ಹರಪನಹಳ್ಳಿ
4	ಸಿ. ಸುರೇಂದ್ರನಾಯ್ಕ	ಸದಸ್ಯರು	ಬೇಲಿಮಲ್ಲೂರು	ಹೊನ್ನಾಳಿ
5	ವೈ. ಸುಶೀಲಮ್ಮ ದೇವೆಂದ್ರಪ್ಪ	ಸದಸ್ಯರು	ಅರಸೀಕೆರೆ	ಹರಪನಹಳ್ಳಿ
6	ಅರ್ಚನಾ ಬಸವರಾಜ	ಸದಸ್ಯರು	ಕೊಂಡಜ್ಜಿ	ಹರಿಹರ
7	ಗೀತಾ ಗಂಗಾನಾಯ್ಕ	ಸದಸ್ಯರು	ಅಣಜಿ	ದಾವಣಗೆರೆ

(ದಿನಾಂಕ :15–03–2018 ರಿಂದ 31–03–2018ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಎಂ. ಆರ್. ಮಹೇಶ್	ಅಧ್ಯಕ್ಷರು	ಬೆಳಗುತ್ತಿ	ಹೊನ್ನಾಳಿ
2	ರಶ್ಮಿ. ಜಿ.ರಾಜಪ್ಪ	ಸದಸ್ಯರು	ಉಚ್ಚಂಗಿದುರ್ಗ	ಹರಪನಹಳ್ಳಿ
3	ಸಿ. ಸುರೇಂದ್ರನಾಯ್ಕ	ಸದಸ್ಯರು	ಬೇಲಿಮಲ್ಲೂರು	ಹೊನ್ನಾಳಿ
4	ನಿರ್ಮಲ ಮುಕುಂದ ಟಿ	ಸದಸ್ಯರು	ಬೆಳ್ಳೊಡಿ	ಹರಿಹರ
5	ಮಂಜುನಾಥ ಉತ್ತಂಗಿ	ಸದಸ್ಯರು	ಚಿಗಟೇರಿ	ಹರಪನಹಳ್ಳಿ
6	ಅರ್ಚನಾ ಬಸವರಾಜ	ಸದಸ್ಯರು	ಕೊಂಡಜ್ಜಿ	ಹರಿಹರ
7	ಶ್ರೀ ಡಿ.ಸಿದ್ದಪ್ಪ	ಸದಸ್ಯರು	ಕಂಚಿಕೆರೆ	ಹರಪನಹಳ್ಳಿ

4. ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

(ದಿನಾಂಕ :01–04–2017 ರಿಂದ 14–03–2018 ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಪಿ. ವಾಗೀಶ್	ಅಧ್ಯಕರು	ಸಂತೇಬೆನ್ನೂರು	ಚನ್ನಗಿರಿ
2	ನಿರ್ಮಲ ಮುಕುಂದ ಟಿ	ಸದಸ್ಯರು	ಬೆಳ್ಳೊಡಿ	ಹರಿಹರ
3	ಬಸವರಾಜ ಕೆ. ಎಸ್ (ಬಸವಂತಪ್ಪ)	ಸದಸ್ಯರು	ಆನಗೋಡು	ದಾವಣಗೆರೆ
4	ಎಂ. ಆರ್. ಮಹೇಶ್	ಸದಸ್ಯರು	ಬೆಳಗುತಿ	ಹೊನ್ನಾಳಿ
5	ಮಂಜುಳ ಕೆ. ಟಿ.ವಿ. ರಾಜು	ಸದಸ್ಯರು	ಹೊನ್ನೆಬಾಗಿ	ಚನ್ನಗಿರಿ
6	ದೀಪ ಜಗದೀಶ್	ಸದಸ್ಯರು	ಕುಂದೂರು	ಹೊನ್ನಾಳಿ
7	ಮಂಜುನಾಥ ಉತ್ತಂಗಿ	ಸದಸ್ಯರು	ಚಿಗಟೇರಿ	ಹರಪನಹಳ್ಳಿ

(ದಿನಾಂಕ :15–03–2018ರಿಂದ 31–03–2018ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಬಿ.ಎಂ. ವಾಗೀಶಸ್ವಾಮಿ	ಅಧ್ಯಕ್ಷರು	ಭಾನುವಳ್ಳಿ	ಹರಿಹರ
2	ದೀಪ ಜಗದೀಶ್	ಸದಸ್ಯರು	ಕುಂದೂರು	ಹೊನ್ನಾಳಿ
3	ರೇಣುಕಾ ಬಿ ಕರಿಬಸಪ್ಪ	ಸದಸ್ಯರು	ಕಕ್ಕರಗೊಳ್ಳ	ದಾವಣಗೆರೆ
4	ಎನ್.ಜಿ. ನಟರಾಜ	ಸದಸ್ಯರು	ಮಾಯಕೊಂಡ	ದಾವಣಗೆರೆ
5	ಕೆ.ವಿ. ಶಾಂತಕುಮಾರಿ	ಸದಸ್ಯರು	ದೊಣ್ಣೆಹಳ್ಳಿ	ಜಗಳೂರು
6	ಉಮಾ ಎಂ.ಪಿ ರಮೇಶ್	ಸದಸ್ಯರು	ನ್ಯಾಮತಿ	ಹೊನ್ನಾಳಿ
7	ಯಶೋಧಮ್ಮ ಮರುಳಪ್ಪ	ಸದಸ್ಯರು	ಹೊದಿಗೆರೆ	ಚನ್ನಗಿರಿ

5. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

(ದಿನಾಂಕ :01–04–2017 ರಿಂದ 14–03–2018 ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಎಸ್.ಕೆ. ಮಂಜುನಾಥ	ಅಧ್ಯಕ್ಷರು	ಸೊಕ್ಕೆ	ಜಗಳೂರು
2	ಎಂ. ಯೋಗೇಶ್	ಸದಸ್ಯರು	ತಾವರೆಕೆರೆ	ಚನ್ನಗಿರಿ
3	ಕೆ. ಹೆಚ್. ಓಬಳಪ್ಪ	ಸದಸ್ಯರು	ಲೋಕಿಕೆರೆ	ದಾವಣಗೆರೆ
4	ಹೇಮಾವತಿ ವಿ.ಡಿ	ಸದಸ್ಯರು	ಸಿರಿಗೆರೆ	ಹರಿಹರ
5	ಯಶೋಧಮ್ಮ ಮರುಳಪ್ಪ	ಸದಸ್ಯರು	ಹೊದಿಗೆರೆ	ಚನ್ನಗಿರಿ
6	ಜೆ. ಸವಿತಾ	ಸದಸ್ಯರು	ಅಣಬೂರು	ಜಗಳೂರು
7	ಲೋಕೇಶ್ವರ	ಸದಸ್ಯರು	ನಲ್ಲೂರು	ಚನ್ನಗಿರಿ

(ದಿನಾಂಕ :15–03–2018 ರಿಂದ 31–03–2018ರವರೆಗೆ)

ಕ್ರ.ಸಂ.	ಹೆಸರು ಶ್ರೀ/ಶ್ರೀಮತಿ	ಸ್ಥಾನ	ಪ್ರತಿನಿಧಿಸುವ ಕ್ಷೇತ್ರ	ತಾಲ್ಲೂಕು
1	ಜೆ.ಸವಿತಾ	ಅಧ್ಯಕ್ಷರು	ಅಣಬೂರು	ಜಗಳೂರು
2	ಸಾಕಮ್ಮ ಬಿ.ಎಸ್	ಸದಸ್ಯರು	ಕೋಗಲೂರು	ಚನ್ನಗಿರಿ
3	ಉಮಾ ವೆಂಕಟೇಶ್	ಸದಸ್ಯರು	ಬಿಳಿಚೋಡು	ಜಗಳೂರು
4	ಪಿ. ವಾಗೀಶ್	ಸದಸ್ಯರು	ಸಂತೇಬೆನ್ನೂರು	ಚನ್ನಗಿರಿ
5	ಎಸ್.ಕೆ. ಮಂಜುನಾಥ	ಸದಸ್ಯರು	ಸೊಕ್ಕೆ	ಜಗಳೂರು
6	ಲೋಕೇಶ್ವರ	ಸದಸ್ಯರು	ನಲ್ಲೂರು	ಚನ್ನಗಿರಿ
7	ವೈ. ಸುಶೀಲಮ್ಮ ದೇವೆಂದ್ರಪ್ಪ	ಸದಸ್ಯರು	ಅರಸೀಕೆರೆ	ಹರಪನಹಳ್ಳಿ

ಜಿಲ್ಲಾ ಪಂಚಾಯತ್, ದಾವಣಗೆರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ಹುದ್ದೆಗಳ ವಿವರಗಳು

ಕ್ರ ಸಂ.	ಪದನಾಮ	ಹುದ್ದೆಗಳ ಸಂಖ್ಯೆ			
		ಸಮೂಹ	ಮಂಜೂರಾದ	ಕಾರ್ಯ ನಿರ್ವಹಿಸುತ್ತಿರುವ	ಖಾಲಿ
1	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಎ	1	1	0
2	ಉಪ ಕಾರ್ಯದರ್ಶಿ	ಎ	1	1	0
3	ಮುಖ್ಯ ಯೋಜನಾಧಿಕಾರಿ	ಎ	1	1	0
4	ಮುಖ್ಯ ಲೆಕ್ಕಾಧಿಕಾರಿ	ಎ	1	1	0
5	ಯೋಜನಾ ನಿರ್ದೇಶಕರು	ಎ	1	0	1
6	ಸಹಾಯಕ ಕಾರ್ಯದರ್ಶಿ	ಎ	1	1	0
7	ಯೋಜನಾ ಅಂದಾಜು &ಮೌಲ್ಯಮಾಪನಾಧಿಕಾರಿ	ಎ	1	1	0
8	ಶಿಕ್ಷಣಾಧಿಕಾರಿ (ಅ.ದಾ.ಕಾ)	ಎ	1	1	0
9	ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ)	ಎ	1	1	0
10	ಲೆಕ್ಕಾಧಿಕಾರಿ	ಎ	2	1	1
11	ಸಹಾಯಕ ಯೋಜನಾಧಿಕಾರಿ (ಎಸ್.ಜಿ.ಎಸ್.ವೈ)	ಬಿ	1	1	0
12	ತಾಲ್ಲೂಕು ಯೋಜನಾಧಿಕಾರಿ	ಬಿ	6	2	4
13	ಲೆಕ್ಕಾಧೀಕ್ಷಕರು	ಬಿ	4	4	0
14	ವ್ಯವಸ್ಥಾಪಕರು	ಸಿ	3	3	0
15	ಸಹಾಯಕ ಸಾಂಖ್ಯಿಕ ಅಧಿಕಾರಿ	ಸಿ	1	1	0
16	ಪ್ರಥಮ ದರ್ಜೆ ಸಹಾಯಕರು *	ಸಿ	9	9	0
17	ಪ್ರಥಮ ದರ್ಜೆ ಲೆಕ್ಕ ಸಹಾಯಕರು	ಸಿ	11	6	5
18	ಪ್ರಥಮ ದರ್ಜೆ ಸಹಾಯಕರು (ಅ.ದಾ.ಕಾ)	ಸಿ	1	1	0
19	ಶೀಘ್ರಲಿಪಿಗಾರರು **	ಸಿ	7	3	4
20	ಡಾಟಾ ಎಂಟ್ರಿ ಆಪರೇಟರ್ **	ಸಿ	1	0	1
21	ತಾಂತ್ರಿಕ ಸಹಾಯಕ	ಸಿ	1	0	1
22	ಕಿರಿಯ ಇಂಜಿನಿಯರ್	ಸಿ	4	2	2
23	ವಾಹನ ಚಾಲಕ	ಸಿ	5	4	1
24	ರೆಕಾರ್ಡ್ ಕೀಪರ್ **	ಸಿ	1	1	0
25	ದ್ವಿತೀಯ ದರ್ಜೆ ಸಹಾಯಕರು	ಸಿ	13	4	9
26	ಬೆರಳಚ್ಚುಗಾರರು	ಸಿ	7	0	7
27	ಡಿ.ಗ್ರೂಪ್	ಡಿ	15	7	8
		ಒಟ್ಟು	**99**	**57**	**44**

**ಖಾಲಿ ಇರುವ ಹುದ್ದೆಗಳಿಗೆ ಹೊರ ಸಂಪನ್ಮೂಲದಿಂದ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಸೇವೆಯನ್ನು ಪಡೆಯಲಾಗಿದೆ.

1. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು

I. ಗ್ರಾಮೀಣ ವಸತಿ ಯೋಜನೆಗಳು :

1) ಬಸವ ವಸತಿ ಯೋಜನೆ :

2017–18ನೇ ಸಾಲಿಗೆ ಬಸವ ವಸತಿ ಯೋಜನೆಯಡಿ ಇದುವರೆಗೂ ಒಟ್ಟು 3,670 ಫಲಾನುಭವಿಗಳಿಗೆ ಅನುಮೋದನೆ ಪಡೆಯಲಾಗಿದ್ದು, 2017–18ನೇ ಸಾಲಿನ ಮಾರ್ಚ್–2018ರ ಅಂತ್ಯಕ್ಕೆ 68 ಮನೆಗಳನ್ನು ಪೂರ್ಣಗೊಳಿಸಲಾಗಿದೆ. 1,636 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, 1,929 ಮನೆಗಳ ನಿರ್ಮಾಣ ಪ್ರಾರಂಭ ಮಾಡಬೇಕಾಗಿರುತ್ತದೆ.

2) ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ :

2017–18ನೇ ಸಾಲಿಗೆ ಒಟ್ಟು 5,233 ಫಲಾನುಭವಿಗಳಿಗೆ ಅನುಮೋದನೆ ಪಡೆಯಲಾಗಿದ್ದು, 2017–18ನೇ ಸಾಲಿನ ಮಾರ್ಚ್–2018ರ ಅಂತ್ಯಕ್ಕೆ ಒಟ್ಟು 63 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ 1,345 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, 3,676 ಮನೆಗಳ ನಿರ್ಮಾಣ ಪ್ರಾರಂಭ ಮಾಡಬೇಕಾಗಿರುತ್ತದೆ.

3) ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ):

2017–18ನೇ ಸಾಲಿಗೆ ಒಟ್ಟು 621 ಫಲಾನುಭವಿಗಳಿಗೆ ಅನುಮೋದನೆ ಪಡೆಯಲಾಗಿದ್ದು, 2017–18ನೇ ಸಾಲಿನ ಮಾರ್ಚ್–2018ರ ಅಂತ್ಯಕ್ಕೆ ಒಟ್ಟು 14 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ 190 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, 406 ಮನೆಗಳ ನಿರ್ಮಾಣ ಪ್ರಾರಂಭ ಮಾಡಬೇಕಾಗಿರುತ್ತದೆ.

4) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :

ಜಿಲ್ಲೆಯಲ್ಲಿ 2017–18ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೆ ಒಟ್ಟು 2,26,349 ಕುಟುಂಬಗಳು ನೋಂದಾಣಿಯಾಗಿರುತ್ತವೆ. ಪ್ರಸಕ್ತ ಸಾಲಿನಲ್ಲಿ 79,018 ಕುಟುಂಬಗಳು ಉದ್ಯೋಗ ಬೇಡಿಕೆ ಸಲ್ಲಿಸಿದ್ದು, ಈ ಪೈಕಿ 77,758 ಕುಟುಂಬಗಳಿಗೆ ಉದ್ಯೋಗವನ್ನು ಕಲ್ಪಿಸಿ ರೂ.35.02 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2017–18ನೇ ಸಾಲಿಗೆ ದಾವಣಗೆರೆ ಜಿಲ್ಲೆಗೆ ರೂ.16,936.23 ಲಕ್ಷ ಮೊತ್ತಕ್ಕೆ ಮುಂಗಡ ಕಾರ್ಮಿಕ ಆಯವ್ಯಯ ಅನುಮೋದನೆಯಾಗಿರುತ್ತದೆ. 2017–18ನೇ ಸಾಲಿಗೆ ಸರ್ಕಾರದಿಂದ ಜಿಲ್ಲೆಗೆ ಒಟ್ಟು ರೂ.13,305.27 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಪ್ರಾರಂಭ ಶಿಲ್ಕು ಸೇರಿದಂತೆ ಒಟ್ಟು ಲಭ್ಯವಿದ್ದ ಅನುದಾನದಲ್ಲಿ ಎಂ.ಐ.ಎಸ್. (ದಿನಾಂಕ:31–03–2018ರನ್ವಯ) ಪ್ರಕಾರ ಒಟ್ಟು ರೂ.13,305.27ಲಕ್ಷ ಅನುದಾನವನ್ನು ವೆಚ್ಚ ಮಾಡಿ, ವಿವಿಧ ವಲಯಗಳಿಂದ ಒಟ್ಟು 7,139 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

5) ಸ್ವಚ್ಛ ಭಾರತ ಮಿಷನ್ (SBM):

ಈ ಯೋಜನೆಯು ರಾಷ್ಟ್ರೀಯ ಮುಂಚೂಣಿ ಕಾರ್ಯಕ್ರಮಗಳಲ್ಲಿ ಅಗ್ರ ಪ್ರಾಶಸ್ತ್ಯ ಸ್ಥಾನ ಹೊಂದಿರುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಂಡು ಹೋಗುವುದು. ಪ್ರತಿ ಕುಟುಂಬವೂ ವೈಯಕ್ತಿಕ ಶೌಚಾಲಯ ನಿರ್ಮಿಸಿ ಬಳಸಲು ಉತ್ತೇಜಿಸುವುದು, ಬಯಲುಶೌಚ ನಿರ್ಮೂಲನೆ ಮಾಡುವುದು, ಪರಿಸರವನ್ನು ಕಾಪಾಡುವುದು, ತನ್ಮೂಲಕ ಗ್ರಾಮೀಣ ಸಮುದಾಯದ ಜೀವನ ಶೈಲಿಯನ್ನು ವಿಕಾಸಗೊಳಿಸುವಂತಹ ಮಹತ್ತರ ಉದ್ದೇಶ ಹೊಂದಿದ ಯೋಜನೆ ಇದಾಗಿರುತ್ತದೆ.

ಕೋಷ್ಟಕ 1.1 : ವೈಯಕ್ತಿಕ ಶೌಚಾಲಯಗಳ ಪ್ರಗತಿ

ಕ್ರ. ಸಂ.	ತಾಲ್ಲೂಕು	ಒಟ್ಟು ಕುಟುಂಬಗಳು	2017–18ರ ಪ್ರಗತಿ	31–03–2018ರವರೆಗೆ ಶೌಚಾಲಯ ಹೊಂದಿರುವ ಸಂಚಿತ ಕುಟುಂಬಗಳು	ಶೇಕಡ ಪ್ರಗತಿ.
1	ದಾವಣಗೆರೆ	52898	12115	52898	100
2	ಹರಿಹರ	37224	11247	37224	100
3	ಹೊನ್ನಾಳಿ	47115	2371	47115	100
4	ಚನ್ನಗಿರಿ	61885	11103	61885	100
5	ಜಗಳೂರು	32520	15520	32520	100
6	ಹರಪನಹಳ್ಳಿ	50636	25518	50636	100
ಒಟ್ಟು		**282278**	**77874**	**282278**	**100**

6) ಸಂಜೀವಿನಿ (ಎನ್.ಆರ್.ಎಲ್.ಎಂ./ಅಜೀವಿಕ) ಯೋಜನೆ :

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು (ಎಸ್.ಜಿ.ಎಸ್.ವೈ.) ಪುನರ್‌ರಚಿಸಿ ಕೇಂದ್ರ ಪುರಸ್ಕೃತ ಅಜೀವಿಕ–ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್ (ಎನ್.ಆರ್.ಎಲ್.ಎಂ) ಜಾರಿಗೊಳಿಸಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25ರ ಅನುಪಾತದಲ್ಲಿ ಭರಿಸುತ್ತದೆ. ರಾಜ್ಯ ಸರ್ಕಾರವು ಅಜೀವಿಕ ಯೋಜನೆಯನ್ನು ರಾಜ್ಯದಲ್ಲಿ ಕರ್ನಾಟಕ ಸ್ಟೇಟ್ ರೂರಲ್ ಲೈವ್ಲಿಹುಡ್ ಪ್ರಮೋಷನ್ ಸೊಸೈಟಿ (ಕೆ.ಎಸ್.ಆರ್.ಎಲ್.ಪಿ.ಎಸ್) ಮೂಲಕ ಯೋಜನೆಯನ್ನು "ಸಂಜೀವಿನಿ" ಎಂಬ ಹೆಸರಿನಲ್ಲಿ 2013–14ನೇ ಸಾಲಿನಿಂದ ಜಾರಿಗೊಳಿಸಲಾಗಿದೆ.

ಸಂಜೀವಿನಿ ಯೋಜನೆಯಲ್ಲಿ ಜಿಲ್ಲೆಯ ಎಲ್ಲಾ ಮಹಿಳಾ ಸ್ವ–ಸಹಾಯ ಗುಂಪುಗಳ ಮಾಹಿತಿಯನ್ನು ಸಂಗ್ರಹಿಸಿ ಪಂಚತಂತ್ರ ತಂತ್ರಾಂಶದಲ್ಲಿ 12,020 ಸ್ವಸಹಾಯ ಸಂಘಗಳನ್ನು ಅಳವಡಿಸಲಾಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಕೋಷ್ಟಕ 1.2 : ಸಂಜೀವಿನಿ ಸ್ವ–ಸಹಾಯ ಗುಂಪುಗಳು

ಕ್ರ.ಸಂ.	ತಾಲ್ಲೂಕು	ಗ್ರಾ.ಪಂ. ಸಂಖ್ಯೆ	ಪಂಚತಂತ್ರದಲ್ಲಿ ಅಳವಡಿಸಿದ ಸ್ವ–ಸಹಾಯ ಗುಂಪುಗಳ ಸಂಖ್ಯೆ
1	ಚನ್ನಗಿರಿ	61	2923
2	ದಾವಣಗೆರೆ	42	2609
3	ಹರಪನಹಳ್ಳಿ	37	1663
4	ಹರಿಹರ	24	1915
5	ಹೊನ್ನಾಳಿ	47	1454
6	ಜಗಳೂರು	22	1456
	ಒಟ್ಟು	**233**	**12020**

ತಳಮಟ್ಟದಲ್ಲಿ ಗ್ರಾಮೀಣ ಬಡ ಜನರಿಗೆ ಸ್ವ–ಉದ್ಯೋಗ ಹಾಗೂ ಕೌಶಲ್ಯಾಧಾರಿತ ಉದ್ಯೋಗಾವಕಾಶಗಳನ್ನು ಒದಗಿಸುವುದರ ಮೂಲಕ ನಿರಂತರ ಹಾಗೂ ಗಣನೀಯ ಆದಾಯ ಬರುವಂತೆ ಮಾಡುವುದೇ ಎನ್.ಆರ್.ಎಲ್.ಎಂ. ಯೋಜನೆಯ ಮುಖ್ಯ ಉದ್ದೇಶ. ಪಂಚತಂತ್ರದಲ್ಲಿ ಅಳವಡಿಸಿದ 11,957 ಸ್ವಸಹಾಯ ಗುಂಪುಗಳನ್ನು ಎ–ಗ್ರೇಡ್ ಪಡೆದ ಹಾಗೂ ಹಿಂದೆ ಯಾವುದೇ ಯೋಜನೆಯಡಿ ಸುತ್ತುನಿಧಿ ಪಡೆಯದೇ ಇರುವ 70 ಸ್ವಸಹಾಯ ಗುಂಪುಗಳಿಗೆ ಪ್ರತಿ ಗುಂಪಿಗೆ ರೂ.15,000–00 ಗಳನ್ನು ಆರ್.ಟಿ.ಜಿ.ಎಸ್. ಮೂಲಕ ಬಿಡುಗಡೆ ಮಾಡಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಕೋಷ್ಟಕ 1.3 : ಸಂಜೀವಿನಿ ಸ್ವ–ಸಹಾಯ ಗುಂಪುಗಳಿಗೆ ನೀಡಲಾಗದ ಸುತ್ತುನಿಧಿ

ಕ್ರ.ಸಂ.	ತಾಲ್ಲೂಕು	ಸ್ವ–ಸಹಾಯ ಸಂಘಗಳ ಸಂಖ್ಯೆ	ಒಟ್ಟು ಮೊತ್ತ
1	ಚನ್ನಗಿರಿ	104	15.60
2	ಹರಪನಹಳ್ಳಿ	62	9.30
3	ಹೊನ್ನಾಳಿ	75	11.25
4	ಜಗಳೂರು	34	5.10
5	ದಾವಣಗೆರೆ	62	9.30
6	ಹರಿಹರ	38	5.70
	ಒಟ್ಟು	**375**	**56.25**

7) ರಾಜೀವ್‌ಗಾಂಧಿ ಚೈತನ್ಯ ಯೋಜನೆ :

ರಾಜೀವ್‌ಗಾಂಧಿ ಚೈತನ್ಯ ಯೋಜನೆಯು ಪರ್ಯಾಯ ಆದಾಯ ವ್ಯವಸ್ಥೆ ಕಲ್ಪಿಸುವುದರ ಮೂಲಕ ನಿರುದ್ಯೋಗಿ ಯುವಜನರಲ್ಲಿ ಅಡಗಿರುವ ಸಾಮರ್ಥ್ಯವನ್ನು ಬಳಸಿಕೊಳ್ಳಲು ಯೋಜಿಸಿದೆ. ಇದರಿಂದ ಈ ಯುವಜನರು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಗ್ರಾಮದ ಆಸ್ತಿಯಾಗಿ ಪರಿವರ್ತನೆಗೊಳ್ಳುತ್ತಾರೆ.

ಈ ಯೋಜನೆಯು ಅಂತಿಮವಾಗಿ ನಿರುದ್ಯೋಗಿ ಯುವಜನರ ಅಂತಃಶಕ್ತಿಯನ್ನು ಅಭಿವೃದ್ಧಿಪಡಿಸಿ, ಲಾಭದಾಯಕ ವಿದ್ಯಾಮಾನಕ್ಕೆ ಸಹಾಯಕವಾಗಿ ಗ್ರಾಮೀಣ ಪ್ರದೇಶದ ಸಹಸ್ರಾರು ಯುವ ಜನರ ಜೀವನದ ಗುಣಮಟ್ಟ ಹೆಚ್ಚಿಸಲು ಕಾರಣವಾಗುತ್ತದೆ.

2017–18ನೇ ಸಾಲಿನಲ್ಲಿ ಸ್ವ–ಉದ್ಯೋಗ ಮತ್ತು ವೃತ್ತಿ ಕೌಶಲ್ಯ ಉದ್ಯೋಗ ಒದಗಿಸುವ ಕುರಿತು ರಾಜೀವ್‌ಗಾಂಧಿ ಚೈತನ್ಯ ಯೋಜನೆಯನ್ನು ಮುಂದುವರಿಸಿದ್ದು, ಈ ಯೋಜನೆಯಡಿ ಅನುಮತಿ ಪಡೆದಿದ್ದು, ಜಿಲ್ಲೆಯಲ್ಲಿ ಒಟ್ಟು ಮೂರು ಯೋಜನಾ ಬೆಂಬಲ ಸಂಸ್ಥೆ ಹಾಗೂ ನಾಲ್ಕು ಯೋಜನಾ ಅನುಷ್ಠಾನಗಳ ಒಡಂಬಡಿಕೆ ಮುಕ್ತಯವಾಗಿದ್ದು, ಪ್ರಸ್ತುತ ಕೆನರಾ ಬ್ಯಾಂಕ್ ಸ್ವ ಉದ್ಯೋಗ ತರಬೇತಿ ಕೇಂದ್ರ, ತೋಳಹುಣಸೆಯಿಂದ ತರಬೇತಿ ನೀಡಲಾಗುತ್ತಿದೆ.

ಕೋಷ್ಟಕ 1.4 : ಸ್ವ–ಉದ್ಯೋಗ ತರಬೇತಿ ಪಡೆದಿರುವ ಅಭ್ಯರ್ಥಿಗಳು

ಕ್ರ.ಸಂ.	ತಾಲ್ಲೂಕು	ತರಬೇತಿ ಪಡೆದ ಅಭ್ಯರ್ಥಿಗಳು
1	ಚನ್ನಗಿರಿ	348
2	ಹರಪನಹಳ್ಳಿ	211
3	ಜಗಳೂರು	125
4	ಹರಿಹರ	142
5	ಹೊನ್ನಾಳಿ	268
6	ದಾವಣಗೆರೆ	234
	ಒಟ್ಟು	**1328**

ಇಲ್ಲಿಯವರೆಗೆ ಬ್ಯಾಂಕುಗಳಿಂದ ಒಟ್ಟು 945 ಅರ್ಜಿಗಳು ಮಂಜೂರಾಗಿದ್ದು, ಸಂಬಂಧಪಟ್ಟ ಬ್ಯಾಂಕುಗಳಿಗೆ ಪ್ರತಿ ಫಲಾನುಭವಿಗಳಿಗೆ ರೂ.10,000–00 ದಂತೆ ಸಹಾಯಧನ ಬಿಡುಗಡೆ ಮಾಡಬೇಕಾಗುತ್ತಿದೆ. ಮತ್ತು ತರಬೇತಿ ನೀಡಿರುವುದರಿಂದ ಬ್ಯಾಂಕ್ ವ್ಯವಸ್ಥಾಪಕರು ಸಾಲ ಬಿಡುಗಡೆ ಮಾಡಿದ್ದು, ಫಲಾನುಭವಿಗಳು ಆಸ್ತಿ ನಿರ್ವಹಿಸಿದ್ದಾರೆ.

2. ಯೋಜನಾ ವಿಭಾಗ

1. ಜಿಲ್ಲಾ ವಾರ್ಷಿಕ ಕರಡು ಯೋಜನೆ :

ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳಿಂದ 2017–18ನೇ ಸಾಲಿನ ವಾರ್ಷಿಕ ಕರಡು ಯೋಜನೆಯ ಪ್ರಸ್ತಾವನೆಗಳನ್ನು ನಿಗದಿತ ನಮೂನೆಗಳಲ್ಲಿ ಪಡೆದು, ನಂತರ ಚುನಾಯಿತ ಪ್ರತಿನಿಧಿಗಳು ಮತ್ತು ಇಲಾಖೆಯ ಅಧಿಕಾರಿಗಳೊಂದಿಗೆ ಪ್ರತಿಯೊಂದು ಕಾರ್ಯಕ್ರಮಗಳಿಗೆ ಪ್ರಸ್ತಾಪಿಸಬೇಕಾದ ಅನುದಾನದ ಕುರಿತು ಚರ್ಚಿಸಿ ನಂತರ ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದು ಕರಡು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

2. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗು ಗ್ರಾಮ ಪಂಚಾಯತ್ ಕಾರ್ಯಕ್ರಮಗಳ ಯೋಜನೆ :

ಜಿಲ್ಲಾ ಪಂಚಾಯತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ, ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಯಿತು. ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಯಾ ಸಂಸ್ಥೆಗಳು ಕ್ರಿಯಾ ಯೋಜನೆಗಳನ್ನು ರೂಪಿಸಿ ಸಂಬಂಧಿಸಿದ ಸಾಮಾನ್ಯ ಸಭೆಯಲ್ಲಿ ಅನುಮೋದನೆಯನ್ನು ಪಡೆದುಕೊಂಡಿದ್ದು, ಸದರಿ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಲಾಯಿತು.

3. 2017–18ನೇ ಸಾಲಿಗೆ ಸರ್ಕಾರದಿಂದ ನಿಗದಿಯಾದ ಇಲಾಖಾವಾರು ಕ್ರಿಯಾ ಯೋಜನೆ ಅನುಮೋದನೆ :

ಸರ್ಕಾರದ ಇಲಾಖಾವಾರು ಅನುದಾನ ನಿಗದಿಪಡಿಸಿರುವ ಪ್ರಕಾರ ಇಲಾಖಾ ಮಾರ್ಗಸೂಚಿಗಳನುಸಾರ, 2017–18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಇಲಾಖಾವಾರು ಪಡೆದು ಪರಿಶೀಲಿಸಿ, ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ನೀಡಲಾಯಿತು ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

4. ರಸ್ತೆ ಮತ್ತು ಸೇತುವೆ, ಕಟ್ಟಡ ಹಾಗೂ ಸಣ್ಣ ನೀರಾವರಿ :

ರಸ್ತೆ ಮತ್ತು ಸೇತುವೆ, ಸಣ್ಣ ನೀರಾವರಿ ಹಾಗೂ ಕಟ್ಟಡಗಳು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಂತೆ ಅನುಷ್ಠಾನಾಧಿಕಾರಿಗಳನ್ನು ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಏಜೆನ್ಸಿಗಳನ್ನು ನಿಗದಿಗೊಳಿಸಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ದಾವಣಗೆರೆ/ಹರಪನಹಳ್ಳಿ ಇವರ ಮುಖಾಂತರ ಅನುಷ್ಠಾನಗೊಳಿಸಿ ಪ್ರತಿ ತಿಂಗಳು ನಡೆಯುವ ಕೆ.ಡಿ.ಪಿ/ಎಂಪಿಕ್ ಸಭೆಯಲ್ಲಿ ಪ್ರಗತಿ ಪರಿಶೀಲನೆ ನಡೆಸಲಾಗಿದೆ ಮತ್ತು ಸರ್ಕಾರಕ್ಕೆ ವರದಿ ನೀಡಲಾಗಿದೆ.

5. **ಎಂಪಿಕ್ ಅನುಮೋದನೆ ಮತ್ತು ಪರಿಶೀಲನೆ :**

ಸರ್ಕಾರದ ಮಾರ್ಗಸೂಚಿಯನ್ವಯ ಇಲಾಖಾವಾರು ಮತ್ತು ಕಾರ್ಯಕ್ರಮವಾರು ನಿಗದಿಪಡಿಸಲಾದ 2017–18ನೇ ಸಾಲಿನ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಅಗತ್ಯತೆಗಳಿನುಗುಣವಾಗಿ 12 ತಿಂಗಳಿಗೆ ಗುರಿ ನಿಗದಿಪಡಿಸಿ ಸಲ್ಲಿಸಲಾದ ಇಲಾಖಾವಾರು ಎಂಪಿಕ್ ವರದಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು ಮತ್ತು ಎಂಪಿಕ್ ಪ್ರಕಾರ ವೆಚ್ಚ ಮಾಡಲು ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಯಿತು.

6. **ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ :**

ಜಿಲ್ಲೆಯಲ್ಲಿನ ಪ್ರತಿ ಇಲಾಖೆಗಳು ತಮ್ಮ ತಮ್ಮ ಕಾರ್ಯಕ್ರಮಗಳಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ ಚರ್ಚಿಸಲು ಪ್ರತಿ ತಿಂಗಳು ಜಿಲ್ಲಾ ಪಂಚಾಯತ್ ಅಧ್ಯಕ್ಷರ, ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಸದರಿ ಸಭೆಗಳಲ್ಲಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರು, ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು ಹಾಜರಾಗಿರುತ್ತಾರೆ. ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಾಗಿರುತ್ತಾರೆ. ಪ್ರತಿ ತಿಂಗಳು ಪ್ರಗತಿ ಪರಿಶೀಲನೆಯನ್ನು ವಿವರವಾಗಿ ನಡೆಸಲಾಗುತ್ತದೆ. ಎಲ್ಲಾ ಇಲಾಖೆಯವರು ಶೇ.100ರಷ್ಟು ಪ್ರಗತಿಯನ್ನು ಸಾಧಿಸಲು ಸೂಚಿಸಲಾಗಿರುತ್ತದೆ.ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ಕೆ.ಡಿ.ಪಿ ಸಭೆಗಳನ್ನು ನಡೆಸಲಾಗಿರುತ್ತದೆ. ಸದರಿ ಸಭೆಗಳಲ್ಲಿ ಮಾನ್ಯ ಲೋಕಸಭಾ ಸದಸ್ಯರು, ವಿಧಾನಸಭಾ ಶಾಸಕರು, ವಿಧಾನ ಪರಿಷತ್ ಶಾಸಕರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತಿಯ ಸ್ಥಾಯಿ ಸಮಿತಿ ಅಧ್ಯಕ್ಷರುಗಳು ಮತ್ತು ನಾಮ ನಿರ್ದೇಶಿತ ಸದಸ್ಯರುಗಳು ಹಾಜರಾಗಿರುತ್ತಾರೆ.

7. ಜಿಲ್ಲಾ ಪಂಚಾಯತ್ ಆಡಳಿತ ವರದಿ :

ದಾವಣಗೆರೆ ಜಿಲ್ಲಾ ಪಂಚಾಯತಿಯ 2016–17ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ನಿಗದಿತ ಸಮಯಲ್ಲಿ ತಯಾರಿಸಿದ್ದು, ಸದರಿ ವರದಿಗಳನ್ನು ಸರ್ಕಾರಕ್ಕೆ ಮತ್ತು ಜಿಲ್ಲೆಯ ಮಾನ್ಯ ಜಿಲ್ಲಾ ಉಸ್ತುವರಿ ಸಚಿವರು, ಲೋಕಸಭಾ ಸದಸ್ಯರು, ಮಾನ್ಯ ಶಾಸಕರುಗಳು ಮತ್ತು ಜಿಲ್ಲಾ ಪಂಚಾಯತ್ ಸದಸ್ಯಗಳಿಗೆ ನೀಡಲಾಗಿದೆ ಹಾಗೂ ಎಲ್ಲಾ ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

8. ಗ್ರಾಮ ವಿಕಾಸ ಯೋಜನೆ :

ಕರ್ನಾಟಕ ಸರ್ಕಾರವು "ಸುವರ್ಣ ಗ್ರಾಮೋದಯ" ಬದಲಾಗಿ "ಗ್ರಾಮ ವಿಕಾಸ ಯೋಜನೆ"ಯನ್ನು ಜಾರಿಗೆ ತಂದಿದ್ದು, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರೂ. 375.00 ಲಕ್ಷ ಅನುದಾನವನ್ನು ನಿಗದಿಪಡಿಸಿ ಮಾರ್ಗಸೂಚಿ ಪ್ರಕಾರ ದಾವಣಗೆರೆ ಜಿಲ್ಲೆಯ 8 ವಿಧಾನಸಭ ಕ್ಷೇತ್ರಗಳಿಂದ 37 ಗ್ರಾಮಗಳನ್ನು ಆಯ್ಕೆ ಮಾಡಿದ್ದು, ಸದರಿ 37 ಗ್ರಾಮಗಳಲ್ಲಿ ಕ್ರಿಯಾ ಯೋಜನೆಯಂತೆ ಎಲ್ಲಾ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಸರ್ಕಾರದಿಂದ ಒಟ್ಟು ರೂ. 3000.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ರೂ. 2150.00 ಲಕ್ಷ ಅನುದಾನ ಖರ್ಚು ಮಾಡಲಾಗಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಕೋಷ್ಟಕ 2.1 : ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮಗಳು

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರ	ಆಯ್ಕೆಯಾದ ಗ್ರಾಮಗಳು	ಅನುದಾನ ಬಿಡುಗಡೆ ಮಾಡಿದ ಗ್ರಾಮ ಪಂಚಾಯಿತಿ ಹೆಸರು	ನಿಗದಿಪಡಿಸಿದ ಅನುದಾನ	ಬಿಡುಗಡೆ ಗೊಳಿಸಲಾದ ಅನುದಾನ	ಖರ್ಚಾದ ಅನುದಾನ
1	2	3	4	5	6	7
1	ದಾವಣಗೆರೆ (ಉತ್ತರ)	ಆವರಗೊಳ್ಳ	ಆವರಗೊಳ್ಳ	154.09	154.09	117.74
		ಕೋಡಿಹಳ್ಳಿ	ಕಕ್ಕರಗೊಳ್ಳ	66.82	66.82	30.00
		ಓಬಜ್ಜಿಹಳ್ಳಿ	ಕಡ್ಲೇಬಾಳು	154.09	154.09	86.95
			ಒಟ್ಟು	375.00	375.00	234.69
2	ದಾವಣಗೆರೆ (ದಕ್ಷಿಣ)	ತರಳಬಾಳು ನಗರ	ಬೆಳವನೂರು	60.82	60.82	30.00
		ಬಟ್ಲಗಟ್ಟಿ	ಹದಡಿ	66.82	66.82	33.00
		ಹೊಸ ಬಿಸಲೇರಿ &ಬೂದೇನಪುರ ಕ್ಯಾಂಪ್	ಮುದಹದಡಿ	89.78	89.78	40.00
		ಬಲ್ಲೂರು	ಕನಗೊಂಡನಹಳ್ಳಿ	89.78	89.78	40.00
		ನಾಗರಸನಹಳ್ಳಿ	ಕುಕ್ಕವಾಡ	67.80	67.80	33.00
			ಒಟ್ಟು	375.00	375.00	176.00
3	ಮಾಯಕೊಂಡ	ಹಿಂಡಸಘಟ್ಟ	ಹುಚ್ಚವ್ವನಹಳ್ಳಿ	70.27	70.27	56.00
		ಕಾತಿಪುರ	ಮಳಲ್ಕೆರೆ	96.19	96.19	75.00
		ನರಸಿಪುರ	ಆನಗೋಡು	37.65	37.65	30.12
		ಕೋಟಿಹಾಳ್	ಕೋಟಿಹಾಳ್	96.19	96.19	76.94
		ಚಿಕ್ಕಕುರುಬರಹಳ್ಳಿ	ಬೆಳಲಗೆರೆ	74.70	74.70	60.00
			ಒಟ್ಟು	375.00	375.00	298.06
4	ಹರಿಹರ	ಕಮಲಾಪುರ	ಯಲವಟ್ಟಿ	75.00	75.00	54.50
		ದೀಟೂರು	ಗುತ್ತೂರು	75.00	75.00	53.76
		ಎಳೆಹೊಳೆ	ಎಳೆಹೊಳೆ	75.00	75.00	55.25
		ನಾಗೇನಹಳ್ಳಿ	ರಾಜನಹಳ್ಳಿ	75.00	75.00	48.25
		ದೇವರಬೆಳಕೆರೆ	ದೇವರಬೆಳಕೆರೆ	75.00	75.00	71.25
			ಒಟ್ಟು	375.00	375.00	283.01
5	ಹೊನ್ನಾಳಿ	ಕೋಣನತೆಲೆ	ಹಿರೇಗೋಣಿಗೆರೆ	93.75	93.75	79.69
		ದೊಡ್ಡೇರಹಳ್ಳಿ	ಹತ್ತೂರು	93.75	93.75	79.68
		ಗೊಲ್ಲರಹಳ್ಳಿ	ಮಾಸಡಿ	93.75	93.75	79.68
		ಘಂಟ್ಯಾಪುರ	ಕಮ್ಮರಗಟ್ಟ	93.75	93.75	79.68
			ಒಟ್ಟು	375.00	375.00	318.73

ಕ್ರ. ಸಂ.	ವಿಧಾನಸಭಾ ಕ್ಷೇತ್ರ	ಆಯ್ಕೆಯಾದ ಗ್ರಾಮಗಳು	ಅನುದಾನ ಬಿಡುಗಡೆ ಮಾಡಿದ ಗ್ರಾಮ ಪಂಚಾಯಿತಿ ಹೆಸರು	ನಿಗದಿಪಡಿಸಿದ ಅನುದಾನ	ಬಿಡುಗಡೆ ಗೊಳಿಸಲಾದ ಅನುದಾನ	ಖರ್ಚಾದ ಅನುದಾನ
1	2	3	4	5	6	7
6	ಹರಪನಹಳ್ಳಿ	ಮಾದಾಪುರ	ಕೂಲಹಳ್ಳಿ	75.00	75.00	52.29
		ನಿಚ್ಚವ್ವನಹಳ್ಳಿ	ನಿಚ್ಚವ್ವನಹಳ್ಳಿ	75.00	75.00	37.18
		ಇಟ್ಟಿಗುಡಿ	ಕೆ.ಕಲ್ಲಹಳ್ಳಿ	75.00	75.00	63.10
		ತಾವರೆಗುಂದಿ	ನಿಟ್ಟೂರು	75.00	75.00	57.98
		ಶಿವಪುರ	ಚಿರಸ್ತಹಳ್ಳಿ	75.00	75.00	46.90
			ಒಟ್ಟು	375.00	375.00	257.45
7	ಚನ್ನಗಿರಿ	ಮೇದುಗೊಂಡನಹಳ್ಳಿ	ಮರವಂಜಿ	70.50	70.50	56.40
		ರಾಜಗೊಂಡನಹಳ್ಳಿ	ರಾಜಗೊಂಡನಹಳ್ಳಿ	82.39	82.39	65.68
		ರಾಮಗೊಂಡನಹಳ್ಳಿ	ದೇವರಹಳ್ಳಿ	73.95	73.95	60.00
		ಬೆಂಕಿಕೆರೆ	ಹೆಬ್ಬಳಗೆರೆ	82.39	82.39	65.90
		ಶೆಟ್ಟಿಹಳ್ಳಿ	ಕೊರಟೀಕೆರೆ	65.77	65.77	52.63
			ಒಟ್ಟು	375.00	375.00	300.61
8	ಜಗಳೂರು	ಚಿಕ್ಕಬಂಟನಹಳ್ಳಿ	ಸೊಕ್ಕೆ	54.15	54.15	43.33
		ತಮಲೇಹಳ್ಳಿ	ಹನುಮಂತಾಪುರ	114.95	114.95	57.00
		ಉರ್ಲಕಟ್ಟೆ	ದಿದ್ದಿಗಿ	42.90	42.90	37.56
		ತಿಮ್ಲಾಪುರ	ಅರಸೀಕೆರೆ(ಹ.ಹಳ್ಳಿ ತಾ)	63.00	63.00	27.50
		ಪುಣಬಗಟ್ಟ	ಪುಣಬಗಟ್ಟ(ಹ.ಹಳ್ಳಿ ತಾ)	100.00	100.00	80.00
			ಒಟ್ಟು	375.00	375.00	137.89
			ಒಟ್ಟಾರೆ	3000.00	3000.00	2006.44

9. ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ :

ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ದಾವಣಗೆರೆ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರದಿಂದ ಒಟ್ಟು 38 ಗ್ರಾಮಗಳು ಆಯ್ಕೆ ಆಗಿದ್ದು, ಪ್ರತಿ ಗ್ರಾಮಕ್ಕೆ ರೂ. 100.00 ಲಕ್ಷ ಅನುದಾನ ನಿಗದಿಯಾಗಿರುತ್ತದೆ. ಈಗಾಗಲೇ 38 ಗ್ರಾಮಗಳ ಕ್ರಿಯಾ ಯೋಜನೆಗೆ ಮತ್ತು ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡಲಾಗಿದ್ದು, ಸರ್ಕಾರದಿಂದ ರೂ. 1,409.08 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಕೋಷ್ಟಕ 2.2 : ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮಗಳು

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಕ್ರ.ಸಂ.	ಆಯ್ಕೆಯಾದ ಗ್ರಾಮ	ನಿಗದಿಪಡಿಸಿದ ಅನುದಾನ	ಬಿಡುಗಡೆ ಮಾಡಿದ ಅನುದಾನ
1	ದಾವಣಗೆರೆ (ದಕ್ಷಿಣ)	1	ತುರ್ಚಘಟ್ಟ	100.00	37.045
		2	ಹೊಸನಾಯಕನಹಳ್ಳಿ	100.00	37.045
		3	ಬೆಡಗನಹಳ್ಳಿ	100.00	37.045
		4	ಕೊಳ್ಳೇನಹಳ್ಳಿ	100.00	37.045
			ಒಟ್ಟು	400.00	148.180
2	ದಾವಣಗೆರೆ (ಉತ್ತರ)	5	ಹಳೇಬಾತಿ ಗುಡ್ಡದ ಕ್ಯಾಂಪ್	100.00	37.045
		6	ದೇವರಹಟ್ಟಿ	100.00	37.045
		7	ಮಾಳಗೊಂಡನಹಳ್ಳಿ	100.00	37.045
		8	ನಾಗರಕಟ್ಟಿ	100.00	37.045
			ಒಟ್ಟು	400.00	148.180
3	ಚನ್ನಗಿರಿ	9	ನಲ್ಲೂರು	100.00	37.045
		10	ಕೆರೆಬಿಳಚಿ	100.00	37.045
		11	ಕರೆಕಟ್ಟೆ	100.00	37.045
		12	ಸಂತೇಬೆನ್ನೂರು	100.00	37.045
			ಒಟ್ಟು	400.00	148.180

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಕ್ರ.ಸಂ.	ಆಯ್ಕೆಯಾದ ಗ್ರಾಮ	ನಿಗದಿಪಡಿಸಿದ ಅನುದಾನ	ಬಿಡುಗಡೆ ಮಾಡಿದ ಅನುದಾನ
4	ಮಾಯಕೊಂಡ	13	ಅರೇಹಳ್ಳಿ	100.00	37.045
		14	ತ್ಯಾವಣಿಗಿ ತಾಂಡ	100.00	37.050
		15	ಶ್ರೀರಾಮನಗರ ಕ್ಯಾಂಪ್ (ಕವಳಿ ತಾಂಡ)	100.00	37.050
		16	ಕಂಚುಗಾರನಹಳ್ಳಿ	100.00	37.055
			ಒಟ್ಟು	400.00	148.200
5	ಹೊನ್ನಾಳಿ	17	ಕುಂದೂರು	100.00	37.050
		18	ಸುರಹೊನ್ನೆ	100.00	37.050
		19	ಸೊಗಿಲು	100.00	37.050
		20	ಸಾಸ್ವೇಹಳ್ಳಿ	100.00	37.050
			ಒಟ್ಟು	400.00	148.200
6	ಹರಪನಹಳ್ಳಿ	21	ನೀಲಗುಂದ	100.00	37.050
		22	ಬೆಣ್ಣೆಹಳ್ಳಿ	100.00	37.050
		23	ಅರಸನಾಳು	100.00	37.050
		24	ಸೇವಾನಗರ (ಬೆಂಡಿಗೇರಿ ದೊಡ್ಡತಾಂಡ)	100.00	37.050
			ಒಟ್ಟು	400.00	148.200
7	ಜಗಳೂರು	25	ಸಿದ್ದಯ್ಯನಕೋಟೆ	100.00	37.102
		26	ಚಿಕ್ಕಉಜ್ಜನಿ	100.00	37.102
		27	ಸಂತೆಮುದ್ದಾಪುರ	100.00	37.102
		28	ಚಿಕ್ಕಮ್ಮನಹಟ್ಟಿ	100.00	37.102
		29	ಜಿಟ್ಟಿನಕಟ್ಟೆ	100.00	37.102
			ಒಟ್ಟು	500.00	185.510
8	ಹರಿಹರ	30	ಸಂಕ್ಲೀಪುರ	100.00	37.047
		31	ಹಿಂಡಸಘಟ್ಟ	100.00	37.047
		32	ಬೇವಿನಹಳ್ಳಿ	100.00	37.047
		33	ಚಿಕ್ಕಬಿದರಿ	100.00	37.047
		34	ಕರಲಹಳ್ಳಿ	100.00	37.047
		35	ಕೊಂಡಜ್ಜಿ	100.00	37.047
		36	ಉಕ್ಕಡಗಾತ್ರಿ	100.00	37.047
		37	ಭಾನುವಳ್ಳಿ	100.00	37.047
		38	ಪಾಳ್ಯ(ಹೊಸಪಾಳ್ಯ)	100.00	37.054
			ಒಟ್ಟು	900.00	333.430
			ಒಟ್ಟು	3800.00	1408.080
1	ಎಸ್.ಸಿ. ಅನುದಾನ	1	ದೊಡ್ಡರಂಗವ್ವನಹಳ್ಳಿ	100.00	100.00
2	ಮುಖ್ಯಮಂತ್ರಿ ಮಾದರಿ ಗ್ರಾಮ	2	ಮಾಸನ	100.00	100.00
3	ಮುಖ್ಯಮಂತ್ರಿ ಮಾದರಿ ಗ್ರಾಮ	3	ಗುತ್ತೂರು	100.00	100.00
			ಒಟ್ಟು	300.00	300.00

3. ಸಾರ್ವಜನಿಕ ಶಿಕ್ಷಣ ಇಲಾಖೆ

ದಾವಣಗೆರೆ ಜಿಲ್ಲೆಯು ಕರ್ನಾಟಕ ಹೃದಯ ಭಾಗದಲ್ಲಿದ್ದು ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ಮಹತ್ವ ಹೊಂದಿದೆ ಜಿಲ್ಲೆಯ 1,288 ಜನವಸತಿ ಪ್ರದೇಶಗಳಲ್ಲಿಯೂ ನಿಯಾಮಾನುಸಾರ ಶಾಲಾ ಸೌಲಭ್ಯ ಹೊಂದಿದ್ದು,6 ವರ್ಷದಿಂದ 16 ವರ್ಷದ ವಯೋಮಾನದ ಶೇ.96 ರಷ್ಟು ಮಕ್ಕಳು ಪ್ರಾಥಮಿಕ ಮತ್ತು ಪ್ರೌಢ ಶಾಲೆಗೆ ಮಕ್ಕಳು ದಾಖಲಾತಿ ಪಡೆದು ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಈ ಎಲ್ಲಾ ಮಕ್ಕಳಿಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವಿವಿಧ ಯೋಜನೆಗಳಾದ ಸರ್ವ ಶಿಕ್ಷಣ ಅಭಿಯಾನ, ಅಕ್ಷರ ದಾಸೋಹ, ಕ್ಷೀರ ಭಾಗ್ಯ ಯೋಜನೆಗಳಡಿ ಇತರೆ ಪ್ರೋತ್ಸಾಹದಾಯಕ ಯೋಜನೆಗಳಾದ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಬೈಸಿಕಲ್, ಶ್ಯೂ ಮತ್ತು ಸಾಕ್ಸ್, ಶುಲ್ಕ ರಿಯಾಯಿತಿ ಹಾಗೂ ಪ.ಜಾತಿ/ಪ.ಪಂ ಮಕ್ಕಳಿಗೆ ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕ, ವಿದ್ಯಾರ್ಥಿವೇತನಗಳಂತಹ ಯೋಜನೆಗಳಡಿ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಭಾರತ ಸಂವಿಧಾನತ್ಮಕ ಮತ್ತು ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನ ಪೂರಕವಾಗಿ ಕ್ರಮ ಕೈಗೊಂಡಿದೆ. ಆದಾಗ್ಯೂ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಸಾಧ್ಯವಾಗಿ ಇನ್ನೂ ಹಲವಾರು ಕೊರತೆಗಳು, ಸಮಸ್ಯೆಗಳನ್ನು ಎದುರಿಸುತ್ತಿದೆ.

ದಾವಣಗೆರೆ ಜಿಲ್ಲೆಯ ವಾಣಿಜ್ಯ ನಗರಿಯ ಜೊತೆಗೆ ಶಿಕ್ಷಣ ನಗರಿಯಾಗಿದ್ದು, ಪ್ರಾಥಮಿಕ ಶಾಲೆಯಿಂದ ಸ್ನಾತಕೊತ್ತರ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಸಂಸ್ಥೆಗಳಿವೆ. ಉನ್ನತ ವ್ಯಾಸಂಗಕ್ಕೆ ಪೂರಕವಾಗಿ ಸೆಕೆಂಡರಿ ಶಿಕ್ಷಣವು ಹೆಚ್ಚು ಸಹಾಯಕವಾಗಿದೆ.

ಜಿಲ್ಲೆಯಲ್ಲಿ 158 ಸರ್ಕಾರಿ ಪ್ರೌಢಶಾಲೆಗಳು, 189 ಅನುದಾನಿತ ಪ್ರೌಢಶಾಲೆಗಳು, 150 ಅನುದಾನ ರಹಿತ ಪ್ರೌಢಶಾಲೆಗಳು, 19 ಸಮಾಜ ಕಲ್ಯಾಣ ಇಲಾಖೆ ವಸತಿಯುತ ಪ್ರೌಢಶಾಲೆಗಳು ಮತ್ತು 2 ಕೇಂದ್ರ ಸರ್ಕಾರದ ಪ್ರೌಢಶಾಲೆಗಳಿವೆ.

2017–18ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 1,63,018 ಮಕ್ಕಳು ಉಚಿತ ಸಮವಸ್ತ್ರದ ಫಲಾನುಭವಿಗಳಾಗಿರುತ್ತಾರೆ. ಇದು ಶಿಕ್ಷಣದಲ್ಲಿ ಸಮಾನತೆ ಮಕ್ಕಳಲ್ಲಿ ಏಕರೂಪತೆಯನ್ನು ಬಿಂಬಿಸುತ್ತದೆ. ಜಿಲ್ಲೆಯಲ್ಲಿ 16,817 ಮಕ್ಕಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಣೆ ಮಾಡಲಾಗಿದ್ದು, ಗ್ರಾಮಾಂತರ ಮಕ್ಕಳು ಶಾಲೆಗೆ ಸತತವಾಗಿ ಹಾಜರಾಗಲು ಹಾಗೂ ಹೆಣ್ಣು ಮಕ್ಕಳು ಶಾಲೆಯನ್ನು ತೊರೆಯದಿರಲು ಈ ಯೋಜನೆ ಸಹಾಯಕವಾಗಿದೆ. ಜಿಲ್ಲೆಯಲ್ಲಿ ಒಟ್ಟು ಮಕ್ಕಳು ಮಧ್ಯಾಹ್ನ ಉಪಹಾರ ಯೋಜನೆಯ ಸರ್ಕಾರಿ ಶಾಲೆಗಳಲ್ಲಿ ಒಟ್ಟು 1,44,010 ಹಾಗೂ ಅನುದಾನಿತ ಶಾಲೆಗಳಲಿ 57,174 ಫಲಾನುಭವಿಗಳಾಗಿದ್ದು ಮಕ್ಕಳು ಶಾಲೆಗೆ ಸತತವಾಗಿ ಹಾಜರಾಗುವಂತೆ ಅನುಕೂಲ ಕಲ್ಪಿಸಿದೆ.

ಕೋಷ್ಟಕ 3.1 : ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿವರಗಳು

ಕ್ರ. ಸಂ.	ಬ್ಲಾಕ್ ಹೆಸರು	ಸರ್ಕಾರಿ		ಸಮಾಜ ಕಲ್ಯಾಣ ಇಲಾಖೆ		ಖಾಸಗಿ ಅನುದಾನಿತ		ಅನುದಾನ ರಹಿತ		ಒಟ್ಟು	
		ಪ್ರಾಥಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ
1	ಚನ್ನಗಿರಿ	271	28	7	3	23	35	55	11	356	77
2	ದಾವಣಗೆರೆ(ಉ)	144	15	2	1	39	30	83	23	268	69
3	ದಾವಣಗೆರೆ(ದ)	146	28	5	4	36	44	146	64	333	140
4	ಹರಪನಹಳ್ಳಿ	268	25	8	4	14	19	46	12	336	60
5	ಹರಿಹರ	134	19	5	3	23	24	59	20	221	66
6	ಹೊನ್ನಾಳಿ	204	26	6	2	17	17	39	14	266	59
7	ಜಗಳೂರು	181	17	5	2	14	20	28	6	228	45
	ಒಟ್ಟು	1348	158	38	19	166	189	456	150	2008	516

ಕೋಷ್ಟಕ 3.2 :ಜಿಲ್ಲೆಯ ಬ್ಲಾಕ್‌ವಾರು ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಅಂಕಿ ಅಂಶಗಳು

ಕ್ರ.ಸಂ.	ಬ್ಲಾಕ್ ಹೆಸರು	ಶಿಕ್ಷಕರ ಸಂಖ್ಯೆ		
		ಸರ್ಕಾರಿ	ಖಾಸಗಿ ಅನುದಾನಿತ	ಒಟ್ಟು
1	ಚನ್ನಗಿರಿ	1,037	131	1,168
2	ದಾವಣಗೆರೆ (ಉತ್ತರ)	681	302	983
3	ದಾವಣಗೆರೆ (ದಕ್ಷಿಣ)	645	231	876
4	ಹರಪನಹಳ್ಳಿ	1,358	72	1,430
5	ಹರಿಹರ	659	182	841
6	ಹೊನ್ನಾಳಿ	831	109	940
7	ಜಗಳೂರು	725	74	799
ಒಟ್ಟು		5,936	1,101	7,037

ಕೋಷ್ಟಕ 3.3 :ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ/ ಶಿಕ್ಷಕರ ಪ್ರಸಕ್ತ ಸ್ಥಿತಿಗತಿಗಳು/ಅವಶ್ಯಕತೆಯ ವಿವರಗಳು

ಕ್ರ. ಸಂ.	ಬ್ಲಾಕ್ ಹೆಸರು	ಶಾಲೆಗಳ ಸಂಖ್ಯೆ		
		ಒಟ್ಟು ಮಂಜೂರಾದ ಹುದ್ದೆಗಳು	ಕರ್ತವ್ಯ ನಿರ್ವಹಿಸುತ್ತಿರುವವರು	ಖಾಲಿ ಹುದ್ದೆಗಳು
1	ಚನ್ನಗಿರಿ	1,037	1,015	22
2	ದಾವಣಗೆರೆ (ಉತ್ತರ)	681	658	23
3	ದಾವಣಗೆರೆ (ದಕ್ಷಿಣ)	645	617	28
4	ಹರಪನಹಳ್ಳಿ	1,358	1,184	174
5	ಹರಿಹರ	659	657	2
6	ಹೊನ್ನಾಳಿ	831	802	29
7	ಜಗಳೂರು	725	676	49
ಒಟ್ಟು		5,936	5,609	327

ಕೋಷ್ಟಕ 3.4 : ಸರ್ಕಾರಿ ಪ್ರೌಢಶಾಲಾ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿವರ

ಕ್ರ. ಸಂ.	ಬ್ಲಾಕ್ ಹೆಸರು	ಒಟ್ಟು ಮಂಜೂರಾದ ಹುದ್ದೆಗಳು	ಕರ್ತವ್ಯ ನಿರ್ವಹಿಸುತ್ತಿರುವವರು	ಖಾಲಿ ಹುದ್ದೆಗಳು (ವಿಶೇಷ ಶಿಕ್ಷಕರು ಸೇರಿ)
1	ಚನ್ನಗಿರಿ	306	277	29
2	ದಾವಣಗೆರೆ (ಉತ್ತರ)	147	136	11
3	ದಾವಣಗೆರೆ (ದಕ್ಷಿಣ)	276	268	8
4	ಹರಪನಹಳ್ಳಿ	253	211	42
5	ಹರಿಹರ	198	185	13
6	ಹೊನ್ನಾಳಿ	258	248	10
7	ಜಗಳೂರು	165	142	23
	ಒಟ್ಟು	**1603**	**1467**	**136**

ಕೋಷ್ಟಕ 3.5: ಕಳೆದ 5 ವರ್ಷಗಳಲ್ಲಿನ ಎಸ್.ಎಸ್.ಎಲ್.ಸಿ. ಫಲಿತಾಂಶ ವಿಶ್ಲೇಷಣೆ (ಶೇಕಡಾವಾರು)ಯ ವಿವರ

ಕ್ರ.ಸಂ.	ಬ್ಲಾಕ್ ಹೆಸರು	2012	2013	2014	2015	2016	2017	2018
1	ಚನ್ನಗಿರಿ	83.21	90.18	91.83	89.85	78.89	76.79	82.20
2	ದಾವಣಗೆರೆ (ಉ)	79.37	83.29	85.81	86.68	79.97	75.62	76.41
3	ದಾವಣಗೆರೆ (ದ)	87.39	84.23	86.97	85.45	79.51	76.24	79.89
4	ಹರಪನಹಳ್ಳಿ	82.46	82.60	89.13	86.83	71.97	66.78	82.92
5	ಹರಿಹರ	81.29	72.40	85.8	87.40	78.49	75.02	84.77
6	ಹೊನ್ನಾಳಿ	82.31	74.10	76.56	86.42	83.24	82.80	92.57
7	ಜಗಳೂರು	81.44	79.82	84.95	89.85	82.96	74.72	77.80
ಒಟ್ಟು		**81.37**	**81.92**	**86.34**	**87.15**	**79.04**	**75.33**	**81.11**

ಕೋಷ್ಟಕ 3.6:8ನೇ ತರಗತಿ ಓದುತ್ತಿರುವ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಣೆ ಮಾಡಿದ ವಿವರಗಳು

ಕ್ರ.ಸಂ.	ತಾಲ್ಲೂಕು	ಬೇಡಿಕೆ	ಪೂರೈಕೆ
1	ಚನ್ನಗಿರಿ	3340	3340
2	ದಾವಣಗೆರೆ ಉತ್ತರ	1172	1172
3	ದಾವಣಗೆರೆ ದಕ್ಷಿಣ	1538	1538
4	ಹರಪನಹಳ್ಳಿ	3388	3298
5	ಹೊನ್ನಾಳಿ	2524	2524
6	ಹರಿಹರ	2733	2733
7	ಜಗಳೂರು	2242	2242
	ಒಟ್ಟು	16937	16817

ಕೋಷ್ಟಕ 3.7 : ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಣೆ ಮಾಡಿದ ವಿವರಗಳು

ಕ್ರ.ಸಂ.	ತಾಲ್ಲೂಕು	ಬೇಡಿಕೆ	ಸರಬರಾಜು	ವಿತರಣೆ
1	ಚನ್ನಗಿರಿ	27843	27843	27843
2	ದಾವಣಗೆರೆ ಉತ್ತರ	19917	19917	19917
3	ದಾವಣಗೆರೆ ದಕ್ಷಿಣ	18247	18247	18247
4	ಹರಪನಹಳ್ಳಿ	36217	36217	36217
5	ಹೊನ್ನಾಳಿ	22638	22638	22638
6	ಹರಿಹರ	19845	19845	19845
7	ಜಗಳೂರು	19101	19101	19101
	ಒಟ್ಟು	163808	163808	163808

ಕೋಷ್ಟಕ 3.8 : ಉಚಿತ ಹಾಗೂ ಮಾರಾಟಕ್ಕಾಗಿ ವಿತರಿಸಿರುವ ಪಠ್ಯ ಪುಸ್ತಕಗಳ ಮಾಹಿತಿ

ಕ್ರ.ಸಂ.	ತಾಲ್ಲೂಕು	ಉಚಿತ ಪುಸ್ತಕಗಳು		ಮಾರಾಟ ಪುಸ್ತಕಗಳು	
		ಬೇಡಿಕೆ	ವಿತರಣೆ	ಬೇಡಿಕೆ	ವಿತರಣೆ
1	ಚನ್ನಗಿರಿ	256953	226376	80319	73901
2	ದಾವಣಗೆರೆ [ಉ] ವಲಯ	219752	205192	74858	66244
3	ದಾವಣಗೆರೆ [ದ] ವಲಯ	221117	204503	180629	170291
4	ಹರಪನಹಳ್ಳಿ	303657	288049	51635	48474
5	ಹರಿಹರ	204959	194182	64386	60756
6	ಹೊನ್ನಾಳಿ	200059	184964	42997	39683
7	ಜಗಳೂರು	169435	158021	37877	36030
	ಒಟ್ಟು	1575932	1461287	532701	495379

ಕೋಷ್ಟಕ 3.9 : ಸರ್ಕಾರಿ ಶಾಲೆಗಳಲ್ಲಿ 1, 3, 5 ಮತ್ತು 7ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ./ಪ.ಪಂಗಡದ ಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ವಿತರಿಸಿರುವ ಮಾಹಿತಿ

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ	
1	ಚನ್ನಗಿರಿ	5009	ಪೂರೈಕೆಯಾಗಿರುವುದಿಲ್ಲ
2	ದಾವಣಗೆರೆ ಉತ್ತರ	3248	
3	ದಾವಣಗೆರೆ ದಕ್ಷಿಣ	3070	
4	ಹರಪನಹಳ್ಳಿ	8744	
5	ಹೊನ್ನಾಳಿ	3379	
6	ಹರಿಹರ	2565	
7	ಜಗಳೂರು	4832	
	ಒಟ್ಟು	**30847**	

ಕೋಷ್ಟಕ 3.10 : ಸರ್ಕಾರಿ ಶಾಲೆಗಳಲ್ಲಿ 8 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪ.ಜಾ./ಪ.ಪಂಗಡದ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಿಸಿರುವ ಮಾಹಿತಿ

ಕ್ರ.ಸಂ.	ತಾಲ್ಲೂಕು	ಮಕ್ಕಳ ಸಂಖ್ಯೆ	
1	ಚನ್ನಗಿರಿ	2377	ಪೂರೈಕೆಯಾಗಿರುವುದಿಲ್ಲ
2	ದಾವಣಗೆರೆ ಉತ್ತರ	1065	
3	ದಾವಣಗೆರೆ ದಕ್ಷಿಣ	1554	
4	ಹರಪನಹಳ್ಳಿ	2663	
5	ಹೊನ್ನಾಳಿ	1672	
6	ಹರಿಹರ	1240	
7	ಜಗಳೂರು	1887	
	ಒಟ್ಟು	**12458**	

ಕೋಷ್ಟಕ 3.11 : ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ಶೈಕ್ಷಣಿಕ ಸೂಚ್ಯಾಂಕಗಳು

Sl. No.	Block Name	PTR	PCR	TCR	DR	GER	NER
1	ಚನ್ನಗಿರಿ	16.49	12.54	0.76	1.97	89.19	83.72
2	ದಾವಣಗೆರೆ–ಉ	19.63	16.58	0.85	4.63	87.77	75.71
3	ದಾವಣಗೆರೆ–ದ	17.68	15.06	0.94	2.07	125.25	114.13
4	ಹರಪನಹಳ್ಳಿ	24.80	22.14	0.92	4.82	103.38	96.68
5	ಹರಿಹರ	20.30	17.24	0.86	3.23	99.08	93.26
6	ಹೊನ್ನಾಳಿ	18.30	14.96	0.83	0.64	89.16	82.10
7	ಜಗಳೂರು	20.14	16.90	0.91	3.46	92.13	93.10
ಒಟ್ಟು		**19.89**	**16.59**	**0.86**	**3.01**	**99.12**	**91.69**

ಕೋಷ್ಟಕ 3.12 :ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಕಾರ್ಯಕ್ರಮಗಳ ವಿವರ

ಕ್ರ.ಸಂ	ವಿವರ	ಸಂಖ್ಯೆ
1	ಶಾಲೆಗಳಿಲ್ಲದ ಕಡೆ ಹೊಸ ಸ.ಕಿ.ಪ್ರಾ. ಶಾಲೆ ಪ್ರಾರಂಭಿಸುವುದು	57
2	ಸ.ಕಿ.ಪ್ರಾ. ಶಾಲೆಗಳನ್ನು ಸ.ಹಿ.ಪ್ರಾ. ಶಾಲೆಗಳಾಗಿ ಉನ್ನತೀಕರಿಸಿ ಪ್ರಾರಂಭಿಸುವುದು	3
3	ಶಾಲೆಯಿಂದ ಹೊರಗುಳಿದ ಮಕ್ಕಳು	246
4	ಕಂಪ್ಯೂಟರ್ ಆಧಾರಿತ ಕಲಿಕಾ ಕೇಂದ್ರಗಳನ್ನು ಸ.ಹಿ.ಪ್ರಾ. ಶಾಲೆಗಳಲ್ಲಿ ಪ್ರಾರಂಭಿಸುವುದು	159
5	ಬಿ.ಆರ್.ಸಿ. ಕಟ್ಟಡಗಳು	6
6	ಸಿ.ಆರ್.ಸಿ. ಕಟ್ಟಡಗಳು	84
7	ಹೊಸ ಶಾಲಾ ಕಟ್ಟಡ	78
8	ಹೆಚ್ಚುವರಿ ಶಾಲಾ ಕೊಠಡಿ	1323
9	ಮುಖ್ಯ ಶಿಕ್ಷಕರ ಕೊಠಡಿ	210
10	ಕುಡಿಯುವ ನೀರು	938
11	ಶೌಚಾಲಯ (ಬಾಲಕ ಮತ್ತು ಬಾಲಕಿಯರಿಗೆ)	2129
12	ಮೇಜರ್ ದುರಸ್ತಿ	326
13	ಸರ್ವ ಶಿಕ್ಷಣ ಅಭಿಯಾನದಡಿ ನೇಮಿಸಿದ ಟಿ.ಜಿ.ಟಿ. ಶಿಕ್ಷಕರು	235
14	ಸರ್ವ ಶಿಕ್ಷಣ ಅಭಿಯಾನದಡಿ ನೇಮಿಸಿದ ಪ್ರಾಥಮಿಕ ಶಾಲಾ ಶಿಕ್ಷಕರು	120
15	ಸರ್ವ ಶಿಕ್ಷಣ ಅಭಿಯಾನದಡಿ ನೇಮಿಸಿದ ಉಸ್ತುವಾರಿ ಅಧಿಕಾರಿ ಸಿಬ್ಬಂದಿಗಳು (DPO/BRC/CRC)	180
16	8ನೇ ತರಗತಿಗೆ ಉನ್ನತೀಕರಿಸಿರುವ ಹಿ.ಪ್ರಾ.ಶಾಲೆಗಳು	276

ಕೋಷ್ಟಕ 3.13 : ಪ್ರೌಢಶಾಲಾ ಬಲವರ್ಧನೆ ಸಿವಿಲ್ ಕಾಮಗಾರಿ (ಆರ್.ಎಂ.ಎಸ್.ಎ) ವಿವರಗಳು

ಕ್ರ. ಸಂ	ತಾಲ್ಲೂಕು	ಶಾಲೆಗಳ ಸಂಖ್ಯೆ	ಕಾಮಗಾರಿ ಪ್ರಾರಂಭಿಸಿದ ಶಾಲೆಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿ ಶಾಲೆಗಳ ಸಂಖ್ಯೆ	ಮುಕ್ತಾಯ ಹಂತದಲ್ಲಿರುವ ಕಾಮಗಾರಿ ಶಾಲೆಗಳ ಸಂಖ್ಯೆ	ಕಾಮಗಾರಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ
1	ಚನ್ನಗಿರಿ	16	16	16	0	0
2	ದಾವಣಗೆರೆ–ಉ	7	7	7	0	0
3	ದಾವಣಗೆರೆ–ದ	16	16	16	0	0
4	ಹರಪನಹಳ್ಳಿ	11	11	11	0	0
5	ಹರಿಹರ	11	11	11	0	0
6	ಹೊನ್ನಾಳಿ	13	13	13	0	0
7	ಜಗಳೂರು	10	10	09	01	01
ಒಟ್ಟು		84	84	63	01	01

ಅಕ್ಷರ ದಾಸೋಹ :

ಜಿಲ್ಲೆಯಲ್ಲಿನ ಒಟ್ಟು ಶಾಲೆಗಳಲ್ಲಿನ ಅಡುಗೆ ಕೇಂದ್ರಗಳ ಸಂಖ್ಯೆ :1852
ಒಟ್ಟು ಮಕ್ಕಳ ದಾಖಲಾತಿ :197410
ಒಟ್ಟು ಹಾಜರಾತಿ :187981
ಬಿಸಿಯೂಟ ಫಲಾನುಭವಿಗಳ ಸಂಖ್ಯೆ :181639
ಕ್ಷೀರಭಾಗ್ಯ ಫಲಾನುಭವಿಗಳ ಸಂಖ್ಯೆ :187981
ಬಿಸಿಯೂಟ ಫಲಾನುಭವಿಗಳು ಶೇಕಡ :92%
ಕ್ಷೀರಭಾಗ್ಯ ಫಲಾನುಭವಿಗಳ ಶೇಕಡ :95%

ಅಕ್ಷರ ದಾಸೋಹ ಕಾರ್ಯಕ್ರಮದಡಿ ಶಾಲಾ ಅಡುಗೆ ಕೇಂದ್ರಗಳಲ್ಲಿ ಕರ್ತವ್ಯ ಅಡುಗೆ ಸಿಬ್ಬಂದಿಯವರಿಗೆ ಪ್ರತಿ ಮಾಹೆ ಮುಖ್ಯ ಅಡುಗೆಯವರಿಗೆ ರೂ.2,700/– ಸಹಾಯಕ ಅಡುಗೆಯವರಿಗೆ ರೂ.2,600/– ಗಳನ್ನು ಹಾಗೂ ಕ್ಷೀರಭಾಗ್ಯ ಯೋಜನೆಯಡಿ ಪ್ರತಿ ಅಡುಗೆಯವರಿಗೆ ರೂ. 100/– ನಂತೆ ಗೌರವಧನ ನೀಡಲಾಗುತ್ತಿದೆ.

ಕೋಷ್ಟಕ 3.14 : ಪ್ರತಿ ಮಗುವಿಗೆ ಪ್ರತಿ ದಿನದ ಆಹಾರ ಪೂರೈಕೆಯ ವಿವರಗಳು

ಕ್ರ.ಸಂ	ಆಹಾರ ಪದಾರ್ಥ	ತರಗತಿ 1 ರಿಂದ 5	ತರಗತಿ 6 ರಿಂದ 8	ತರಗತಿ 9 ರಿಂದ 10
		ಪ್ರಮಾಣ ಗ್ರಾಂ.ಗಳಲ್ಲಿ	ಪ್ರಮಾಣ ಗ್ರಾಂ.ಗಳಲ್ಲಿ	ಪ್ರಮಾಣ ಗ್ರಾಂ.ಗಳಲ್ಲಿ
1	ಅಕ್ಕಿ	100	150	150
2	ಬೇಳೆ	20	30	30
3	ತರಕಾರಿ	50	75	75
4	ಎಣ್ಣೆ	5	7.50	7.50
5	ಉಪ್ಪು	2	4	4
6	ಅಡುಗೆ ಅನಿಲ	0	0	0
7	ಸಾಂಬಾರು ಪದಾರ್ಥ	0	0	0
	ಒಟ್ಟು	177	266.50	266.50

ಕೋಷ್ಟಕ 3.15 : ಪ್ರತಿ ಮಗುವಿಗೆ ಕ್ಷೀರಭಾಗ್ಯ ಯೋಜನೆಯಡಿ ನೀಡಲಾಗುತ್ತಿರುವ ಹಾಲಿನ ಪುಡಿ ವಿವರ

ಕ್ರ.ಸಂ	ಪದಾರ್ಥ/ವಿವರ	ಪರಿಮಾಣ (ಗ್ರಾಮಗಳಲ್ಲಿ)	ಮೊತ್ತ(ರೂ.ಗಳಲ್ಲಿ)
1	ಹಾಲಿನ ಪುರ	18	4.59
2	ಸಕ್ಕರೆ	10	0.32
3	ಇಂಧನ	–	0.15
4	ಇತರೆ	0.12	0.12

ಅಕ್ಷರ ದಾಸೋಹ ಕಾರ್ಯಕ್ರಮ
Mid Day Meal Scheme

08 02 2016

ಕೋಷ್ಟಕ 3.16 : ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಮೂಲಭೂತ ಸೌಲಭ್ಯಗಳ ಲಭ್ಯತೆ ಮತ್ತು ಕೊರತೆ ವಿವರ

ಕ್ರ ಸಂ	ತಾಲ್ಲೂಕು	ಒಟ್ಟು ಶಾಲೆಗಳು	ಬಾಲಕರ ಶೌಚಾಲಯ		ಬಾಲಕಿಯರ ಶೌಚಾಲಯ		ವಿದ್ಯುತ್ ಚ್ಛಕ್ತಿ		ಆಟದ ಮೈದಾನ		ರ್ಯಾಂಪ್ಸ್		ಗ್ರಂಥಾಲಯ		ಶಾಲಾ ಆವರಣ ಗೋಡೆ		ಕುಡಿಯುವ ನೀರು	
			ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ
1	ಚನ್ನಗಿರಿ	271	256	0	265	0	266	0	160	0	98	0	49	0	239	0	269	0
2	ದಾವಣಗೆರೆ(ಉ)	144	137	0	139	0	142	0	90	0	75	0	51	0	128	0	140	0
3	ದಾವಣಗೆರೆ(ದ)	146	134	0	142	0	143	0	91	0	85	0	64	0	140	0	144	0
4	ಹರಪನಹಳ್ಳಿ	268	242	0	264	0	258	0	121	0	131	0	160	0	229	0	264	0
5	ಹರಿಹರ	134	127	0	128	0	129	0	71	0	74	0	33	0	124	0	132	0
6	ಹೊನ್ನಾಳಿ	204	195	0	201	0	200	0	108	0	103	0	111	0	171	0	204	0
7	ಜಗಳೂರು	181	140	0	145	0	180	0	97	0	91	0	114	0	149	0	181	0
	ಒಟ್ಟು	1348	1231	0	1284	0	1318	0	738	0	657	0	582	0	1180	0	1334	0

ಕೋಷ್ಟಕ 3.17 : ಸರ್ವಶಿಕ್ಷಣ ಅಭಿಯಾನ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಕೊರತೆ ಪೂರೈಕೆಗೆ ರಾಜ್ಯ ಕಛೇರಿಗೆ ಮಂಡಿಸಿದ ಕ್ರಿಯಾ ಯೋಜನೆಯ ವಿವರಗಳು

ಕ್ರ.ಸಂ.	ತಾಲ್ಲೂಕು	ಹೆಚ್ಚುವರಿ ಶಾಲಾ ಕೊಠಡಿ	ದುರಸ್ತಿಯಲ್ಲಿರುವ ಪ್ರಾಥಮಿಕ ಶಾಲೆಗಳು	ದುರಸ್ತಿಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗಳು
1	ಚನ್ನಗಿರಿ	15	0	0
2	ದಾವಣಗೆರೆ (ಉ)	14	0	9
3	ದಾವಣಗೆರೆ (ದ)	2	8	0
4	ಹರಪನಹಳ್ಳಿ	11	4	7
5	ಹರಿಹರ	0	0	10
6	ಹೊನ್ನಾಳಿ	2	0	8
7	ಜಗಳೂರು	3	3	9
	ಒಟ್ಟು	47	15	43

ಕೋಷ್ಟಕ 3.18 : 2017–18ನೇ ಸಾಲಿನಲ್ಲಿ ಶಾಲೆಯಿಂದ ಹೊರ ಉಳಿದ ಮಕ್ಕಳ ವಿವರ (7 ರಿಂದ 14)

ಕ್ರ ಸಂ	ತಾಲ್ಲೂಕು	ಶಾಲಾ ಬಿಟ್ಟ ಮಕ್ಕಳು			ಶಾಲೆಗೆ ದಾಖಲಾದ ಮಕ್ಕಳು			ಶಾಲೆಯಿಂದ ಹೊರ ಉಳಿದ ಮಕ್ಕಳು		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	ಚನ್ನಗಿರಿ	13	13	26	0	0	0	13	13	26
2	ದಾವಣಗೆರೆ (ಉ)	29	18	47	0	0	0	29	18	47
3	ದಾವಣಗೆರೆ (ದ)	23	5	28	3	1	4	26	6	32
4	ಹರಪನಹಳ್ಳಿ	13	4	17	0	0	0	13	4	17
5	ಹರಿಹರ	4	4	8	0	0	0	4	4	8
6	ಹೊನ್ನಾಳಿ	6	2	8	1	0	1	7	2	9
7	ಜಗಳೂರು	11	6	17	0	0	0	11	6	17
	ಒಟ್ಟು	99	52	151	4	1	5	103	53	156

ಕೋಷ್ಟಕ 3.19 : ಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿಗಾಗಿ ರೂಪಿಸಿದ ಕಾರ್ಯತಂತ್ರಗಳ ವಿವರ

ಕ್ರ.ಸಂ.	ಕಾರ್ಯತಂತ್ರದ ಹೆಸರು	ಮಕ್ಕಳ ಸಂಖ್ಯೆ	ಪ್ರಸ್ತಾಪಿಸಿದ ಅನುದಾನ (ಲಕ್ಷಗಳಲ್ಲಿ)
1	ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವರಿಕಲ್ಲದೆ)6 ತಿಂಗಳು	152	0.00
2	ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕ ಸಹಿತ) 6ತಿಂಗಳು	0	0.00
3	ಹಾಸ್ಟೆಲ್ ಸೌಲಭ್ಯಗಳು (KGBV)	0	0.00
4	ಗೃಹಾಧಾರಿತ ಶಿಕ್ಷಣ (HBE)	4	0.00
	ಒಟ್ಟು	156	0.00
	ಮುಂದುವರೆದ ಕಾರ್ಯಕ್ರಮಗಳು		
5	6 ತಿಂಗಳ ಋತುಮಾನ ವಸತಿಯುತ ಕೇಂದ್ರ (SRST)	300	20.00

ಕೋಷ್ಟಕ 3.20 : 2017–18ನೇ ಸಾಲಿನಲ್ಲಿ ಎಸ್.ಎಸ್.ಎ ವಿವಿಧ ಚಟುವಟಿಕೆಯ ಕೈಗೊಂಡಂತೆ ಕ್ರಿಯಾ ಯೋಜನೆ (ಘೋಷ್ವಾರೆ)

ಕ್ರ.ಸಂ.	ಬ್ಲಾಕ್ ಹೆಸರು	ಬೇಡಿಕೆ ಪ್ರಸ್ತಾವನೆ	ಶೇಕಡ	ನಿರ್ವಹಣೆ
1	ಎಸ್.ಎಸ್.ಎ. ಅಧಿಕಾರಿ ಸಿಬ್ಬಂದಿ ವೇತನಾಂಶ	2050.00	49	ಜಿಲ್ಲಾ/ ಬ್ಲಾಕ್ ಕಛೇರಿಗಳು
2	ಶಿಕ್ಷಕರ ತರಬೇತಿಗಳು ಮತ್ತು ಇತರೆ	378.00	9	ಡಯಟ್ ದಾವಣಗೆರೆ
3	ಆರ್.ಇ.ಎಮ್.ಎಸ್	0.00	0	ಡಯಟ್ ದಾವಣಗೆರೆ
4	ಇತರೆ ಚಟುವಟಿಕೆಗಳು	1448.00	34	ರಾಜ್ಯ/ಜಿಲ್ಲಾ/ಬ್ಲಾಕ್ ಕಛೇರಿಗಳು, ಸಿ.ಆರ್.ಸಿ ಮತ್ತು ಎಸ್.ಡಿ.ಎಂ.ಸಿ
5	ಕಾಮಗಾರಿಗಳು	304.00	7	ಎಸ್.ಡಿ.ಎಂ.ಸಿ
	ಒಟ್ಟು	**4180.00**	98	

ಕೋಷ್ಟಕ 3.21 : ಮೂಲ ಸೌಕರ್ಯಗಳಿರುವ ಸರ್ಕಾರಿ ಪ್ರೌಢ ಶಾಲೆಗಳ ವಿವರ

ಕ್ರ. ಸಂ.	ತಾಲ್ಲೂಕು	ಶಾಲೆ	ಬಾಲಕರ ಶೌಚಾಲಯ	ಬಾಲಕಿಯರ ಶೌಚಾಲಯ	ವಿದ್ಯುತ್ ಚ್ಛಕ್ತಿ	ಆಟದ ಮೈದಾನ	ರ್ಯಾಂಪ್ಸ್	ಗ್ರಂಥಾಲಯ	ಕಾಂಪೌಂಡ್	ಕುಡಿಯುವ ನೀರು
1	ಚನ್ನಗಿರಿ	28	28	28	27	26	3	9	26	28
2	ದಾವಣಗೆರೆ(ಉ)	15	14	15	15	14	3	5	14	15
3	ದಾವಣಗೆರೆ(ದ)	28	28	28	28	25	9	12	28	27
4	ಹರಪನಹಳ್ಳಿ	25	24	24	25	21	6	17	23	25
5	ಹರಿಹರ	19	19	19	18	18	4	4	18	19
6	ಹೊನ್ನಾಳಿ	26	26	26	26	25	4	16	22	26
7	ಜಗಳೂರು	17	14	14	17	16	3	9	14	17
	ಒಟ್ಟು	158	153	154	156	145	32	72	145	157

4. ಜಿಲ್ಲಾ ವಯಸ್ಕರ ಶಿಕ್ಷಣ

ವಿಶ್ವದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಂತೆ ನಮ್ಮ ದೇಶದ ಸಾಕ್ಷರತಾ ಪ್ರಮಾಣವನ್ನು ಗರಿಷ್ಟ ಮಟ್ಟಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಕೆಲಸ ಮಾಡುತ್ತಿದೆ. ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆಯು ಜಿಲ್ಲಾ ಸಾಕ್ಷರತಾ ಸಮಿತಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಜಿಲ್ಲಾ ವಯಸ್ಕರ ಶಿಕ್ಷಣ ಕಛೇರಿಯಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಕಾರ್ಯಕ್ರಮ ಸಹಾಯಕರು, ಬೆರಳಚ್ಚುಗಾರರು ಹಾಗೂ 'ಡಿ' ಗ್ರೂಪ್ ನೌಕರರು ಸೇರಿ ನಾಲ್ಕು ಹುದ್ದೆಗಳಿವೆ. ಹಾಗೇಯೇ ಜಿಲ್ಲಾ ಸಾಕ್ಷರತಾ ಸಮಿತಿಯಲ್ಲಿ ಪ್ರಸಕ್ತ ಒಟ್ಟು ನಾಲ್ಕು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಜಿಲ್ಲಾ ಸಾಕ್ಷರತಾ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ. ಜಿಲ್ಲಾ ವಯಸ್ಕರ ಶಿಕ್ಷಣ ಕಛೇರಿಯ ಕಾರ್ಯಕ್ರಮ ಸಹಾಯಕರು, 'ಡಿ' ದರ್ಜೆ ನೌಕರರು, ಜಿಲ್ಲಾ ಸಾಕ್ಷರತಾ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಂಪ್ಯೂಟರ್ ನಿರ್ವಾಹಕರು ಸಹ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಸಾಕ್ಷರತಾ ಕಾರ್ಯಕ್ರಮಗಳು :

- 2017–18ನೇ ಸಾಲಿನಲ್ಲಿ ಲಿಂಕ್ ಡಾಕ್ಯುಮೆಂಟ್ ಯೋಜನೆಯಡಿ ಎಲ್ಲಾ ವರ್ಗದ ನವಸಾಕ್ಷರರಾದವರಿಗೆ ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಟ್ಟು 49 ಕೇಂದ್ರಗಳಲ್ಲಿ ನಡೆಸಲಾಗಿದೆ. ಹಿಂದುಳಿದ ತಾಲ್ಲೂಕು ಸಾಕ್ಷರತಾ ಕಾರ್ಯಕ್ರಮದಡಿ ನಿಗಧಿತ ಪ್ರಾಥಮಿಕೆಯ ಎಲ್ಲಾ ಪಾಠಗಳ ಕಲಿಕೆಯನ್ನು ಪೂರ್ಣಗೊಳಿಸಿದವರಿಗೆ ಪ್ರತಿ 20 ಕಲಿಕಾರ್ಥಿಗಳಿಗೆ ಒಂದು ಕೇಂದ್ರದಂತೆ ಆರು ತಾಲ್ಲೂಕುಗಳಲ್ಲಿ 60/90 ದಿನಗಳ ವೃತ್ತಿ ಕೌಶಲ್ಯ ತರಬೇತಿ(ಟ್ರೇಡ್ ಆಧರಿಸಿ) ಕಾರ್ಯಕ್ರಮವನ್ನು ಒಟ್ಟು 49 ಕೇಂದ್ರಗಳಲ್ಲಿ 2017–ಡಿಸೆಂಬರ್‌ನಿಂದ ಪ್ರಾರಂಭಿಸಿ ನಡೆಸಲಾಗಿದೆ. ಜೊತೆಗೆ ಅಕ್ಷರ ಕಲಿಕಾಭ್ಯಾಸವನ್ನು ನಡೆಸಲಾಗಿದೆ. ವಿವರ ಈ ಕೆಳಗಿನಂತಿದೆ.

ಕೋಷ್ಟಕ 4.1 : ವೃತ್ತಿ ಕೌಶಲ್ಯ ತರಬೇತಿ ವಿವರಗಳು

ತಾಲ್ಲೂಕಿನ ಹೆಸರು	ಕ್ರ. ಸಂ.	ಗ್ರಾಮ ಪಂಚಾಯ್ತಿ ಹೆಸರು	ಗ್ರಾಮದ ಹೆಸರು	ತರಬೇತಿಯ ಟ್ರೇಡ್	ತರಬೇತಿ ಅವಧಿ	ಶಿಬಿರಾರ್ಥಿಗಳ ಸಂಖ್ಯೆ ಒಟ್ಟು
ದಾವಣಗೆರೆ	1	ನಾಗರಕಟ್ಟೆ	ನಾಗರಕಟ್ಟೆ	ಟೈಲರಿಂಗ್	3 ತಿಂಗಳು	20
	2	ಶ್ರೀರಾಮನಗರ	ಆಲೂರಹಟ್ಟಿ	ಟೈಲರಿಂಗ್	3 ತಿಂಗಳು	20
	3	ಮೆಳ್ಳೆಕಟ್ಟೆ	ಮೆಳ್ಳೆಕಟ್ಟೆ	ಟೈಲರಿಂಗ್	3 ತಿಂಗಳು	20
	4	ಅವರಗೊಳ್ಳ	ಅವರಗೊಳ್ಳ	ಟೈಲರಿಂಗ್	3 ತಿಂಗಳು	20
	5	ಮತ್ತಿ	ಹೊವಿನಮಡು	ಎಂಬ್ರಾಯಿಡರಿ	3 ತಿಂಗಳು	20
	6	ಹಿರೆತೊಗಲೇರಿ	ಹಿರೆತೊಗಲೇರಿ	ಟೈಲರಿಂಗ್	3 ತಿಂಗಳು	20
	7	ಆನಗೋಡು	ಆನಗೋಡು	ಟೈಲರಿಂಗ್	3 ತಿಂಗಳು	20
	8	ಗುಡಾಳು	ಗುಡಾಳು	ಟೈಲರಿಂಗ್	3 ತಿಂಗಳು	20
	9	ಹದಡಿ	ಹದಡಿ	ಟೈಲರಿಂಗ್	3 ತಿಂಗಳು	20
	10	ನೀರ್ಥಡಿ	ನೀರ್ಥಡಿ	ಟೈಲರಿಂಗ್	3 ತಿಂಗಳು	20
	11	ನರಗನಹಳ್ಳಿ	ನರಗನಹಳ್ಳಿ	ಟೈಲರಿಂಗ್	3 ತಿಂಗಳು	20
ಹರಿಹರ	12	ಕೊಕ್ಕನೂರು	ಕೊಕ್ಕನೂರು	ಟೈಲರಿಂಗ್	3 ತಿಂಗಳು	20
	13	ಬೆಳ್ಳೂಡಿ	ಬೆಳ್ಳೂಡಿ	ಟೈಲರಿಂಗ್	3 ತಿಂಗಳು	20
	14	ಬಾನುವಳ್ಳಿ	ಬಾನುವಳ್ಳಿ	ಟೈಲರಿಂಗ್	3 ತಿಂಗಳು	20
	15	ಹಾಲಿವಾಣ	ಹಾಲಿವಾಣ	ಟೈಲರಿಂಗ್	3 ತಿಂಗಳು	20
	16	ಕೊಂಡಜ್ಜಿ	ಕೊಂಡಜ್ಜಿ	ಟೈಲರಿಂಗ್	3 ತಿಂಗಳು	20
ಚನ್ನಗಿರಿ	17	ಹಿರೆಕೋಗಲೂರು	ಹಿರೆಕೊಗಲೂರು	ಟೈಲರಿಂಗ್	3 ತಿಂಗಳು	20
	18	ವಡ್ನಾಳ್	ವಡ್ನಾಳ್	ಟೈಲರಿಂಗ್	3 ತಿಂಗಳು	20
	19	ನಾರಶೆಟ್ಟಿಹಳ್ಳಿ	ನಾರಶೆಟ್ಟಿಹಳ್ಳಿ	ಟೈಲರಿಂಗ್	3 ತಿಂಗಳು	20
	20	ಸುಣಗೆರೆ	ಸುಣಗೆರೆ	ಟೈಲರಿಂಗ್	3 ತಿಂಗಳು	20

ತಾಲ್ಲೂಕಿನ ಹೆಸರು	ಕ್ರ. ಸಂ.	ಗ್ರಾಮ ಪಂಚಾಯ್ತಿ ಹೆಸರು	ಗ್ರಾಮದ ಹೆಸರು	ತರಬೇತಿಯ ಟ್ರೇಡ್	ತರಬೇತಿ ಅವಧಿ	ಶಿಬಿರಾರ್ಥಿಗಳ ಸಂಖ್ಯೆ ಒಟ್ಟು
ಚನ್ನಗಿರಿ	21	ಚಿರಡೋಣಿ	ಚಿರಡೋಣಿ	ಟೈಲರಿಂಗ್	3 ತಿಂಗಳು	20
	22	ಹೊದಿಗೆರೆ	ಹೊದಿಗೆರೆ	ಟೈಲರಿಂಗ್	3 ತಿಂಗಳು	20
	23	ದೇವರಹಳ್ಳಿ	ದೇವರಹಳ್ಳಿ	ಟೈಲರಿಂಗ್	3 ತಿಂಗಳು	20
	24	ದಾಗಿನಕಟ್ಟೆ	ದಾಗಿನಕಟ್ಟೆ	ಟೈಲರಿಂಗ್	3 ತಿಂಗಳು	20
	25	ಬಸವಪಟ್ಟಣ	ಬಸವಪಟ್ಟಣ	ಟೈಲರಿಂಗ್	3 ತಿಂಗಳು	20
	26	ಬೆಳ್ಳಿಗನೂಡು	ಬೆಳ್ಳಿಗನೂಡು	ಟೈಲರಿಂಗ್	3 ತಿಂಗಳು	20
	27	ಸಂತೆಬೆನ್ನೂರು	ಸಂತೆಬೆನ್ನೂರು	ಬ್ಯೂಟಿಷಿಯನ್/ಮೆಹಂದಿ	2 ತಿಂಗಳು	20
ಹೊನ್ನಾಳಿ	28	ಕುಳಗಟ್ಟೆ	ಕುಳಗಟ್ಟೆ	ಟೈಲರಿಂಗ್	3 ತಿಂಗಳು	20
	29	ದೊಡ್ಡೇರಿ	ದೊಡ್ಡೇರಿ	ಟೈಲರಿಂಗ್	3 ತಿಂಗಳು	20
	30	ಹತ್ತೂರು	ದೊಡ್ಡೇರಹಳ್ಳಿ	ಟೈಲರಿಂಗ್	3 ತಿಂಗಳು	20
	31	ಕೂಲಂಬಿ	ಕೂಲಂಬಿ	ಟೈಲರಿಂಗ್	3 ತಿಂಗಳು	20
	32	ಬೆನಕನಹಳ್ಳಿ	ವಿಜಯಾಪುರ	ಟೈಲರಿಂಗ್	3 ತಿಂಗಳು	20
	33	ಬೆಲಿಮಲ್ಲೂರು	ಬೆಲಿಮಲ್ಲೂರು	ಟೈಲರಿಂಗ್	3 ತಿಂಗಳು	20
	34	ಚಟ್ನಿಹಳ್ಳಿ	ಚಟ್ನಿಹಳ್ಳಿ	ಟೈಲರಿಂಗ್	3 ತಿಂಗಳು	20
	35	ಚಿನ್ನಿಕಟ್ಟೆ	ಚಿನ್ನಿಕಟ್ಟೆ	ಟೈಲರಿಂಗ್	3 ತಿಂಗಳು	20
ಹರಪನಹಳ್ಳಿ	36	ಬೆಣ್ಣೆಹಳ್ಳಿ	ಹೊಸಓಬಳಾಪುರ	ಟೈಲರಿಂಗ್	3 ತಿಂಗಳು	20
	37	ಹುಲಿಕಟ್ಟೆ	ಹುಲಿಕಟ್ಟೆ	ಟೈಲರಿಂಗ್	3 ತಿಂಗಳು	20
	38	ಪುಣಬಘಟ್ಟ	ಪುಣಬಘಟ್ಟ	ಟೈಲರಿಂಗ್	3 ತಿಂಗಳು	20
	39	ಹಲುವಾಗಿಲು	ಗರ್ಭಗುಡಿ	ಟೈಲರಿಂಗ್	3 ತಿಂಗಳು	20
	40	ನಿಟ್ಟೂರು	ನಿಟ್ಟೂರು	ಟೈಲರಿಂಗ್	3 ತಿಂಗಳು	20
	41	ಹಿರೇಮೆಗಳಗೆರೆ	ಹಿರೇಮೆಗಳಗೆರೆ	ಟೈಲರಿಂಗ್	3 ತಿಂಗಳು	20
	42	ಅರಸಿಕೇರೆ	ಅರಸಿಕೇರೆ	ಟೈಲರಿಂಗ್	3 ತಿಂಗಳು	20
	43	ಯಡೇಹಳ್ಳಿ	ಯಡೇಹಳ್ಳಿ	ಟೈಲರಿಂಗ್	3 ತಿಂಗಳು	20
	44	ರಾಗಿಮಸಲವಾಡ	ರಾಗಿಮಸಲವಾಡ	ಟೈಲರಿಂಗ್	3 ತಿಂಗಳು	20
ಜಗಳೂರು	45	ತೊರಣಗಟ್ಟೆ	ತೊರಣಗಟ್ಟೆ	ಟೈಲರಿಂಗ್	3 ತಿಂಗಳು	20
	46	ಹಿರೇಮಲ್ಲನಹೊಳೆ	ಹಿರೇಮಲ್ಲನಹೊಳೆ	ಟೈಲರಿಂಗ್	3 ತಿಂಗಳು	20
	47	ಕ್ಯಾಸೇನಹಳ್ಳಿ	ಗೌರಿಪುರ	ಟೈಲರಿಂಗ್	3 ತಿಂಗಳು	20
	48	ಹಾಲೇಕಲ್ಲು	ಚದುರಗೊಳ್ಳ	ಟೈಲರಿಂಗ್	3 ತಿಂಗಳು	20
	49	ದಿದ್ದಿಗಿ	ದಿದ್ದಿಗಿ	ಟೈಲರಿಂಗ್	3 ತಿಂಗಳು	20

5. ಕ್ರೀಡೆ ಮತ್ತು ಯುವಜನ ಸೇವೆಗಳು

1. ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ : 2205–00–104–0–26:

ದಸರಾ ಕ್ರೀಡಾಕೂಟ :

ಸದರಿ ಯೋಜನೆಯಡಿ ಪ್ರತಿ ವರ್ಷದಂತೆ ಜಿಲ್ಲೆಯ ಅರು ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ದಸರಾ ಕ್ರೀಡಾಕೂಟಗಳನ್ನು ಸಂಘಟಿಸಲಾಗಿದೆ. ದಸರಾ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಹಾಗೂ ಪ್ರಮಾಣ ಪತ್ರ, ಪದಕಗಳನ್ನು ವಿತರಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳು ವಿಭಾಗ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ಹಾಗೂ ವಿಭಾಗ ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳನ್ನು ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟಗಳಿಗೆ ಕಳುಹಿಸಿಕೊಡಲಾಗಿದೆ.

ಯುವಜನ ಮೇಳ :

ಪ್ರತೀ ವರ್ಷದಂತೆ ತಾಲ್ಲೂಕು/ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಯುವಜನ ಮೇಳಗಳನ್ನು (ಗೀಗೀಪದ, ಜಾನಪದಗೀತೆ, ಜಾನಪದ ನೃತ್ಯ, ಡೊಳ್ಳು ಕುಣಿತ, ಕೋಲಾಟ, ವೀರಗಾಸೆ, ಸೋಬಾನೆ ಪದ, ಬೀಸುವ ಪದ ಸ್ಪರ್ಧೆಗಳನ್ನು) ಸಂಘಟಿಸಲಾಗಿದೆ. ಸದರಿ ಯುವಜನ ಮೇಳದ ವೈಯಕ್ತಿಕ ಸ್ಪರ್ಧೆಗಳನ್ನು ಪ್ರಥಮ ಹಾಗು ದ್ವಿತೀಯ ಸ್ಥಾನ ಪಡೆದವರು ಹಾಗು ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರನ್ನು ವಿಭಾಗ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಲು ಕಳುಹಿಸಿಕೊಡಲಾಗಿದೆ. ವಿಭಾಗ ಮಟ್ಟದಲ್ಲಿ ವಿಜೇತರಾದವರನ್ನು ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಲು ಕಳುಹಿಸಿಕೊಡಲಾಗಿದೆ. ಗೀಗೀಪದ, ಜಾನಪದಗೀತೆ, ಜಾನಪದ ನೃತ್ಯ, ಡೊಳ್ಳು ಕುಣಿತ, ಕೋಲಾಟ, ವೀರಗಾಸೆ, ಸೋಬಾನೆ ಪದ, ಬೀಸುವ ಪದ ಹಾಗು ಇನ್ನಿತರೆ ಜಾನಪದ ಕಲೆಗಳನ್ನು ತಮ್ಮ ಪ್ರಾವಿಣ್ಯವನ್ನು ಪ್ರದರ್ಶಿಸುವರು, ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಿ, ವಿಜೇತರಾದವರಿಗೆ ನಗದು ಬಹುಮಾನ ನೀಡಲಾಗಿದೆ. ಅದೇ ರೀತಿಯಾಗಿ ಗುಂಪು ಸ್ಪರ್ಧೆಗಳಲ್ಲಿ ವಿಜೇತರಾದ ತಂಡಕ್ಕೆ ನಗದು ಬಹುಮಾನ ನೀಡಲಾಗಿದೆ.

ಯುವಜನೋತ್ಸವ :

ಯುವಜನರಲ್ಲಿ ಸಾಂಸ್ಕೃತಿಕ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಪ್ರತೀ ವರ್ಷ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿಯುವ ಉತ್ಸವಗಳನ್ನು ನೆಡಸಲಾಗುವುದು. ಇದರಲ್ಲಿ ಶಾಸ್ತ್ರೀಯ ಸಂಗೀತ, ನೃತ್ಯ, ವಾದ್ಯ, ಜಾನಪದಗೀತೆ, ನೃತ್ಯ, ನಾಟಕ ಮತ್ತು ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.

ಸ್ವಾಮಿ ವಿವೇಕಾನಂದ ಜಯಂತಿ :

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾಮಟ್ಟದಲ್ಲಿ ಹಾಗು ಎಲ್ಲಾ ತಾಲ್ಲೂಕುಗಳಲ್ಲಿ ಯುವ ಸಪ್ತಾಹ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಯುವಜನರಿಗಾಗಿ ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಸಾಹಸ ಕ್ರೀಡೆಗಳು ಹಾಗು ಗ್ರಾಮೀಣ ಕ್ರೀಡೆಗಳನ್ನು ಸಂಘಟಿಸಲಾಗಿದೆ.

ವಿಶೇಷಚೇತನರ ಕ್ರೀಡಾಕೂಟ :

ಅಂಗವಿಕಲರ ದಿನಾಚರಣೆ ಅಂಗನವಾಗಿ ನಡೆದ ಜಿಲ್ಲಾ ಮಟ್ಟದ ವಿಶೇಷಚೇತನರ ಕ್ರೀಡಾಕೂಟದಲ್ಲಿ ಭಾಗವಹಿಸಿದ ವಿಶೇಷಚೇತನ ಕ್ರೀಡಾಪಟುಗಳಿಗೆ ಬಹುಮಾನವನ್ನು ನೀಡಲಾಗಿದೆ.

2. ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ: 2205–00–104–0–28

ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣಗಳು, ಈಜು ಕೊಳ ಮತ್ತು 5 ತಾಲ್ಲೂಕಿನ ತಾಲ್ಲೂಕು ಕ್ರೀಡಾಂಗಣಗಳ ನಿರ್ವಹಣೆಗಾಗಿ ವೆಚ್ಚ ಭರಿಸಲಾಗಿದೆ. (ಹೊರಗುತ್ತಿಗೆ ನೌಕರರ ವೇತನ, ವಿದ್ಯುತ್ ಶುಲ್ಕ, ಸ್ವಚ್ಚತಾ ಸಾಮಾಗ್ರಿಗಳ ಖರೀದಿ, ಆಟದ ಮೈದಾನದ ಅಭಿವೃದ್ಧಿ ಹಾಗೂ ಗುರುತಿನ ಪುಡಿ, ಮತ್ತು ಕ್ರೀಡಾ ಸಲಕರಣೆಗಳ ಸರಬರಾಜಿಗಾಗಿ ವೆಚ್ಚಗಳಿಗೆ ಭರಿಸಲಾಗಿದೆ.)

3. ಕ್ರೀಡಾ ಶಾಲೆಗಳು: 2205–00–104–0–29:

ಗ್ರಾಮೀಣ ಪ್ರದೇಶದಲ್ಲಿ ಹುದುಗಿರುವ ಕ್ರೀಡಾಪ್ರತಿಭೆಗಳನ್ನು ಗುರುತಿಸಿ, ಅವರುಗಳನ್ನು ಪೋಷಿಸುವ ಮತ್ತು ವಿಕಸನಗೊಳಿಸುವ ಉದ್ದೇಶದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕ್ರೀಡಾ ಶಾಲೆ ಮತ್ತು ವಸತಿ ನಿಲಯಗಳನ್ನು ನಡೆಸಲಾಗುತ್ತಿದ್ದು, ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಆಯ್ಕೆ ಪ್ರಕ್ರಿಯೆಗಳನ್ನು ನಡಸಿ, ಉತ್ತಮ ಕ್ರೀಡಾಪಟುಗಳಿಗೆ ವಸತಿ ನಿಲಯದಲ್ಲಿ ಪ್ರವೇಶ ಕಲ್ಪಿಸಲಾಗಿದೆ.

ಅದರಂತೆ ಯುವಜನ ವಸತಿ ಶಾಲೆ/ನಿಲಯದಲ್ಲಿ ರಾಜ್ಯ ವಲಯದ **ಹಿರಿಯರ ವಿಭಾದ ಕುಸ್ತಿ ಕ್ರೀಡಾ ಪಟುಗಳು 56, ಕಿರಿಯರ ವಿಭಾಗದ ಅಥ್ಲೆಟಿಕ್, ಕಬಡ್ಡಿ ಕ್ರೀಡಾಪಟುಗಳು 45, ಜಿಲ್ಲಾ ಪಂಚಾಯತ್ ವಲಯದ ಕಬಡ್ಡಿ 18 ಕ್ರೀಡಾ ಪಟುಗಳು ಹಾಗೂ ಖೋ-ಖೋ 19 ಜನ ಕ್ರೀಡಾಪಟುಗಳು ಹೀಗೆ ಒಟ್ಟಾರೆ 142 ಕ್ರೀಡಾ ಪಟುಗಳು** ವ್ಯಾಸಂಗ ಮಾಡುತ್ತಿದ್ದಾರೆ.

4. **ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು:2205-00-104-0-30**

ಈ ಕಾರ್ಯಕ್ರಮದಡಿ ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಶೇಷ ಸಾಧನೆಗೈದ ಹಾಗೂ ಪ್ರಸ್ತುತ ಸಂಕಷ್ಟ ಪರಿಸ್ಥಿತಿಯಲ್ಲಿರುವ ಮತ್ತು 65 ವರ್ಷ ಮೇಲ್ಪಟ್ಟ ಹಿರಿಯ ಕ್ರೀಡಾಪಟುಗಳಿಗೆ ಇಲಾಖೆಯಿಂದ **2017-18ನೇ ಸಾಲಿನಿಂದ ರಾಜ್ಯ ಮಟ್ಟದ ಕುಸ್ತಿ ಕ್ರೀಡಾ ಪಟುಗಳಿಗೆ ರೂ.2500/-ಗಳು ರಾಷ್ಟ್ರ ಮಟ್ಟದ ಕುಸ್ತಿ ಕ್ರೀಡಾಪಟುಗಳಿಗೆ ರೂ.3000/-ಗಳು ಹಾಗೂ ಅಂತರರಾಷ್ಟ್ರ ಮಟ್ಟದಕುಸ್ತಿ ಕ್ರೀಡಾಪಟುಗಳಿಗೆ ರೂ.4000/-ಗಳು ಹಾಗು ರಾಜ್ಯ ಮಟ್ಟದ ಹಿರಿಯ ಕ್ರೀಡಾಪಟುಗಳಿಗೆ ರೂ.1000/-ಗಳು, ರಾಷ್ಟ್ರಮಟ್ಟದ ಹಿರಿಯ ಕ್ರೀಡಾಪಟುಗಳಿಗೆ ರೂ.1500/-ಗಳು, ಅಂತರರಾಷ್ಟ್ರ ಮಟ್ಟದ ಹಿರಿಯ ಕ್ರೀಡಾಪಟುಗಳಿಗೆ ರೂ.2000/-ಗಳಂತೆ ಪರಿಷ್ಕೃತ ಮಾಸಾಶನ ನಿಡಲಾಗುತ್ತಿದೆ.**

ಅದರಂತೆ ಜಿಲ್ಲೆಯಲ್ಲಿ **ಅಂತರರಾಷ್ಟ್ರ ಮಟ್ಟದ 07 ಹಿರಿಯ ಕ್ರೀಡಾಪಟುಗಳು, ರಾಷ್ಟ್ರಮಟ್ಟದ ಕುಸ್ತಿ/ಹಿರಿಯ ಕ್ರೀಡಾಪಟುಗಳು 11 ಮತ್ತು ರಾಜ್ಯ ಮಟ್ಟದ 47 ಕುಸ್ತಿ/ಹಿರಿಯ ಕ್ರೀಡಾಪಟುಗಳು ಹೀಗೆ ಒಟ್ಟಾರೆ 65 ಕುಸ್ತಿ/ಹಿರಿಯ** ಕ್ರೀಡಾ ಪಟುಗಳಿಗೆ ಪ್ರತೀ ಮಾಹೆ ಮಾಶಾಸನ ನೀಡಲಾಗುತ್ತಿದ್ದು, ಅವುಗಳಲ್ಲಿ ದಾವಣಗೆರೆ ತಾಲ್ಲೂಕಿನಿಂದ **39** ಸಂಖ್ಯೆ, ಮಾಯಕೊಂಡದಿಂದ 03 ಸಂಖ್ಯೆ, ಹರಿಹರ ತಾಲ್ಲೂಕಿನಿಂದ 15 ಸಂಖ್ಯೆ, ಹರಪನಹಳ್ಳಿ ತಾಲ್ಲೂಕಿನಿಂದ **07**ಸಂಖ್ಯೆ, ಚನ್ನಗಿರಿ ತಾಲ್ಲೂಕಿನಿಂದ **05** ಸಂಖ್ಯೆ ಹೊನ್ನಾಳಿ ತಾಲ್ಲೂಕಿನಿಂದ **03** ಸಂಖ್ಯೆ ಹೀಗೆ ಒಟ್ಟು 72 ಜನ ಹಿರಿಯ/ಕುಸ್ತಿ ಕ್ರೀಡಾ ಪಟುಗಳಿಗೆ ಮಾಸಾಶನ ನೀಡಲಾಗಿದೆ.

5. **ಗ್ರಾಮೀಣ ಕ್ರೀಡಾ ಕೇಂದ್ರಗಳು: 2205-00-104-0-31**

ಈ ಯೋಜನೆಯಡಿ ಗ್ರಾಮಾಂತರ ಪ್ರದೇಶ ಅಥವಾ ಹೋಬಳಿ ಮಟ್ಟದಲ್ಲಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಸದರಿ ಶಾಲೆಯಲ್ಲಿ ಗ್ರಾಮೀಣ ಕ್ರೀಡಾಕೇಂದ್ರ ಸ್ಥಾಪನೆ ಮಾಡಿ, ಜಿಲ್ಲೆಯ ಆರು ತಾಲ್ಲೂಕಿನಲ್ಲಿ ಹೋಬಳಿ ಮಟ್ಟದ ಅಥವಾ ಇತರೆ ಅಭಿವೃದ್ಧಿ ಹೊಂದಿರುವ ಶಾಲೆಗಳನ್ನು ಗುರುತಿಸಿ, 8 ತಿಂಗಳ ಕಾಲ ಸ್ಥಳೀಯವಾಗಿ ಪ್ರಚಲಿತ ವಿರುವ ಕಬಡ್ಡಿ, ಖೋ-ಖೋ, ವಾಲೀಬಾಲ್, ಕುಸ್ತಿ, ಹಾಕಿ, ಅಥ್ಲೆಟಿಕ್ಸ್ ಕ್ರೀಡೆಗಳಲ್ಲಿ ಸದರಿ ಶಾಲೆಯ ಮತ್ತು ಶಾಲೆಯ ಸುತ್ತ ಮುತ್ತಲಿನ ಇತರೆ ಶಾಲೆ ಕ್ರೀಡಾ ಪಟುಗಳನ್ನು ಗುರುತಿಸಿ, 8 ತಿಂಗಳ ಕಾಲ ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಶಾಲೆ ಪ್ರಾರಂಭವಾಗುವ ಮುನ್ನ ಮತ್ತು ಶಾಲೆಯು ಬಿಟ್ಟ ನಂತರ ಒಂದು ಗಂಟೆ ಹೆಚ್ಚುವರಿಯಾಗಿ ಸಂಬಂಧಪಟ್ಟ ಶಾಲೆಯ ದೈಹಿಕ ಶಿಕ್ಷಕರಿಂದ ತರಬೇತಿ ನೀಡಲಾಗಿದ್ದು, ಇಲಾಖೆಯ ತರಬೇತುದಾರರಿಂದ 15 ದಿನಗಳ ಕಾಲ ವಿಶೇಷ ತರಬೇತಿ ಶಿಬಿರವನ್ನು ಸಂಘಟಿಸಲಾಗಿದೆ.

ಈ ತರಬೇತಿ ಕೇಂದ್ರದಲ್ಲಿ ತರಬೇತಿ ಹೊಂದಿದ ಮಕ್ಕಳನ್ನು ಕ್ರೀಡಾ ಶಾಲೆಯಕ್ರೀಡಾ ನಿಲಯದ ಆಯ್ಕೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅದರಂತೆ 2017-18ನೇ ಸಾಲಿನ ಕ್ರಿಯಾ ಯೋಜನೆ ಅನುಮೋದನೆಯಂತೆ ಆಯ್ಕೆಯಾದ ಶಾಲೆಗಳಲ್ಲಿ ಕ್ರೀಡಾ ತರಬೇತಿ ಶಿಬಿತ ಸಂಘಟಿಸಿ, ಕ್ರೀಡಾ ಸಾಮಗ್ರಿಗಳನ್ನು ಪೂರೈಸಲಾಗಿದೆ.

6. **ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ 2205-00-104-0-32:**

ಯೋಜನೆಯಡಿಯಲ್ಲಿ ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸಮ್ಮೇಳನ ಮತ್ತು ಕಾರ್ಯಗಾರ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರಗಳನ್ನು ಸಂಘಟಿಸಲಾಗಿದೆ.

7. **ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ 2205-00-104-0-33 :**

ಜಿಲ್ಲಾ ಪಂಚಾಯತ್ ಸದಸ್ಯರಿಂದ ಪ್ರಸ್ತಾವನೆಗಳನ್ನು ಪಡೆದು ಜಿಲ್ಲೆಯ 14 ಸರ್ಕಾರಿ/ಅನುದಾನಿತ ಶೈಕ್ಷಣಿಕ ಸಂಸ್ಥೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಪೂರೈಸಲಾಗಿದೆ.

8. **ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ 2205-00-104-0-35:**

ಜಿಲ್ಲೆಯ 3 ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದಲ್ಲಿ 21 ದಿನಗಳ ಕಾಲ ಗ್ರಾಮೀಣ ಕ್ರೀಡಾ ತರಬೇತಿ ಶಿಬಿರಗಳನ್ನು ಸಂಘಟಿಸಲಾಗಿದೆ. ಚನ್ನಗಿರಿ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜು, ನಲ್ಲೂರು, ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಪ್ರೌಢ ಶಾಲೆ, ಬೆಳಗುತ್ತಿ ಹಾಗೂ ದಾವಣಗೆರೆ ತಾಲ್ಲೂಕಿನ ಶ್ರೀ ಲಿಂಗೇಶ್ವರ ಪ್ರೌಢ ಶಾಲೆ, ತೋಳಹುಣಸೆ.

9. **ಕ್ರೀಡಾ ಸಾಮಾಗ್ರಿಗಳ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯ 2205-00-104-0-36 :**

ಜಿಲ್ಲಾ ಕ್ರೀಡಾಂಗಣದಲ್ಲಿ ಹಾಗೂ 5 ತಾಲ್ಲೂಕು ಕ್ರೀಡಾಂಗಣಗಳಲ್ಲಿ ಪ್ರತಿದಿನ ನಡೆಯುವ ಕ್ರೀಡಾ ತರಬೇತಿಗೆ ಅವಶ್ಯಕವಾಗಿರುವ ಕ್ರೀಡಾ ಸಾಮಗ್ರಿಗಳನ್ನು ಪೂರೈಸಲಾಗಿದೆ.

6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮುಖಾಂತರ ಸಮಗ್ರ ಆರೋಗ್ಯ ರಕ್ಷಣೆಯ ಸೇವೆಯನ್ನು ಜನತೆಗೆ ಒದಗಿಸುತ್ತಿದೆ.

ಉದ್ದೇಶಗಳು:

1. ಪ್ರಾಥಮಿಕ ಆರೋಗ್ಯ ರಕ್ಷಣೆ ಅಂದರೆ ವಾಸಿಮಾಡುವ, ರೋಗಗಳನ್ನು ತಡೆಗಟ್ಟುವ ಪ್ರೋತ್ಸಾಹಿಸುವ ಮತ್ತು ಪುನರ್ ವಸತಿ ಸೇವೆಗಳನ್ನು ಒದಗಿಸುವುದು.
2. ದ್ವಿತೀಯ ಮತ್ತು ತೃತೀಯ ಹಂತದ ಆಸ್ಪತ್ರೆಗಳ ಮೂಲಕ ವಿಶೇಷ ವೈದ್ಯಕೀಯ ಸೇವೆಗಳನ್ನು ಒದಗಿಸುವುದು.
3. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳನ್ನು ಒದಗಿಸುವುದು.
4. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಹಾಗೂ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು.
5. ಪ್ರಯೋಗ ಶಾಲೆಗಳ ಸೇವೆಗಳನ್ನು ಒದಗಿಸುವುದು.
6. ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ಕಾರ್ಯಚಟುವಟಿಕೆಗಳ ಮುಖಾಂತರ ಸಮುದಾಯಕ್ಕೆ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು.
7. ಸಾರ್ವಜನಿಕ ಆರೋಗ್ಯ ಕಾಯ್ದೆಗಳ ಬಗ್ಗೆ ಅರಿವು ಮೂಡಿಸಿ ಅನುಷ್ಠಾನಕ್ಕೆ ತರುವುದು.
8. ಶಾಲಾ ಆರೋಗ್ಯ ಸೇವೆಗಳನ್ನು ಒದಗಿಸುವುದು.
9. ಪರಿಸರ ನೈರ್ಮಲ್ಯವನ್ನು ಕಾಪಾಡುವಂತೆ ಪ್ರೋತ್ಸಾಹಿಸುವುದು.
10. ಗುಣಮಟ್ಟದ ಆರೋಗ್ಯ ರಕ್ಷಣೆಯನ್ನು ಪಕ್ಷಪಾತವಿಲ್ಲದೆ ನ್ಯಾಯ ಸಮ್ಮತವಾಗಿ ನೀಡುವುದು.
11. ಪೌಷ್ಠಿಕ ಆರೋಗ್ಯದ ಬಗ್ಗೆ ಶಿಕ್ಷಣ ಮತ್ತು ಸೇವೆಯು ದೊರೆಯುವುದಕ್ಕೆ ಪ್ರೋತ್ಸಾಹ ನೀಡುವುದು.
12. ಇತರೆ ಇಲಾಖೆಗಳ ಜೊತೆ ಸಮನ್ವಯವನ್ನು ಸಾಧಿಸುವುದು.
13. ಸಮಾಜಕ್ಕೆ ಗುಣಮಟ್ಟದ ಆರೋಗ್ಯ ರಕ್ಷಣೆಯನ್ನು ಒದಗಿಸಲು ವೈದ್ಯರಿಗೆ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಗೆ ಅವರ ಜ್ಞಾನ ಹಾಗೂ ಕುಶಲತೆಯ ಮಟ್ಟವನ್ನು ಸುಧಾರಿಸಿಕೊಳ್ಳಲು ತರಬೇತಿಯನ್ನು ನೀಡುವುದು.
14. ಸಮಾಜವು ಆರೋಗ್ಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು.
    - ❖ ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ನೆರವಾಗುತ್ತಾರೆ. ಜಿಲ್ಲಾ ಆಸ್ಪತ್ರೆಗಳ ಮುಖ್ಯಾಧಿಕಾರಿಗಳಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು ಇರುತ್ತಾರೆ.
    - ❖ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಎಲ್ಲಾ ಆರೋಗ್ಯ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಾರೆ.
    - ❖ ಕಿರಿಯ ಆರೋಗ್ಯ ಕಾರ್ಯಕರ್ತರುಗಳು (ಮಹಿಳಾ ಮತ್ತು ಪುರುಷರು) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಡಿಯಲ್ಲಿ ಬರುವ ಉಪ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಾರೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ :

ರಾಷ್ಟ್ರೀಯ ನಾಗರೀಕರಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಬಡವರಿಗೆ, ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಪರಿಣಾಮಕಾರಿಯಾದ ಹಾಗೂ ಗುಣಮಟ್ಟದ ಆರೋಗ್ಯ ರಕ್ಷಣೆಯನ್ನು ಒದಗಿಸುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು ಆರಂಭಿಸಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಆಭಿಯಾನದ ಉದ್ದೇಶಗಳು :

- ➢ ಶಿಶು ಮರಣ ಪ್ರಮಾಣ ಹಾಗೂ ತಾಯಿಯ ಮರಣ ಪ್ರಮಾಣವನ್ನು ಕಡಿಮೆ ಮಾಡುವುದು.
- ➢ ಮಹಿಳೆಯರ ಆರೋಗ್ಯ, ಮಕ್ಕಳ ಆರೋಗ್ಯ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಮತ್ತು ಪೌಷ್ಠಿಕ ಆಹಾರ ರೋಗ ನಿರೋಧಕಗಳ ವ್ಯವಸ್ಥೆ, ಮೊದಲಾದ ಸಾರ್ವಜನಿಕ ಆರೋಗ್ಯ ಸೇವೆಗಳು ಎಲ್ಲರಿಗೂ ಏಕಕಾಲದಲ್ಲೂ ಸುಗಮವಾಗಿ ದೊರಕುವಂತೆ ಮಾಡುವುದು.
- ➢ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು ಬಾರದಂತೆ ತಡೆಯುವುದು ಮತ್ತು ಅವುಗಳನ್ನು ನಿಯಂತ್ರಿಸುವುದು.
- ➢ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಯ ಸೌಲಭ್ಯ ಎಲ್ಲರ ಕೈಗೆಟಕುವಂತೆ ಮಾಡುವುದು.
- ➢ ಜನಸಂಖ್ಯೆ ಸ್ಥಿರತೆ, ಲಿಂಗಭೇದ ನಿಯಂತ್ರಣಗಳನ್ನು ಸಾಧಿಸುವುದು.

- ➢ ಸ್ಥಳೀಯ ಆರೋಗ್ಯ ಸಂಪ್ರದಾಯಗಳನ್ನು ಪುನಶ್ಚೇತನಗೊಳಿಸುವುದು ಮತ್ತು ಆಯುಷ್ ಅನ್ನು ಮುಖ್ಯವಾಹಿನಿಗೆ ತರುವುದು.
- ➢ ಆರೋಗ್ಯಕರ ಜೀವನ ಶೈಲಿಯನ್ನು ಪ್ರಚುರಗೊಳಿಸುವುದು.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಲ್ಲಿ ಬರುವ ಮುಖ್ಯ ಭಾಗಗಳು :

- ❖ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ–2ನೇ ಹಂತ, ಜನನೀ ಸುರಕ್ಷಾ ಯೋಜನೆ, ಕುಟುಂಬ ಕಲ್ಯಾಣ.
- ❖ ಸಂಚಾರಿ ಆಸ್ಪತ್ರೆಗಳು, ಆರೋಗ್ಯರಕ್ಷಾಸಮಿತಿಗಳ ರಚನೆ 'ಆಶಾ' ಮುಕ್ತನಿಧಿ, ಭಾರತೀಯ ಸಾರ್ವಜನಿಕ ಆರೋಗ್ಯಸೇವಾಗುಣಮಟ್ಟಕ್ಕೆ ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು.
  - ಚುಚ್ಚುಮದ್ದಿನ ಕಾರ್ಯಕ್ರಮ
  - ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯಕ್ರಮಗಳು
  - ವಿವಿಧ ಇಲಾಖೆಗಳ ಸಹಕಾರ ಸಮನ್ವಯ

ಆರೋಗ್ಯ ಅಭಿಯಾನದ ಗುರಿಗಳ ಒಂದು ಪಕ್ಷಿ ನೋಟ:

- ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಬಲಪಡಿಸುವುದು.
- ಸಾರ್ವಜನಿಕ ಆರೋಗ್ಯ ಮೂಲಭೂತ ಸೌಕರ್ಯಗಳನ್ನು ಬಲಪಡಿಸಲಾಗುವುದು.
- ಪ್ರತಿಯೊಂದು ಉಪಕೇಂದ್ರಕ್ಕೆ ಸ್ಥಳೀಯ ಆರೋಗ್ಯ ಕಾರ್ಯಗಳಿಗಾಗಿಯೇ ವಾರ್ಷಿಕ 10,000 ರೂ.ಗಳ ಮುಕ್ತ ನಿಧಿಯ ಸ್ಥಾಪನೆ.
- ಸಮುದಾಯ ಆರೋಗ್ಯ ಕೇಂದ್ರಗಳನ್ನು 24 ಗಂಟೆಗಳ ಕಾಲವು ಚಿಕಿತ್ಸೆ ದೊರೆಯುವ ಮೊದಲನೇ ಹಂತದ ಆಸ್ಪತ್ರೆಗಳನ್ನಾಗಿ ಕಾರ್ಯರೂಪಕ್ಕೆ ತರುವುದು.
- ಜಿಲ್ಲಾ ಮಟ್ಟದಲ್ಲಿ ಸಂಚಾರಿ ವೈದ್ಯಕೀಯ ಘಟಕಗಳನ್ನು ಒದಗಿಸುವುದು.
- ಆಸ್ಪತ್ರೆಗಳ ನಿರ್ವಹಣೆಗಾಗಿ ಪಾಲ್ಗೊಳ್ಳುದಾರರ ಸಮಿತಿಯ ರಚನೆಯನ್ನು ಪ್ರೋತ್ಸಾಹಿಸುವುದು (ಆರೋಗ್ಯ ರಕ್ಷಾ ಸಮಿತಿ)
- ಆರೋಗ್ಯ ಸಂಸ್ಥೆಗಳಲ್ಲಿಯೇ ಹೆರಿಗೆ ಮಾಡಿಸಿಕೊಳ್ಳಲು ಪ್ರೋತ್ಸಾಹಿಸುವುದು.
- ಆರೋಗ್ಯ ಸಂಸ್ಥೆಗಳಲ್ಲೇ ಹೆರಿಗೆ ಮಾಡಿಸಿಕೊಳ್ಳುವ ಬಡತನ ರೇಖೆಗಿಂತ ಕಡಿಮೆ ಆದಾಯವಿರುವ ಗರ್ಭಿಣಿ ಸ್ತ್ರೀಯರಿಗೆ ಹೆಚ್ಚಿನ ಪ್ರೋತ್ಸಾಹ ಧನ ನೀಡಲಾಗುವುದು.
- ಪಂಚಾಯತ್ ರಾಜ್ ಸಂಸ್ಥೆಗಳ, ಸ್ವಯಂ ಸೇವಾ ಸಂಸ್ಥೆಗಳ, ಖಾಸಗಿ ಆರೋಗ್ಯ ಸಂಸ್ಥೆಗಳ ಜೊತೆ ಸಹಭಾಗಿತ್ವ ಹೊಂದುವುದು.
- ಜಿಲ್ಲಾ ಆರೋಗ್ಯ ವ್ಯವಸ್ಥಾಪನೆಯಲ್ಲಿ ಕಾರ್ಯಕ್ರಮಗಳ ಅನುಷ್ಠಾನದ ವಿಕೇಂದ್ರಿಕರಣ.
- ಆಯುಷ್ ವೈದ್ಯರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಿಯೋಜಿಸಿ, ವೈದ್ಯರುಗಳ ಕೊರತೆಯನ್ನು ತಪ್ಪಿಸುವುದು.
- ಆರೋಗ್ಯ ಮಾಹಿತಿಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುವುದು.
- ಸಂಶೋಧನೆಗೆ ಹಾಗೂ ಪ್ರಯೋಗಕ್ಕಾಗಿ ಪ್ರೋತ್ಸಾಹ ನೀಡಲಾಗುವುದು.
- ಇದು ನಿಯಮಿತ ಕಾಲದ ಗುರಿಗಳನ್ನು ಗೊತ್ತುಪಡಿಸುತ್ತದೆ ಹಾಗೂ ಅದರ ಪ್ರಗತಿಗಳ ಬಗ್ಗೆ ವರದಿಯನ್ನು ಪ್ರಚುರಪಡಿಸುತ್ತದೆ.
  ಈ ಯೋಜನೆಯ ಅನುಷ್ಠಾನ ಹಾಗೂ ಮೇಲ್ವಿಚಾರಣೆಗಾಗಿ.

ಅ) ಗ್ರಾಮೀಣ ಮಟ್ಟದಲ್ಲಿ –ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ರಚನೆ.

ಆ) ಸಾರ್ವಜನಿಕ ಆಸ್ಪತ್ರೆಗಳಲ್ಲಿ – ರೋಗಿ ಕಲ್ಯಾಣ ಸಮಿತಿಗಳ ರಚನೆ.

ಇ) ಜಿಲ್ಲಾ ಮಟ್ಟದಲ್ಲಿ –ಜಿಲ್ಲಾ ಪಂಚಾಯತ್‌ಯಲ್ಲಿ ಜಿಲ್ಲೆಗಳಲ್ಲಿ ಜಿಲ್ಲಾ ಆರೋಗ್ಯ ಅಭಿಯಾನ ಸಮಿತಿಗಳ ರಚನೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಗುರಿಗಳು :ಸಮುದಾಯ ಮಟ್ಟದಲ್ಲಿ

- ಸಾಮಾನ್ಯ ರೋಗಗಳಿಗೆ ಅಗತ್ಯವಿರುವ ವೈದ್ಯಕೀಯ ಕಿಟ್ ಹೊಂದಿದ, ತರಬೇತಿ ಪಡೆದ ಸಮುದಾಯ ಮಟ್ಟದ ಕಾರ್ಯಕರ್ತರ ಸೇವೆ ಈಗ ಹಳ್ಳಿಗಳಿಗೂ ಲಭ್ಯವಾಗುವುದು.

- ಲಸಿಕೆಗಳನ್ನು ನೀಡುವುದು, ಗರ್ಭಪೂರ್ವ ಮತ್ತು ಹೆರಿಗೆ ನಂತರದ ತಪಾಸಣೆ ಮಾಡುವುದು ಮತ್ತು ತಾಯಿ ಮಗುವಿನ ಆರೈಕೆ ಮೊದಲಾದ ಸೇವೆಗಳನ್ನು ನೀಡಲು ಅಂಗನವಾಡಿ ಮಟ್ಟದಲ್ಲಿ "ಆರೋಗ್ಯ ದಿನ" ಗಳನ್ನು ಆಚರಿಸಲಾಗುವುದು.
- ಉಪಕೇಂದ್ರಗಳು ಮತ್ತು ಆಸ್ಪತ್ರೆಗಳಲ್ಲಿ ಸಾಮಾನ್ಯ ರೋಗಗಳಿಗೆ ಅಗತ್ಯವಿರುವ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಮಾಡುವುದು.
- ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳ ಲಭ್ಯತೆ ಔಷಧಗಳ ಲಭ್ಯತೆ ಹಾಗೂ ಗುಣಮಟ್ಟದ ಸೇವಾ ಖಾತ್ರಿಯನ್ನು ಒಳಗೊಂಡಂತೆ ಉತ್ತಮ ವೈದ್ಯಕೀಯ ನೆರವು ದೊರೆಯುವಂತೆ ಮಾಡುವುದು.
- ಸಾರ್ವತ್ರಿಕ ಲಸಿಕೆ ಹಾಕುವಿಕೆಯ ಕಾರ್ಯ ಫಲಪ್ರದವಾಗುವಂತೆ ಮಾಡಲು ಇದಕ್ಕಾಗಿ ಉಪಯೋಗಿಸಿದ ನಂತರ ತನ್ನಷ್ಟಕ್ಕೆ ತಾನೇ ಮೊಂಡಾಗುವ ಸಿರಿಂಜ್‌ಗಳನ್ನು ಬಳಸುವುದು, ಪೂರಕ ವ್ಯಾಕ್ಸೀನ್ ಪೂರೈಕೆ ಮತ್ತು ಉತ್ತಮ ಸೇವೆಗಳು ಸಕಾಲದಲ್ಲಿ ಲಭ್ಯವಾಗುವಂತೆ ಮಾಡುವುದು.
- ರೆಫರಲ್ ಆಸ್ಪತ್ರೆ ಸೌಲಭ್ಯ, ಸಾರಿಗೆ ಸೌಲಭ್ಯ, ಗರ್ಭಿಣಿಯರಿಗೆ ಜೊತೆಗಾರರನ್ನು ಒದಗಿಸುವುದು ಮತ್ತು ಸೂಕ್ತ ಆಸ್ಪತ್ರೆ ಸೇವೆ ಒದಗಿಸುವುದನ್ನು "ಜನನಿ ಸುರಕ್ಷಾ ಯೋಜನೆ" ಯಡಿ ಪರಿಣಾಮಕಾರಿಯಾಗಿ ಅಳವಡಿಸುತ್ತಿರುವುದರಿಂದ ಗ್ರಾಮೀಣ ಪ್ರದೇಶದ ಮಹಿಳೆಯರು ಆಸ್ಪತ್ರೆಗಳಲ್ಲಿಯೇ ಹೆರಿಗೆಗೊಳಗಾಗಬಹುದಾದ ಸೌಲಭ್ಯ ಲಭ್ಯವಾಗುತ್ತಿದೆ.
- ಅಭಿಯಾನದ ಮೂಲಕ "ಸಮುದಾಯ ಆರೋಗ್ಯ ವಿಮೆ" ಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತಿರುವುದರಿಂದ ಕಡಿಮೆ ಖರ್ಚಿನಲ್ಲಿ ಉತ್ತಮ ಖಾತ್ರಿ ವೈದ್ಯಕೀಯ ಸೇವೆ ಲಭ್ಯವಾಗುವಂತೆ ಮಾಡುವುದು.
- ಪ್ರತಿ ಮನೆಗೂ ಶೌಚಾಲಯ ಒದಗಿಸುವುದು.
- ಸಂಚಾರಿ ವಾಹನ ಘಟಕಗಳ ಮೂಲಕ ಜಿಲ್ಲಾ ಮಟ್ಟದಲ್ಲಿ ದೂರ ಪ್ರದೇಶಗಳಿಗೂ ವೈದ್ಯಕೀಯ ಸೇವೆ ತಲುಪಿಸಲು ಸಾಧ್ಯವಾಗುವಂತೆ ಮಾಡುವುದು.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಮಾರ್ಗದರ್ಶನದನ್ವಯ ಜಿಲ್ಲಾ ಮಟ್ಟದಲ್ಲಿ ಅಭಿಯಾನದ ಅನುಷ್ಠಾನವು ಜಿಲ್ಲಾ ಅರೋಗ್ಯ ಅಭಿಯಾನದ ಹೊಣೆಯಾಗಿರುತ್ತದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಗೆ ಹಾಗೂ ಆಡಳಿತ ಮಂಡಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಅವರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಆರೋಗ್ಯ ಮಿಷನ್‌ನ ಅಧ್ಯಕ್ಷರಾಗಿ ಜಿಲ್ಲಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.

ಕೋಷ್ಟಕ 6.1 : ದಾವಣಗೆರೆ ಜಿಲ್ಲೆಯ ಸಾಮಾನ್ಯ ಮಾಹಿತಿ

ತಾಲ್ಲೂಕು	ಜನ ಸಂಖ್ಯೆ	ಉಪ ಕೇಂದ್ರ	ಪ್ರಾಆಕೇಂದ್ರ	ಸ.ಆ ಕೇಂದ್ರ	ಸಾ, ಆಸ್ಪತ್ರೆ	ಜಿಲ್ಲಾ ಆಸ್ಪತ್ರೆ	24*7	FRU	ವಿಹೆಚ್‌ಸಿ	ಆಶಾ
ದಾವಣಗೆರೆ	7.15	67	34	–	–	2	7	2	158	326
ಹರಿಹರ	2.76	42	10	1	1	–	5	1	76	178
ಜಗಳೂರು	1.70	41	10	–	1	–	3	1	136	160
ಹರಪನಹಳ್ಳಿ	3.08	57	17	2	1	–	12	1	81	221
ಚನ್ನಗಿರಿ	3.11	77	23	2	1	–	8	1	197	268
ಹೊನ್ನಾಳಿ	2.38	42	12	1	1	–	4	1	162	213
ಒಟ್ಟು	20.11	326	106	6	5	2	39	7	810	1366

ತಾಯಂದಿರ ಮರಣ, ಶಿಶುಗಳ ಮರಣ, ಫಲವತ್ತತೆಯ ದರ, ಮರಣ ದರ ಹಾಗೂ ರೋಗಗಳ ದರಗಳನ್ನು ಕಡಿಮೆ ಮಾಡಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವು ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳ ವಿವರಣೆಯನ್ನು ಈ ಕಳಗೆ ನೀಡಲಾಗಿದೆ.

1. ಜನನಿ ಸುರಕ್ಷಾ ಯೋಜನೆ :

ಉದ್ದೇಶ : ತಾಯಿ ಮತ್ತು ಮಗುವಿನ ಮರಣವನ್ನು ಕಡಿಮೆ ಮಾಡುವುದೇ ಈ ಯೋಜನೆಯ ಉದ್ದೇಶ.

ಅರ್ಹರಾದವರು :

- ಬಡತನ ರೇಖೆಗಿಂತ ಕೆಳಗಿರುವವರ ಕುಟುಂಬದ ಗರ್ಭಿಣಿಯರು
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಕ್ಕೆ ಸೇರಿದ ಗರ್ಭಿಣಿಯರು
- ಎರಡು ಸಜೀವ ಜನನಗಳಿಗೆ ಮಾತ್ರ ಸೀಮಿತ.
- 19 ವರ್ಷಕ್ಕೆ ಮೇಲ್ಪಟ್ಟಿರಬೇಕು.
- ಆರೋಗ್ಯ ಕಾರ್ಯಕರ್ತೆಯರಲ್ಲಿ ಹೆಸರನ್ನು ನೊಂದಾಯಿಸಬೇಕು.

ಅನುಕೂಲತೆಗಳು :(ಆರ್ಥಿಕ ಸಹಾಯ)

- ಮನೆಯಲ್ಲಿ ಹೆರಿಗೆಯಾದಲ್ಲಿ ರೂ. 500/– ಗಳನ್ನು ಸಹಾಯಧನವಾಗಿ ಆಕೆಗೆ ನೀಡಲಾಗುವುದು.
- ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಥಿಕ ಹೆರಿಗೆಯಾದಲ್ಲಿ ಆಕೆಗೆ ರೂ.700/–ಗಳನ್ನು ನೀಡಲಾಗುವುದು.
- ನಗರ ಪ್ರದೇಶದಲ್ಲಿ ಸಾಂಸ್ಥಿಕ ಹೆರಿಗೆಯಾದಲ್ಲಿ ಆಕೆಗೆ ರೂ. 600/– ಗಳನ್ನು ನೀಡಲಾಗುವುದು.
- ಖಾಸಗಿ ಆಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆಯಾದರೆ ಫಲಾನುಭವಿಗಳಿಗೆ ರೂ.700/–ಗಳನ್ನು ನೀಡಲಾಗುವುದು.

ಕೋಷ್ಟಕ 6.2 : ಜನನಿ ಸುರಕ್ಷಾ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳು

ವಿವರಗಳು	2012–13	2013–14	2014–15	2015–16	2016–17	2017–18
ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ	20691	14004	17395	16484	15227	16023

2. ಜನನಿ ಶಿಶು ಸುರಕ್ಷಾ ಯೋಜನೆ :

ರಾಷ್ಟ್ರೀಯ ಗ್ರಾಮೀಣಾ ಆರೋಗ್ಯ ಅಭಿಯಾನದಡಿಯಲ್ಲಿ ಪ್ರತಿ ಗರ್ಭಿಣಿ ಸ್ತ್ರೀಗೆ ಅಗತ್ಯವಿರುವ ಪ್ರಸೂತಿ ಪೂರ್ವ, ಪ್ರಸೂತಿ ವೇಳೆ ಮತ್ತು ಪ್ರಸೂತಿ ನಂತರದ ಸೇವೆಗಳು ಹಾಗೂ ನವಜಾತ ಶಿಶುವಿಗೆ ಉಚಿತ ಸೇವೆಯನ್ನು ನೀಡಲು "ಜನನಿ ಶಿಶು ಸುರಕ್ಷಾ ಕಾರ್ಯಕ್ರಮ" ಎಂಬ ವಿನೂತನ ಯೋಜನೆಯನ್ನು ಸೆಪ್ಟಂಬರ್ 2011 ರಿಂದ ಜಾರಿಗೊಳಿಸಲಾಗಿರುತ್ತದೆ.

2013–14ನೇ ಸಾಲಿನಿಂದ 2016–17ನೇ ಸಾಲಿನವರೆಗೆ ಫಲಾನುಭವಿಗಳಿಗೆ ಜೆ.ಎಸ್.ಎಸ್.ಕೆ ಪ್ರೋತ್ಸಾಹಧನ ನೀಡಿದ ವಿವರ.

ಜೆ.ಎಸ್.ಎಸ್.ಕೆ/ವರ್ಷ	2013–14	2014–15	2015–16	2016–17	2017–18
ಒಟ್ಟು ಫಲಾನುಭವಿಗಳ ಸಂಖ್ಯೆ	24990	24359	22025	23360	25460

3. 24 x7 ಪ್ರಾಥಮಿಕ ಆರೋಗ್ಯ ಕೇಂದ್ರ :

ಸಮುದಾಯಕ್ಕೆ ಮೂಲಭೂತ ಆರೋಗ್ಯ ಸೇವೆಗಳನ್ನು ನಿರಂತರವಾಗಿ ಒದಗಿಸುವ ಉದ್ದೇಶದಿಂದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕನಿಷ್ಠ ಶೇ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ದಿನದ 24 ಗಂಟೆಗಳ ಕಾಲವೂ ಹಾಗೂ ವಾರದ 7 ದಿನಗಳ ಉತ್ತಮ ಗುಣಮಟ್ಟದ ಸೇವೆ ಒದಗಿಸಲು ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಈ ಕೇಂದ್ರಗಳಲ್ಲಿ ಸಹಜ ಹೆರಿಗೆಯನ್ನು ನಿರ್ವಹಿಸುವುದರ ಜೊತೆಗೆ ಕ್ಲಿಷ್ಟಕರ ಹೆರಿಗೆಗಳನ್ನು ಮತ್ತು ನವಜಾತ ಶಿಶುವಿಗೆ ತೀವ್ರತರವಾದ ತೊಂದರೆಯಿದ್ದಲ್ಲಿ ಕೂಡಲೆ ಎಫ್.ಆರ್.ಯು ಗೆ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಲಾಗುವುದು.

24 x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಯಾವುದೇ ತುರ್ತು ಪರಿಸ್ಥಿತಿಯಲ್ಲಿ ರೋಗಿಯನ್ನು ಬೇರೆಡೆಗೆ ಸಾಗಿಸಲು ಆಂಬ್ಯುಲೆನ್ಸ್, ಜನನಿ ಸುರಕ್ಷಾ ವಾಹಿನಿ ಅಥವಾ ಆರೋಗ್ಯ ಕವಚ–108 ವಾಹನಗಳ ವ್ಯವಸ್ಥೆ ಇರುತ್ತದೆ. ಇಲ್ಲಿ ಎಂ.ಬಿ.ಬಿ.ಎಸ್ ವೈದ್ಯರಲ್ಲದೇ 3 ಶುಶ್ರೂಷಕಿಯರು 8 ಗಂಟೆಗೆ ಒಬ್ಬರಂತೆ ದಿನದ 24 ಗಂಟೆಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸುತ್ತಾರೆ.

ಮಾರ್ಚ್ 2018 ರವರೆಗೆ ಜಿಲ್ಲೆಯಲ್ಲಿ 24x7 ಗಂಟೆಗಳ ಕಾಲ 391 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತದೆ.

ವರ್ಷ	2015–16	2016–17	2017–18
24*7 ಪ್ರಾಥಮಿಕ ಆರೋಗ್ಯ ಕೇಂದ್ರ ಸಂಖ್ಯೆ	41	41	37
ಹೆರಿಗೆಗಳ ನಿರ್ವಹಿಸಿದ್ದು	2846	2888	2523

ಎಫ್‌ಆರ್‌ಯು (ಪ್ರಥಮ ಪರಿವೀಕ್ಷಣ ಘಟಕ) :

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಠಿಣ ಪ್ರಕರಣವೆಂದು ಕಂಡು ಬಂದು, ತಜ್ಞವೈದ್ಯರ ಅವಶ್ಯಕತೆ ಅಗತ್ಯವಿದೆಯೆಂದು ತಿಳಿದು ಬಂದ ತಕ್ಷಣ, ರೋಗಿಯನ್ನು / ಗರ್ಭಿಣಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ರವಾನಿಸುವ ಮೇಲ್ದರ್ಜೆಯ ಆಸ್ಪತ್ರೆಯನ್ನು ಎಫ್‌ಆರ್‌ಯು (ಪ್ರಥಮ ಪರಿವೀಕ್ಷಣ ಘಟಕ) ಎಂದು ಪರಿಗಣಿಸಲಾಗಿದೆ.

ಎಫ್.ಆರ್.ಯು.ವನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗಿದೆ.

1. ರಕ್ತ ಶೇಖರಣಾ ಘಟಕ
2. ತಾಯಿ ಮತ್ತು ನವಜಾತ ಶಿಶುವಿನ ಆರೋಗ್ಯವನ್ನು ನೋಡಿಕೊಳ್ಳುವ ಸಲುವಾಗಿ ಗುತ್ತಿಗೆ ಆಧಾರದ ಮೇಲೆ ತಜ್ಞರ ನೇಮಕಾತಿ.
3. ತುರ್ತು ವಾಹನ ಸೌಲಭ್ಯ ಹಾಗೂ
4. ಹೆಚ್ಚುವರಿ ಅರೆ ವೈದ್ಯಕೀಯ ಸಿಬ್ಬಂದಿಯ ನೇಮಕಾತಿ (ಉದಾ: ಪ್ರಯೋಗ ಶಾಲಾ ತಂತ್ರಜ್ಞರು,ಇತ್ಯಾದಿ)

ಮೇಲಿನ ಸೌಲಭ್ಯಗಳನ್ನೊಳಗೊಂಡಂತೆ ಹಾಗೂ ಭೌಗೋಳಿಕ ನಕ್ಷೆಯನ್ವಯ ಜಿಲ್ಲಾ ಆಸ್ಪತ್ರೆಗಳು, ಸಿಸೇರಿಯನ್ ಶಸ್ತ್ರ ಚಿಕಿತ್ಸೆಗಳು ನಡೆಯುತ್ತಿರುವ ಸರ್ಕಾರಿ ಹೆರಿಗೆ ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಯನ್ನು ಸೇರಿಸಿ ಜಿಲ್ಲೆಯಲ್ಲಿ ಒಟ್ಟು 7 ಆರೋಗ್ಯ ಕೇಂದ್ರಗಳನ್ನು ಎಫ್‌ಆರ್‌ಯುಗಳೆಂದು ಗುರುತಿಸಲಾಗಿದೆ.

ವರ್ಷ	2015–16	2016–17	2017–18
ಎಫ್.ಆರ್.ಯು ಕೇಂದ್ರ ಸಂಖ್ಯೆ	7	7	7
ಹೆರಿಗೆಗಳ ನಿರ್ವಹಿಸಿದ್ದು	18169	17889	17814

4. ಆರೋಗ್ಯ ಕವಚ (108)ಪರಿಚಯ :

ರಾಜ್ಯ ಸರ್ಕಾರವು "ಆರೋಗ್ಯ ಕವಚ" ಎಂಬ ಹೊಸ ಯೋಜನೆಯಡಿ ರಾಜ್ಯದ ಜನರಿಗೆ ತುರ್ತು ನಿರ್ವಹಣಾ ಪ್ರತಿಕ್ರಿಯೆ ಸೇವೆಯನ್ನು ಒದಗಿಸಲು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ದಿನಾಂಕ 01 ನೇ ನವೆಂಬರ್ 2008 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಿರುತ್ತದೆ.

"ಆರೋಗ್ಯ ಕವಚ" 108 ಸೇವೆಯು ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ಸಮಗ್ರ ತುರ್ತು ಚಿಕಿತ್ಸೆ ಸೇವೆಯನ್ನು ನೀಡುವ ಸಲುವಾಗಿ ಉಚಿತ ಟೋಲ್ ಫ್ರೀ 108 ನಂಬರ್‌ನೊಂದಿಗೆ 24 ಗಂಟೆಗಳ ಕಾಲ ಸಕಾಲಿಕ ನಿರಂತರ ಸೇವೆಯನ್ನು ಪರಿಣಾಮಕಾರಿಯಾಗಿ ಒದಗಿಸುತ್ತಿದೆ.

ಒಟ್ಟು 24 ಆಂಬ್ಯುಲೆನ್ಸ್ ವಾಹನಗಳನ್ನು ಜಿಲ್ಲೆಯಾದ್ಯಂತ ಸೂಕ್ತ ಸ್ಥಳಗಳಲ್ಲಿ ನಿಯೋಜಿಸಲಾಗಿದೆ. ತುರ್ತು ಅವಶ್ಯಕತೆಯ ಕರೆ ಬಂದಲ್ಲಿ ವಾಹನಗಳನ್ನು 20 ನಿಮಿಷಗಳಲ್ಲಿ ನಗರ ಪ್ರದೇಶಕ್ಕೆ ಹಾಗೂ 30 ನಿಮಿಷಗಳಲ್ಲಿ ಗ್ರಾಮೀಣ ಪ್ರದೇಶಕ್ಕೆ (ಸರಾಸರಿ 25.5 ನಿಮಿಷದಲ್ಲಿ) ತಲುಪಿಸುವ ವ್ಯವಸ್ಥೆ ಮಾಡಲಾಗಿರುತ್ತದೆ. ರೋಗಿಗೆ ಆಸ್ಪತ್ರೆ ಪೂರ್ವ ಚಿಕಿತ್ಸೆಯನ್ನು ನುರಿತ ಸಿಬ್ಬಂದಿಯಿಂದ (Medical Technicians) ನೀಡುತ್ತಾ ರೋಗಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ವ್ಯವಸ್ಥೆ ಇರುತ್ತದೆ.

ಮುಖ್ಯ ಉದ್ದೇಶ:

- ತುರ್ತು ಚಿಕಿತ್ಸೆಯ ಮೂಲಕ ಗರ್ಭಿಣಿಯರಿಗೆ ತೊಡಕಿನ ಹೆರಿಗೆಯಿಂದ ಉಂಟಾಗಬಹುದಾದ ತಾಯಿ ಮತ್ತು ಮಗುವಿನ ಮರಣವನ್ನು ಕಡಿಮೆಗೊಳಿಸಲು ಸಾಧ್ಯ.
- ಅಪಘಾತಗಳಿಂದ ಸಂಭವಿಸಬಹುದಾದ ಸಾವುಗಳು, ಅಂಗವಿಕಲತೆಯನ್ನು ಕಡಿಮೆ ಮಾಡುವುದು.
- ಇತರೆ ತುರ್ತು ಆರೋಗ್ಯ ಸೇವೆಗಳಿಗಾಗಿ (ವೈದ್ಯಕೀಯ, ಪೋಲೀಸ್ ಮತ್ತು ಅಗ್ನಿಶಾಮಕ)

ಕೋಷ್ಟಕ 6.3 : ವಿವರ

ವರ್ಷ	ವೈದ್ಯಕೀಯ	ಪೋಲೀಸ್	ಬೆಂಕಿ ಅವಘಡಗಳು	ಒಟ್ಟು
2015–16	16,268	69	0	16,337
2016–17	35,994	36	0	35,980
2017–18	34,073	17	0	34,090

5. ಸುವರ್ಣ ಆರೋಗ್ಯ ಚೈತನ್ಯ ಶಾಲಾ ಆರೋಗ್ಯ ಕಾರ್ಯಕ್ರಮ

ಶಾಲಾ ಆರೋಗ್ಯ ಸೇವೆಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಒಂದು ಚಟುವಟಿಕೆಯಾಗಿದೆ. ಮುಂದಿನ ಪೀಳಿಗೆಯ ರಕ್ಷಣೆಗಾಗಿ ಹಾಗೂ ಅವರ ಆರೋಗ್ಯಕ್ಕಾಗಿ ಇದು ಮಹತ್ವವನ್ನು ಪಡೆದಿದೆ.

ಉದ್ದೇಶಗಳು :

- ಶಾಲಾ ಮಕ್ಕಳನ್ನು ಆರೋಗ್ಯವಂತರನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳುವುದು.
- ಮಕ್ಕಳಲ್ಲಿರುವ ರೋಗಗಳನ್ನು ತಡೆಗಟ್ಟುವುದು.
- ರೋಗಗಳನ್ನು/ತೊಂದರೆಗಳನ್ನು ಶೀಘ್ರವಾಗಿ ಪತ್ತೆಹಚ್ಚಿ, ಚಿಕಿತ್ಸೆ ನೀಡಿ ಅನುಸರಣಾ ಭೇಟಿ ನೀಡುವುದು.
- ಮಕ್ಕಳಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದು.
- ಆರೋಗ್ಯಕರ ಪರಿಸರವನ್ನು ನಿರ್ಮಾಣ ಮಾಡುವುದು.

ಸುವರ್ಣ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಒಂದರಿಂದ 10ನೇ ತರಗತಿಯಲ್ಲಿ ಓದುವ ಎಲ್ಲಾ ವಿದ್ಯಾರ್ಥಿಗಳಿಗೆ ಅಂದರೆ ಸರ್ಕಾರಿ, ಸರ್ಕಾರಿ ಅನುದಾನಿತ/ಅನುದಾತ ರಹಿತ ಹಾಗೂ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಒಂದು ಸಲ ಆರೋಗ್ಯ ತಪಾಸಣೆ ಮಾಡಲಾಗುವುದು.

- ಆರೋಗ್ಯ ತಪಾಸಣೆ ಕಾಲಕ್ಕೆ ಕಂಡು ಹಿಡಿದ ಕಾಯಿಲೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಅಂದರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಲಭ್ಯವಿರುವ ಎಲ್ಲಾ ಔಷಧೋಪಚಾರ ಉಚಿತವಾಗಿ ನೀಡಲಾಗುವುದು.
- ಕೆಲವು ವಿದ್ಯಾರ್ಥಿಗಳಿಗೆ ವಿಶೇಷ ತಜ್ಞ ವೈದ್ಯರಿಂದ ಉಪಚಾರ ಬೇಕಾಗುತ್ತಿದ್ದು ಅವರುಗಳಿಗೆ NRHMಅನುದಾನದಡಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗಳನ್ನು ಸಂಪೂರ್ಣವಾಗಿ ಉಚಿತವಾಗಿ ಒದಗಿಸಲಾಗುವುದು.
- ಎನ್.ಆರ್.ಹೆಚ್.ಎಂ.ನಡಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಕೈಗೊಂಡಾಗ – ಉಚಿತ ರೋಗ ತಪಾಸಣೆ(Lab Investigation), ಉಚಿತ ಇಂಪ್ಲಾಂಟ್ಸ್, ಉಚಿತ ಶಸ್ತ್ರಚಿಕಿತ್ಸೆ ಒದಗಿಸುವುದಲ್ಲದೆ ಶಸ್ತ್ರಚಿಕಿತ್ಸೆಯ ನಂತರ ವಿದ್ಯಾರ್ಥಿ ಹಾಗೂ ಒಬ್ಬ ಪಾಲಕರಿಗೆ ಅವರ ಊರಿನಿಂದ ಬಂದು ಹೋಗುವ ನಿಗದಿತ ಬಸ್ ಚಾರ್ಜ್‌ನ್ನು ರೂ.1000/–ಕ್ಕೆ ಮೀರದಂತೆ ಕೊಡಲಾಗುವುದು.

6. ಆಶಾ ಕಾರ್ಯಕ್ರಮ :

ಗ್ರಾಮೀಣ ಜನತೆಯ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಭಾರತ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು ಪ್ರಾರಂಭಿಸಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಉಪ ಕೇಂದ್ರವು ಜನ ಸಮುದಾಯದೊಡನೆ ಸಂಪರ್ಕದ ಅಂತಿಮ ಕೊಂಡಿಯಾಗಿರುತ್ತದೆ. ಇವರು ಪ್ರತಿ 5,000 ಜನಸಂಖ್ಯೆಗೆ ಸೇವೆ ಒದಗಿಸುತ್ತಾರೆ. ಈ ಕೆಂದ್ರಗಳ ಎಎನ್‌ಎಂ ಮೇಲೆ ಹೊರಲಾರದಷ್ಟು ಹೊಣೆ ಇರುತ್ತದೆ. ಆದ್ದರಿಂದ ಈ ಅಂತರ ತುಂಬಲು, ಜನ ಸಮುದಾಯ ಸ್ಥಳದಲ್ಲೇ ಇರುವ ನೂತನ ಕಾರ್ಯನಿರ್ವಾಹಕ ತಂಡವನ್ನು ಅಂದರೆ 'ಆಶಾ' ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯರನ್ನು ನೇಮಿಸಲು ಉದ್ದೇಶಿಸಲಾಗಿದೆ. ಇವರು ಹಳ್ಳಿಗಳಲ್ಲಿ ಗರ್ಭಿಣಿ ಹಾಗೂ ಶಿಶು ಆರೋಗ್ಯ ಸೇವೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಪ್ರಥಮ ಹಂತದ ಸಹಾಯಕ ಕೇಂದ್ರ ವ್ಯಕ್ತಿಯಾಗಿ ಹಾಗೂ ಸಮುದಾಯ ಮತ್ತು ಆರೋಗ್ಯ ಸೇವೆ ಒದಗಿಸುವವರ ನಡುವಣ ಸಂಪರ್ಕ ಬಿಂದುವಾಗಿಯೂ ಕೆಲಸ ಮಾಡುವರು.

'ಆಶಾ ಕಾರ್ಯಕರ್ತೆಯರ ಆಯ್ಕೆ'

- 1000 ಜನಸಂಖ್ಯೆಗೆ ಒಬ್ಬ 'ಆಶಾ' ಕಾರ್ಯಕರ್ತೆಯನ್ನು ನೇಮಿಸಲಾಗುವುದು.
- ಜಿಲ್ಲೆಯಲ್ಲಿ ಈಗಾಗಲೇ 1352 ಆಶಾ ಕಾರ್ಯಕರ್ತೆಯರನ್ನು ಗುರುತಿಸಲಾಗಿದೆ ಮತ್ತು 1352 ಆಶಾ ಕಾರ್ಯಕರ್ತೆಯರು ತರಬೇತಿ ಹೊಂದಿರುತ್ತರೆ.

ಆಯ್ಕೆಗೆ ಅರ್ಹತೆಗಳು:

- 20–40 ವರ್ಷದೊಳಗಿನ ಮಹಿಳೆ. ಸದರಿ ಹಳ್ಳಿಯಲ್ಲಿ ವಾಸಿಸುತ್ತಿರಬೇಕು. ಹಳ್ಳಿಯ ಸೊಸೆಯಾಗಿರಬೇಕು– ಮುತ್ತೈದೆ/ವಿಧವೆ/ವಿಚ್ಛೇದಿತೆ.
- 10ನೇ ತರಗತಿಯವರೆಗೆ ಓದಿರಬೇಕು. ಉತ್ತಮ ಅಭಿವ್ಯಕ್ತಿಶೀಲತೆ ಹಾಗೂ ಮುಖಂಡತ್ವ ಗುಣಗಳನ್ನು ಹೊಂದಿರಬೇಕು.
- ಆದ್ಯತೆ: 2 ಮಕ್ಕಳ ತಾಯಿಯಾಗಿದ್ದು, 2ನೇ ಮಗು 5 ವರ್ಷಕ್ಕಿಂತ ದೊಡ್ಡದಾಗಿರಬೇಕು.
- ಪ.ಜಾ./ಪ.ಪಂ.ಗಳ ಮತ್ತು ಬಡತನ ರೇಖೆಯ ಕೆಳಗಿರುವ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು.

ಆಯ್ಕೆ ವಿಧಾನ :

- ಪ್ರತಿ ಗ್ರಾಮದಿಂದ ಎಎನ್‌ಎಂ ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರು ಸೇರಿ ಕನಿಷ್ಠ 3 ಮಹಿಳೆಯರ ಕ್ರೋಢೀಕೃತ ಪಟ್ಟಿ ತಯಾರಿಸುವರು.
- ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು ಅಥವಾ ಗ್ರಾಮ ಲೆಕ್ಕಿಗರು ಈ ಪ್ರಕ್ರಿಯೆಯಲ್ಲಿ ಸಹಾಯ ಮಾಡಬಹುದು.
- ಈ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ನೋಡಿಕೊಳ್ಳುತ್ತಾರೆ.
- ತದನಂತರ ಈ ಕ್ರೋಢೀಕೃತ ಪಟ್ಟಿಯ ಮೂವರಲ್ಲಿ ಒಬ್ಬ ಮಹಿಳೆಯನ್ನು ಆಯ್ಕೆ ಮಾಡಲು ಗ್ರಾಮ ಆರೋಗ್ಯ ಹಾಗೂ ಸ್ವಚ್ಛತಾ ಸಮಿತಿ / ಗ್ರಾಮಸಭೆಯನ್ನು ಕರೆಯಲಾಗುವುದು.
- ಈ ಸಭೆಯ ಕಾರ್ಯಕಲಾಪ ಹಾಗೂ ಅನುಮತಿ ಪ್ರಕ್ರಿಯೆಯನ್ನು ದಾಖಲಿಸಲಾಗುವುದು.
- ಗ್ರಾಮ ಪಂಚಾಯಿತಿಯ ಆಯ್ಕೆಯಾದವರ ಹೆಸರನ್ನು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗೆ ಕಳುಹಿಸಿ ಕೊಡುತ್ತದೆ.
- ಎಲ್ಲಾ ಅಧಿಕೃತ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯರನ್ನು ಗ್ರಾಮ ಆರೋಗ್ಯ ಹಾಗೂ ಸ್ವಚ್ಛತಾ ಸಮಿತಿಯಲ್ಲಿ ಸದಸ್ಯರಾಗಿ ಅಥವಾ ಆಹ್ವಾನಿತ ಸದಸ್ಯರಾಗಿ ಸೇರಿಸಿಕೊಳ್ಳಲಾಗುವುದು.

ಜವಾಬ್ದಾರಿ :

ಆಶಾ ಕಾರ್ಯಕರ್ತೆಯವರು ಜನ ಸಮುದಾಯಕ್ಕೆ ಆರೋಗ್ಯ ನಿರ್ಧಾರಗಳ ಬಗ್ಗೆ ಮಾಹಿತಿ ನೀಡಿ, ಮಹಿಳೆಯರಿಗೆ ಸುರಕ್ಷಿತ ಪ್ರಸವ, ಗರ್ಭ ನಿರೋಧಕ ಇತ್ಯಾದಿಗಳ ಬಗ್ಗೆ ಮಾರ್ಗದರ್ಶನ ನೀಡಬೇಕು. ಉತ್ತಮ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳುವ ಜನ ಸಮುದಾಯವನ್ನು ಉತ್ತೇಜಿಸಬೇಕು. ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಸೇವೆಯನ್ನು ಒದಗಿಸುವುದು, ಜನನ ಮರಣಗಳ ಮಾಹಿತಿ ಒದಗಿಸುವುದು ಇವರ ಕರ್ತವ್ಯ ಸಂಪೂರ್ಣ ಸ್ವಚ್ಛತಾ ಶಿಬಿರದಡಿ ಕುಟುಂಬ ಶೌಚಾಲಯ ನಿರ್ಮಾಣಕ್ಕೆ ಪ್ರೇರೇಪಿಸಬೇಕು.

ಅಭ್ಯರ್ಥಿಗಳ ತರಬೇತಿ:

ಹೆರಿಗೆ ಪೂರ್ವ ಆರೈಕೆ, ಹೆರಿಗೆ ಆರೈಕೆ, ಹೆರಿಗೆ ನಂತರದ ಆರೈಕೆ, ನವಜಾತ ಶಿಶು ಆರೈಕೆ, ಭೇದಿ, ತೀವ್ರ ಉಸಿರಾಟದ ತೊಂದರೆ, ಪ್ರಥಮ ಚಿಕಿತ್ಸೆ ಮತ್ತು ಸಣ್ಣಪುಟ್ಟ ಕಾಯಿಲೆಗಳ ಚಿಕಿತ್ಸೆಗಳ ಬಗ್ಗೆ ನಾಲ್ಕು ವಾರಗಳ (ಮೂರು ವಾರಗಳ ಸಾಂಸ್ಥಿಕ ವಸತಿ ತರಬೇತಿ ಸೇರಿ) ತರಬೇತಿ ನೀಡಲಾಗುವುದು. ತಾಲ್ಲೂಕು ಮಟ್ಟದಲ್ಲಿ ಆಶಾ ತರಬೇತಿ ಶಿಬಿರಗಳನ್ನು ಜಿಲ್ಲಾ ವೈದ್ಯಾಧಿಕಾರಿಗಳು ನಿರ್ಧರಿಸಿದ ಸ್ಥಳಗಳಲ್ಲಿ ನಡೆಸಲಾಗುವುದು.

ಆಶಾ ತರಬೇತಿ ಕೇಂದ್ರಗಳ ಸಂಘಟನೆ, ಮೇಲ್ವಿಚಾರಣೆ ಹಾಗೂ ಸಮನ್ವಯೀಕರಣಗಳನ್ನು ಒಂದು ರಾಜ್ಯ ಮಟ್ಟದ ಸಂಪನ್ಮೂಲ ಕೇಂದ್ರಕ್ಕೆ ವಹಿಸಲಾಗುವುದು.

ಕೋಷ್ಟಕ 6.4

ವರ್ಷ	2013–14	2014–15	2015–16	2016–17	2017–18
ಖರ್ಚಾದ ಅನುದಾನ (ರೂ.ಲಕ್ಷಗಳಲ್ಲಿ)	221.30	228.71	274.50	291.96	ತರಬೇತಿ ನೀಡಿರುವುದಿಲ್ಲ.

ಪ್ರೋತ್ಸಾಹ ಧನ :

ಆಶಾ ಕಾರ್ಯಕರ್ತೆಯವರಿಗೆ ಯಾವುದೇ ಸಂಬಳ ಅಥವಾ ಮಾಸಾಶನ ನೀಡಲಾಗುವುದಿಲ್ಲ. ಆದರೆ ಅವರ ಹಳ್ಳಿಯ ಪ.ಜಾ./ಪ.ಪಂ. ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮಹಿಳೆ ಹಾಗೂ ಶಿಶು ಪಡೆದುಕೊಳ್ಳುವ ಆರೈಕೆ ಸೇವೆಗಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುವುದು. ಹಾಗೂ ತಿಂಗಳಿಗೆ 3500/– ರೂಗಳ 12 ಷರತ್ತುಗಳ ಆಧಾರದ ಮೇಲೆ ಕಾರ್ಯನಿರತ ಆಶಾಗಳಿಗೆ ನೀಡುವುದು.

ಪ್ರತಿ 'ಆಶಾ' ಕಾರ್ಯಕರ್ತೆಯರು ಪ.ಜಾ./ಪ.ಪಂ. ಮತ್ತು ಬಡತನ ರೇಖೆಯ ಕೆಳಗಿನ ವರ್ಗಗಳ ಗರ್ಭಿಣಿಯರ ಮತ್ತು ಮಕ್ಕಳ ಆರೈಕೆ ಮಾಡಿದರೆ ಮಾತ್ರ ಪ್ರೋತ್ಸಾಹ ಧನ ಪಡೆಯುತ್ತಾರೆ. ಹಿಂದೆ ಹೇಳಿದಂತೆ 'ಆಶಾ' ಕಾರ್ಯಕರ್ತೆಯವರಿಗೆ ಯಾವುದೇ ನಿಶ್ಚಿತ ಸಂಭಾವನೆ ಇರುವುದಿಲ್ಲ. ಆದರೆ ಅವರ ಕಾರ್ಯವ್ಯಾಪ್ತಿಯಲ್ಲಿ ಬರುವ ಜನ ಸಮುದಾಯದಲ್ಲಿ ಅವರು ನೀಡುವ ಮಾತೃ ಹಾಗೂ ಶಿಶು ಆರೈಕೆ ಸೇವೆಗಳ ಫಲಿತಾಂಶದ ಮೇರೆಗೆ ಐಎಂಆರ್ ಮತ್ತು ಎಂಎಂಆರ್‌ಗಳ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರೋತ್ಸಾಹ ಧನವನ್ನು ನೀಡಲಾಗುವುದು.

7. **ಆರೋಗ್ಯ ರಕ್ಷಾ ಸಮಿತಿಗಳು:**

ಸರ್ಕಾರದ ಆದೇಶ ಸಂಖ್ಯೆ: ಆಕುಕ 445 ಆಯೋಸಂ 02, ಬೆಂಗಳೂರು ದಿನಾಂಕ 22–8–2003 ರಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಆಸ್ಪತ್ರೆಗಳಲ್ಲಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಪ್ರಧಾನ ಆಸ್ಪತ್ರೆಗಳಲ್ಲಿ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಆರೋಗ್ಯ ರಕ್ಷಾ ಸಮಿತಿಗಳನ್ನು ಪ್ರತ್ಯೇಕವಾಗಿ ರಚಿಸಲು ಆದೇಶಿಸಲಾಗಿದೆ. ಅದೇ ರೀತಿ ತಾಲ್ಲೂಕಿನಲ್ಲಿರುವ ಎಲ್ಲಾ ವೈದ್ಯಕೀಯ ಸಂಸ್ಥೆಗಳು ಒಳಪಡುವಂತೆ ಪ್ರತಿ ತಾಲ್ಲೂಕಿಗೂ ತಾಲ್ಲೂಕು ಮಟ್ಟದ ಆರೋಗ್ಯ ರಕ್ಷಾ ಸಮಿತಿಯನ್ನು ರಚಿಸಲೂ ಸಹಾ ಆದೇಶಿಸಲಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ರಕ್ಷಾ ಸಮಿತಿಗಳನ್ನು ರಚಿಸುವುದರಿಂದ ಉಂಟಾಗುವ ಪ್ರಯೋಜನಗಳನ್ನು ಸ್ಥೂಲವಾಗಿ ಕೆಳಗೆ ವಿವರಿಸಲಾಗಿದೆ:

1. ಸಾರ್ವಜನಿಕರು/ಸಮುದಾಯವು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವುದು.
2. ಉತ್ತಮ ಗುಣಮಟ್ಟದ ಸೇವೆಯನ್ನು ರೋಗಿಗಳಿಗೆ ಒದಗಿಸುವುದರ ಜೊತೆಗೆ ಆಸ್ಪತ್ರೆಯ ದೈನಂದಿನ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವುದು.
3. ಆರೋಗ್ಯ ರಕ್ಷಾ ಸಮಿತಿಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು ಮತ್ತು ಉತ್ತಮ ಸೇವೆಯನ್ನು ಕೊಡುವುದು. ಈ ಆರೋಗ್ಯ ರಕ್ಷಾ ಸಮಿತಿಗಳನ್ನು ಸೊಸೈಟಿಗಳನ್ನಾಗಿ ಕರ್ನಾಟಕ ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ 1960 ರ ಅಡಿಯಲ್ಲಿ ಸಂಬಂಧಪಟ್ಟ ಜಿಲ್ಲೆಗಳಲ್ಲಿ ನೊಂದಣಿ ಮಾಡಿಕೊಳ್ಳಲಾಗುವುದು. ಮೇಲಿನ ಆರೋಗ್ಯ ರಕ್ಷಾ ಸಮಿತಿಗಳು ಅಸ್ತಿತ್ವಕ್ಕೆ ಬಂದ ನಂತರ ಹಾಲಿ ಇರುವ ಆಸ್ಪತ್ರೆಗಳ ಸಂದರ್ಶಕರ ಮಂಡಳಿಗಳು ಮತ್ತು ಯೂಸರ್ಸ್ ಛಾರ್ಜ್ ಸಮಿತಿಗಳು ತಂತಾನೇ ರದ್ದಾಗುತ್ತವೆ.

ಆರೋಗ್ಯ ರಕ್ಷಾ ಸಮಿತಿಯು ಆಸ್ಪತ್ರೆಯ ಆಡಳಿತ ಸೊಸೈಟಿ. ನೋಂದಾಯಿತ ಸೊಸೈಟಿಯಾದ ಇದು ಆಸ್ಪತ್ರೆಯ ಸಮರ್ಪಕ ಆಡಳಿತ ವ್ಯವಸ್ಥೆಯನ್ನು ಟ್ರಸ್ಟಿಗಳ ಸಮೂಹದಂತೆ ನಿರ್ವಹಿಸುತ್ತದೆ. ಇದು ಕನಿಷ್ಠ ಮೂಲಭೂತ ಸೌಕರ್ಯಗಳು ಹಾಗೂ ಆರೋಗ್ಯ ಸೇವೆ ಒದಗಿಸುವುದು ಮತ್ತು ಸರ್ಕಾರದ ನೀತಿ ನಿಯಮಾನುಸಾರ ಆರೈಕೆ–ಶುಶ್ರೂಷೆಗಳನ್ನು ಒದಗಿಸುವುದು. ಇವುಗಳು ಸ್ವಯಂ ಸೇವಾ ಸಂಸ್ಥೆಗಳಂತೆ ಕೆಲಸ ಮಾಡುವುದು. ಈ ಸಮಿತಿಯನ್ನು ಎಲ್ಲಾ ಜಿಲ್ಲಾ ಆಸ್ಪತ್ರೆಗಳು/ಉಪ ಜಿಲ್ಲಾ ಆಸ್ಪತ್ರೆಗಳು/ಸಮುದಾಯ ಆರೋಗ್ಯ ಕೇಂದ್ರಗಳು/ಎಫ್‌ಆರ್‌ಯು ಗಳಲ್ಲಿ ನೊಂದಾಯಿತ ಸೊಸೈಟಿಯ ರೂಪದಲ್ಲಿ ಸ್ಥಾಪಿಸಲಾಗುವುದು.

ಈ ಆರೋಗ್ಯ ರಕ್ಷಾ ಸಮಿತಿಯ ಮುಖ್ಯ ಕಾರ್ಯ ಚಟುವಟಿಕೆಗಳು :

- ಆರೋಗ್ಯ ರಕ್ಷಾ ಸಮಿತಿಗಳಲ್ಲಿ ರೋಗಿಗಳಿಗೆ ಉಂಟಾಗುತ್ತಿರುವ ತೊಂದರೆಗಳನ್ನು ಕಂಡುಹಿಡಿಯುವುದು.
- ಆಸ್ಪತ್ರೆಗೆ ಸಾಧನ ಸಲಕರಣೆಗಳು, ಪೀಠೋಪಕರಣಗಳು, ಆಂಬ್ಯುಲೆನ್ಸ್‌ಗಳನ್ನು ಪಡೆಯುವುದು. (ಖರೀದಿಸಿ, ಅಥವಾ ದಾನದ ಮುಖಾಂತರ / ಬಾಡಿಗೆಗಾಗಲೀ)
- ಸರ್ಕಾರದೊಡನೆ ಸಮಾಲೋಚಿಸಿ ಆಸ್ಪತ್ರೆಗಳ ಕಟ್ಟಡದ ವಿಸ್ತರಣೆ ಮಾಡುವುದು.
- ದಾನ, ಸೇವಾ ಶುಲ್ಕ ಮತ್ತು ಇತರ ವಿಧಾನಗಳಿಂದ ಹಣ ಸಂಗ್ರಹಣೆ ಮಾಡುವುದು.
- ರೋಗಿಗಳು ಹಾಗೂ ಅವರ ಜೊತೆಗಿರುವವರಿಗೆ ರಿಯಾಯಿತಿ ಬೆಲೆಯಲ್ಲಿ ಆಹಾರ, ಔಷಧ, ಕುಡಿಯುವ ನೀರು ಹಾಗೂ ಸ್ವಚ್ಛತೆ ದೊರೆಯುವಂತೆ ನೋಡಿಕೊಳ್ಳುವುದು.

- ಆಸ್ಪತ್ರೆಯ ನಿರ್ವಹಣೆಯಲ್ಲಿ ಸಮುದಾಯದ ಸಹಯೋಗ ಹೆಚ್ಚಿಸುವುದು.
- ವೈದ್ಯರಿಗೆ ಮತ್ತು ಸಿಬ್ಬಂದಿಗೆ ಸಮರ್ಪಕ ತರಬೇತಿ ಒದಗಿಸುವುದು ಇನ್ನೂ ಮುಂತಾದ ಕರ್ತವ್ಯಗಳು.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಪ್ರತಿ ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಗೆ 1,00,000 ರೂ.ಗಳು ಹಾಗೂ ಪ್ರತಿ ಜಿಲ್ಲಾ ಆಸ್ಪತ್ರೆಗೆ 5,00,000 ರೂ.ಗಳ ವಾರ್ಷಿಕ ಅನುದಾನವನ್ನು ನೀಡಲಾಗುತ್ತಿದೆ.

8. ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು :

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಚಟುವಟಿಕೆಗಳನ್ನು ಗ್ರಾಮಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ **ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ**ಗಳನ್ನು ರಚಿಸಲಾಗಿದೆ. ಈ ಸಮಿತಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯಲ್ಲಿ ಸದರಿ ಹಳ್ಳಿಗಳ ಗ್ರಾಮ ಪಂಚಾಯತಿ ಸದಸ್ಯರುಗಳು, ಅಂಗನವಾಡಿ ಕಾರ್ಯಕರ್ತೆಯರು, ಕಿರಿಯ ಪುರುಷ ಮತ್ತು ಮಹಿಳಾ ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಸ್ವಯಂಸೇವಾ ಸಂಘದ ಪ್ರತಿನಿಧಿಗಳು, ಉಪಾಧ್ಯಾಯರು ಹಾಗೂ ಸ್ವ–ಸಹಾಯ ಸಂಘದ ಮುಖಂಡರುಗಳು ಸದಸ್ಯರಾಗಿರುತ್ತಾರೆ.

ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಜವಾಬ್ದಾರಿಗಳು :

- ಗ್ರಾಮ ಸಭೆಗಳಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಆರೋಗ್ಯ ಸಮಸ್ಯೆಗಳನ್ನು ಚರ್ಚಿಸುವುದು.
- ಗ್ರಾಮಸಭಾ ಸಭೆಯಲ್ಲಿ ಮಹಿಳಾ ಸದಸ್ಯರು ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು. ಎನ್.ಆರ್.ಹೆಚ್.ಎಂ. ಕಾರ್ಯಕ್ರಮದಡಿ ಬರುವ ಆರೋಗ್ಯ ಚಟುವಟಿಕೆಗಳನ್ನು ಗ್ರಾಮಸಭಾ ಸಭೆಯಲ್ಲಿ ಯೋಜಿಸಬೇಕು ಮತ್ತು ಪ್ರಗತಿಯನ್ನು ಪರಿಶೀಲಿಸಬೇಕು.
- ಗ್ರಾಮ ಆರೋಗ್ಯ ಯೋಜನೆಗಳನ್ನು ಸಹಭಾಗಿತ್ವ ಪ್ರಕ್ರಿಯೆ ಮೂಲಕ ತಯಾರಿಸಬೇಕು.

ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಕಾರ್ಯವ್ಯಾಪ್ತಿಯಲ್ಲಿ ಈ ಕೆಳಕಂಡ ಕಾರ್ಯಗಳು ಸೇರಿರುತ್ತವೆ.

- ಜನನ ಮತ್ತು ಮರಣ ನೋಂದಣಿಗೆ ಪ್ರೋತ್ಸಾಹಿಸುವುದು.
- ತಾಯಂದಿರ, ನವಜಾತ ಶಿಶು ಮತ್ತು 5 ವರ್ಷದೊಳಗಿನ ಮಕ್ಕಳ ಮರಣಗಳ ಬಗ್ಗೆ ಪರಿಶೋಧನೆ ಮಾಡಬೇಕು.
- ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಾಗ ಅದರ ಬಗ್ಗೆ ಅಧಿಕಾರಿಗಳಿಗೆ ವರದಿ ಮಾಡಬೇಕು ಹಾಗೂ ನಿಯಂತ್ರಣಾ ಕ್ರಮಗಳನ್ನು ತೆಗೆದುಕೊಳ್ಳುವುದು.
- ಹಾನಿಕರ ಹಾಗೂ ಅನೈತಿಕ ಚಿಕಿತ್ಸಾ ಪದ್ಧತಿಯಲ್ಲಿ ತೊಡಗಿರುವವರ ಮೇಲೆ ಗಮನವಿಡುವುದು.
- ಎನ್.ಆರ್.ಹೆಚ್.ಎಂ ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಗ್ರಾಮ ಮತ್ತು ನೈರ್ಮಲ್ಯ ಸಮಿತಿಯು 3 ತಿಂಗಳಿಗೊಮ್ಮೆ ಯೋಜನೆಯನ್ನು ವಿಮರ್ಶಿಸಬೇಕು.

9. ಸಮಿತಿಗೆ ನೀಡಲಾಗುವ ಅನುದಾನ :

ಎಲ್ಲಾಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗೆ 10,000 ರೂ.ಗಳ ವಾರ್ಷಿಕ ಮುಕ್ತ ಅನುದಾನವನ್ನು ನೀಡಲಾಗುವುದು. ಈ ಅನುದಾನವನ್ನು ಆರೋಗ್ಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಬೇಕು. ಉದಾಹರಣೆಗೆ ಮನೆಗಳ ಸಮೀಕ್ಷೆ, ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು, ಸ್ವಚ್ಛತಾ ಕಾರ್ಯಗಳನ್ನು ಮಾಡುವುದು.

ಕೋಷ್ಟಕ 6.5 :ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಮುಕ್ತನಿಧಿಯ ವಿವರಗಳು

(ರೂ.ಲಕ್ಷಗಳಲ್ಲಿ)

ವಿವರಗಳು	2011–12	2012–13	2013–14	2014–15	2015–16	2016–17	2017–18
ಲಭ್ಯ ಅನುದಾನ	81.00	81.00	74.24	73.61	73.28	64.80	81.00
ವೆಚ್ಚಿಸಿದ ಅನುದಾನ	69.74	72.13	64.45	35.65	56.09	23.77	46.98
ಶೇ (%)	86.01%	89%	86.81%	48.43%	76.54%	36.68%	58%

ಉಪ ಕೇಂದ್ರ ಮುಕ್ತ ನಿಧಿ :

- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಪ್ರತಿ ಉಪಕೇಂದ್ರಗಳಿಗೆ 10,000/– ರೂ.ಗಳನ್ನು ಮುಕ್ತನಿಧಿಯಾಗಿ ಕೊಡಲಾಗಿದ್ದು ಇದನ್ನು ತುರ್ತು ಖರ್ಚುಗಳಿಗೆ ಉಪಯೋಗಿಸಬಹುದಾಗಿದೆ.
- ಈ ಹಣವನ್ನು ಆರೋಗ್ಯ ಕಾರ್ಯಕರ್ತೆ ಹಾಗೂ ಪಂಚಾಯತಿ ಅಧ್ಯಕ್ಷರ ಜಂಟೀ ಹೆಸರಿನಲ್ಲಿ ತೆರೆಯಬೇಕು.
- ಮುಕ್ತನಿಧಿಯನ್ನು ರೆಫರಲ್ ಹಾಗೂ ತುರ್ತು ಸಾರಿಗೆಗಾಗಿ ಮತ್ತು ಸಾಮಾನ್ಯ ಒಳಿತಿಗಾಗಿ ಉಪಯೋಗಿಸಬೇಕು.
- ಮುಕ್ತನಿಧಿಯನ್ನು ಈ ಕೆಳಗಿನ ಸೂಚಿತ ಕ್ಷೇತ್ರಕ್ಕಾಗಿ ಬಳಸಬಹುದು. ಉಪ ಕೇಂದ್ರಕ್ಕೆ ಸ್ಥಳೀಯವಾಗಿ ಮಾಡಬಹುದಾದ ಸಣ್ಣ ಪುಟ್ಟ ದುರಸ್ತಿ, ನಲ್ಲಿ ದುರಸ್ತಿ, ದೀಪಗಳು ಇತ್ಯಾದಿ.
- ಉಪ ಕೇಂದ್ರದ ಸ್ವಚ್ಛಗೊಳಿಸುವಿಕೆ, ಮುಖ್ಯವಾಗಿ ಹೆರಿಗೆಯಾದ ನಂತರ.
- ಗಂಡಾಂತರದಲ್ಲಿರುವ ರೋಗಿಗಳನ್ನು ಮೇಲ್ಮಟ್ಟದ ಆಸ್ಪತ್ರೆಗೆ ರವಾನಿಸಲು.
- ಸಾಂಕ್ರಾಮಿಕ ರೋಗ ಬಂದಾಗ ಸ್ಯಾಂಪಲ್‌ಗಳ ರವಾನೆಗೆ.
- ಉಪ ಕೇಂದ್ರಕ್ಕೆ ಬ್ಯಾಂಡೇಜ್ ಮುಂತಾದ ಬಳಕೆ ವಸ್ತುಗಳ ಖರೀದಿ.
- ಗ್ರಾಮದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಬಳಸಲು ಬ್ಲೀಚಿಂಗ್ ಪೌಡರ್ ಮತ್ತು ಕ್ರಿಮಿನಾಶಕಗಳ ಖರೀದಿ.
- ಪರಿಸರ ನೈರ್ಮಲ್ಯಕ್ಕೆ ಅವಶ್ಯಕವಿರುವ ಕಾರ್ಮಿಕರು ಮತ್ತು ವಸ್ತುಗಳಿಗಾಗಿ.
- ಆಶಾಗಳಿಗೆ ಕೆಲವು ಗುರುತಿಸಲ್ಪಟ್ಟ ಚಟುವಟಿಕೆಗಳಿಗೆ ಹಾಗೂ ಪ್ರೋತ್ಸಾಹ ಧನ.

10. **ರಾಷ್ಟ್ರೀಯ ಚುಚ್ಚುಮದ್ದಿನ ಕಾರ್ಯಕ್ರಮ :**

1976–77 ರಲ್ಲಿ ಚುಚ್ಚುಮದ್ದಿನ ವಿಸ್ತೃತ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಇದರಿಂದ ಮಕ್ಕಳಲ್ಲಿ ಬರುವ ಆರು ಮಾರಕ ರೋಗಗಳನ್ನು ತಡೆಗಟ್ಟಬಹುದು. ಆ ರೋಗಗಳೆಂದರೆ ಬಾಲಕ್ಷಯ, ಗಂಟಲು ಬೇನೆ, ನಾಯಿಕೆಮ್ಮು, ಧನುರ್ವಾಯು, ಪೋಲಿಯೋ ಹಾಗೂ ದಡಾರ. 1985ರಲ್ಲಿ ಇದನ್ನು ಸಾರ್ವತ್ರಿಕ ಚುಚ್ಚುಮದ್ದಿನ ಕಾರ್ಯಕ್ರಮ ಎಂದು ಮರು ನಾಮಕರಣ ಮಾಡಿ ಗರ್ಭಿಣಿ ಸ್ತ್ರಿಯರಿಗೆ ಧನುರ್ವಾಯು ವಿರುದ್ಧ ಚುಚ್ಚುಮದ್ಧನ್ನು ಕೂಡ ಕೊಡಲು ಸೇರಿಸಲಾಯಿತು. ಈ ಲಸಿಕೆಗಳನ್ನು ಉಚಿತವಾಗಿ ಮಕ್ಕಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ ನೀಡಲಾಗುವುದು. ಈಗ ಹೆಪಟೈಟಿಸ್ 'ಬಿ' ರೋಗದ ವಿರುದ್ಧ ಕೂಡ ಮಕ್ಕಳಿಗೆ ಉಚಿತವಾಗಿ ಚುಚ್ಚುಮದ್ದನ್ನು ನೀಡಲಾಗುತ್ತಿದೆ.

ಗರ್ಭಿಣಿಯಾದಾಗ ಧನುರ್ವಾಯು ರೋಗವನ್ನು ತಪ್ಪಿಸಲು ಅವರಿಗೆ 2 ಸಲ ಧನುರ್ವಾಯು ಚುಚ್ಚುಮದ್ದನ್ನು ನೀಡಲಾಗುವುದು. ಅದೇ ರೀತಿ ಮಕ್ಕಳಿಗೆ 7 ಮಾರಕ ರೋಗಗಳಾದ ಧನುರ್ವಾಯು, ಗಂಟಲುಬೇನೆ, ಪೋಲಿಯೋ, ನಾಯಿ ಕೆಮ್ಮು, ದಡಾರ, ಕ್ಷಯ ಹಾಗೂ ಹೆಪಟೈಟಿಸ್–ಬಿ ರೋಗಗಳಿಂದ ತಪ್ಪಿಸಲು ಚುಚ್ಚುಮದ್ದನ್ನು ನೀಡಲಾಗುವುದು. ಲಸಿಕಾ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.

ಕೋಷ್ಟಕ 6.6 : ಗರ್ಭಿಣಿಯರಿಗೆ/ಶಿಶುಗಳಿಗೆ ಮತ್ತು ಮಕ್ಕಳಿಗೆ ನೀಡಬೇಕಾದ ರಾಷ್ಟ್ರೀಯ ಲಸಿಕಾ ವೇಳಾಪಟ್ಟಿ ವಿವರಗಳು

ಲಸಿಕೆ	ಯಾವಾಗ ನೀಡಬೇಕು	ಯಾವ ರೋಗವನ್ನು ತಡೆಗಟ್ಟುತ್ತದೆ
ಗರ್ಭಿಣಿಯರಿಗೆ		
ಟಿ.ಟಿ. – 1	ಗರ್ಭಿಣಿ ಎಂದು ಗುರುತಿಸಿದ ಮೇಲೆ ಆದಷ್ಟು ಬೇಗ	ಧನುರ್ವಾಯು
ಟಿ.ಟಿ. – 2	ಟಿ.ಟಿ. – 1 ನೀಡಿದ ನಂತರ 4 ವಾರಗಳಾದ ಮೇಲೆ	ಧನುರ್ವಾಯು
ಟಿ.ಟಿ ಬಲವರ್ಧಕ	3 ವರ್ಷಗಳ ಒಳಗಡೆ ಪುನಃ ಗರ್ಭಿಣಿಯಾಗಿ ಎರಡು ವರಸೆಗಳ ಟಿ.ಟಿ. ಯನ್ನು ಪಡೆದಿದ್ದರೆ	ಧನುರ್ವಾಯು
ಶಿಶುಗಳಿಗೆ		
ಬಿ.ಸಿ.ಜಿ	ಜನಿಸಿದ ಕೂಡಲೆ ಅಥವಾ ಆದಷ್ಟು ಬೇಗ ಒಂದು ವರ್ಷದೊಳಗಾಗಿ	ಬಾಲಕ್ಷಯ
ಹೆಪಟೈಟಿಸ್–ಬಿ	ಜನಿಸಿದ ಕೂಡಲೆ ಅಥವಾ ಆದಷ್ಟು ಬೇಗ 24 ಗಂಟೆಯೊಳಗಾಗಿ	ಹೆಪಟೈಟಿಸ್–ಬಿ

ಓ.ಪಿ.ವಿ – 0	ಜನಿಸಿದ ಕೂಡಲೆ ಅಥವಾ ಮೊದಲ 15 ದಿನಗಳೊಳಗಾಗಿ	ಪೋಲಿಯೊ
ಶಿಶುಗಳಿಗೆ		
ಓ.ಪಿ.ವಿ 1,2 ಮತ್ತು 3 ನೇ ವರಸೆಗಳು	6ನೇ ವಾರದಲ್ಲಿ 10ನೇ ವಾರದಲ್ಲಿ ಮತ್ತು 14ನೇ ವಾರದಲ್ಲಿ	ಪೋಲೀಯೊ
ಡಿ.ಪಿ.ಟಿ 1,2 ಮತ್ತು 3ನೇ ವರಸೆಗಳು	6ನೇ ವಾರದಲ್ಲಿ 10ನೇ ವಾರದಲ್ಲಿ ಮತ್ತು 14ನೇ ವಾರದಲ್ಲಿ	ಗಂಟಲು ಮಾರಿ, ನಾಯಿ ಕೆಮ್ಮು ಮತ್ತು ಧನುರ್ವಾಯು
ಹೆಪಟೈಟಿಸ್–ಬಿ 1,2 ಮತ್ತು 3ನೇ ವರಸೆಗಳು	6ನೇ ವಾರದಲ್ಲಿ, 10ನೇ ವಾರದಲ್ಲಿ ಮತ್ತು 14ನೇ ವಾರದಲ್ಲಿ	ಹೆಪಟೈಟಿಸ್ – ಬಿ
ದಢಾರ	9 ತಿಂಗಳು ಪೂರ್ತಿಯಾದ ನಂತರ 12 ತಿಂಗಳೊಳಗೆ	ದಢಾರ
ವಿಟಮಿನ್–ಎ ದ್ರಾವಣ– ಮೊದಲನೇ ವರಸೆ	9ನೇ ತಿಂಗಳಲ್ಲಿ ದಢಾರ ಚುಚ್ಚುಮದ್ದಿನೊಂದಿಗೆ	ರಾತ್ರಿ ಕುರುಡುತನ
ಮಕ್ಕಳಿಗೆ		
ಡಿ.ಪಿ.ಟಿ – ಬಲವರ್ಧಕ	16 ರಿಂದ 24 ತಿಂಗಳಲ್ಲಿ	ಗಂಟಲು ಮಾರಿ, ನಾಯಿ ಕೆಮ್ಮು ಮತ್ತು ಧನುರ್ವಾಯು
ದಢಾರ 2ನೇ ವರಸೆ	16 ರಿಂದ 24 ತಿಂಗಳಲ್ಲಿ	ದಢಾರ
ಓ.ಪಿ.ವಿ – ಬಲವರ್ಧಕ	16 ರಿಂದ 24 ತಿಂಗಳಲ್ಲಿ	ಪೋಲೀಯೊ
ವಿಟಮಿನ್ "ಎ" ದ್ರಾವಣ (2 ರಿಂದ 9ನೇ ವರಸೆಗಳು)	16ನೇ ತಿಂಗಳಲ್ಲಿ 2ನೇ ವರಸೆ ನಂತರ 5 ವರ್ಷ ವಯಸ್ಸಿನವರೆಗೆ ಪ್ರತಿ ಆರು ತಿಂಗಳಿಗೊಮ್ಮೆ ಒಂದು ವರಸೆ	ರಾತ್ರಿ ಕುರುಡುತನ
ಡಿ.ಪಿ.ಟಿ – ಬಲವರ್ಧಕ	5–6 ವರ್ಷಗಳಲ್ಲಿ	ಗಂಟಲು ಮಾರಿ, ನಾಯಿ ಕೆಮ್ಮು, ಧನುರ್ವಾಯು
ಟಿ.ಟಿ	10 ವರ್ಷಗಳಲ್ಲಿ ಮತ್ತು 16 ವರ್ಷಗಳಲ್ಲಿ	ಧನುರ್ವಾಯು

ಎಲ್ಲಾ ಚುಚ್ಚುಮದ್ದುಗಳು / ಲಸಿಕೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿರುತ್ತವೆ.

11. ದಡಾರ ಮತ್ತು ರುಬೆಲ್ಲಾ ಲಸಿಕಾ ಕಾರ್ಯಕ್ರಮ :

ಜಿಲ್ಲೆಯಲ್ಲಿ ದಿನಾಂಕ:07–02–2017 ರಿಂದ 19 ಮಾರ್ಚ್ 2017ರವರೆಗೆ ದಡಾರ ಮತ್ತು ರುಬೆಲ್ಲಾ ಲಸಿಕಾ ಕಾರ್ಯಕ್ರಮದ ಅಭಿಯಾನವನ್ನು ಹಮ್ಮಿಕೊಂಡಿದ್ದು, 09 ತಿಂಗಳಿಂದ 15ವರ್ಷದೊಳಗಿನ ಒಟ್ಟು 486557 ಮಕ್ಕಳನ್ನು ಗುರಿಯಾಗಿಸಿಕೊಂಡಿದ್ದು, 484397 ಮಕ್ಕಳಿಗೆ ದಡಾರ ಮತ್ತು ರುಬೆಲ್ಲಾ ಲಸಿಕೆಯನ್ನು ನೀಡಲಾಗಿದೆ. ಶೇಕಡಾ 99.56ರಷ್ಟು ಗುರಿ ಸಾಧಿಸಲಾಗಿದೆ.

12. ಪಲ್ಸ್ ಪೋಲಿಯೊ :

1995 ರಿಂದ ಕರ್ನಾಟಕ ರಾಜ್ಯದಲ್ಲಿ ಪೋಲಿಯೊ ಲಸಿಕೆ ಹನಿಯನ್ನು ವರ್ಷಕ್ಕೆ ಎರಡು ಬಾರಿಯಂತೆ ಒಂದು ತಿಂಗಳ ಅಂತರದಲ್ಲಿ 0–5 ವರ್ಷದೊಳಗಿನ ಮಕ್ಕಳಿಗೆ ನೀಡಲಾಗುತ್ತಿದೆ. ಈ ಆಂದೋಲನದಿಂದ ಪೋಲೀಯೊ ರೋಗವನ್ನು ನಿರ್ಮೂಲನಗೊಳಿಸಬಹುದು.

13. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು :

ಕುಟುಂಬ ಯೋಜನೆ ಕಾರ್ಯಕ್ರಮವನ್ನು ವಿಶ್ವದಲ್ಲೇ ಸರ್ಕಾರದ ಯೋಜನೆಯಾಗಿ ಪ್ರಾರಂಭ ಮಾಡಿದ್ದು, ನಮ್ಮ ರಾಜ್ಯ ಎಂಬ ಹೆಮ್ಮೆ ರಾಜ್ಯದ ಎಲ್ಲಾ ನಾಗರೀಕರಿಗೂ ಸೇರಬೇಕಾದದ್ದು.

ಅಂದಿನ ಮೈಸೂರಿನ ಮಹಾರಾಜರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ರವರು ಮೈಸೂರಿನ ಚೆಲುವಾಂಬ ಆಸ್ಪತ್ರೆ ಮತ್ತು ಬೆಂಗಳೂರಿನ ವಾಣಿವಿಲಾಸ್ ಆಸ್ಪತ್ರೆಯಲ್ಲಿ ಎರಡು ಜನನ ನಿಯಂತ್ರಣಾ ಕೇಂದ್ರಗಳನ್ನು 11ನೇ ಜೂನ್ 1930ರಂದು ಸ್ಥಾಪಿಸಿ, ಜನನ ನಿಯಂತ್ರಣಕ್ಕೆ ನಾಂದಿಹಾಕಿದರು.

ದೇಶಾದ್ಯಂತ, ರಾಷ್ಟ್ರೀಯ ಕುಟುಂಬ ಯೋಜನೆ ಕಾರ್ಯಕ್ರಮವನ್ನು 1952 ರಲ್ಲಿ ಜಾರಿಗೆ ತರಲಾಯಿತು. 1962–63ರಲ್ಲಿ ಜನರ ಮನೆ ಬಾಗಿಲಿಗೇ ಹೋಗಿ ಅರಿವು ಮೂಡಿಸುವ ಕಾರ್ಯ ಜಾರಿಗೆ ಬಂದಿತು. 1965ರಲ್ಲಿ 'ವಂಕಿ' ಎಂಬ ತಾತ್ಕಾಲಿಕ ವಿಧಾನವು ಎಲ್ಲರ ಗಮನ ಸೆಳೆಯಿತು. 1967ರಲ್ಲಿ ಕುಟುಂಬ ಯೋಜನೆಯ ಇಲಾಖೆಯು ಸ್ಥಾಪಿತವಾಯಿತು ಹಾಗೂ ಅದೇ ವರ್ಷ ಗರ್ಭ ನಿರೋಧಕ ಗುಳಿಗೆ ಎಂಬ ತಾತ್ಕಾಲಿಕ ವಿಧಾನವೂ ಕೂಡಾ ಅರ್ಹ ದಂಪತಿಗಳಿಗೆ ವರದಾನವಾಯಿತು.

ಅಸುರಕ್ಷಿತ ಗರ್ಭಪಾತವನ್ನು ತಡೆಗಟ್ಟಲು ಹಾಗೂ ತಾಯಂದಿರ ಮರಣವನ್ನು ಕಡಿಮೆ ಮಾಡುವ ಉದ್ದೇಶದಿಂದ ವೈದ್ಯಕೀಯ ಗರ್ಭಪಾತದ ಕಾಯಿದೆಯನ್ನು ದಿನಾಂಕ: 1ನೇ ಏಪ್ರಿಲ್ 1972 ರಿಂದ ಜಾರಿಗೆ ತರಲಾಯಿತು.

1976ನೇ ಏಪ್ರಿಲ್‌ನಲ್ಲಿ ಭಾರತದ ಪ್ರಥಮ ಜನಸಂಖ್ಯಾ ನೀತಿಯನ್ನು ಪ್ರಕಟಿಸಲಾಯಿತು. 1977ರಲ್ಲಿ ಜಾರಿಗೆ ಬಂದ ಗ್ರಾಮೀಣ ಆರೋಗ್ಯ ಯೋಜನೆಯಡಿಯಲ್ಲಿ ಕುಟುಂಬ ಯೋಜನೆ ಬದಲು "ಕುಟುಂಬ ಕಲ್ಯಾಣ" ಎಂಬ ಬದಲಾವಣೆ ಮಾಡಿ ಕುಟುಂಬದ ಸರ್ವತೋಮುಖ ಕಲ್ಯಾಣಕ್ಕಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ನೀತಿಯಂತೆ ಗ್ರಾಮೀಣ ಪ್ರದೇಶಗಳಲ್ಲಿರುವ ದಾದಿಯರನ್ನು ಗುರುತಿಸಿ ಅವರಿಗೆ ಸುರಕ್ಷಿತ ಹೆರಿಗೆ ಮಾಡುವ ಬಗ್ಗೆ ತರಬೇತಿಯನ್ನು ನೀಡಲಾಯಿತು. ಅದೇ ರೀತಿ ಪ್ರತಿ 1000 ಜನಸಂಖ್ಯೆಗೆ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಮಾರ್ಗದರ್ಶಿಗಳನ್ನು ನೇಮಿಸಿಕೊಂಡು ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಕಾರ್ಯಕ್ರಮಗಳನ್ನು ಜನತೆ ಸ್ವೀಕರಿಸುವಂತೆ ಮನವೊಲಿಸಲು ಪ್ರಯತ್ನಿಸಲಾಯಿತು. ಈ ನೀತಿಯಂತೆ 1978ಲ್ಲಿ ಮದುವೆ ವಯಸ್ಸಿನ ಕಾಯಿದೆಗೆ ತಿದ್ದುಪಡಿ ತರಲಾಯಿತು. ಅದರಂತೆ ಗಂಡಿಗೆ 21 ವರ್ಷ ಮತ್ತು ಹೆಣ್ಣಿಗೆ 18 ವರ್ಷ ಆಗಿರಬೇಕು ಎಂದು ಕಾಯಿದೆ ಮಾಡಲಾಯಿತು. 1992–93 ರಲ್ಲಿ ಶಿಶುವಿನ ಉಳಿವು ಮತ್ತು ಸುರಕ್ಷಿತ ತಾಯ್ತನ ಕಾರ್ಯಕ್ರಮವು ಪ್ರಾರಂಭಿಸಲ್ಪಟ್ಟಿತು.

1997–98ನೇ ಸಾಲಿನಲ್ಲಿ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವನ್ನು ಪ್ರಾರಂಭಿಸಿ ಇದರಲ್ಲಿ ಕುಟುಂಬ ಕಲ್ಯಾಣ, ಶಿಶುವಿನ ಉಳಿವು ಮತ್ತು ಸುರಕ್ಷಿತ ತಾಯ್ತನ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಗಳು ಜೊತೆಗೆ ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕದ ಸೋಂಕು ಕಾರ್ಯಕ್ರಮಗಳನ್ನು ಸೇರಿಸಿಕೊಳ್ಳಲಾಯಿತು.

ಇದು ಸಮುದಾಯದ ಅಗತ್ಯಗಳ ನಿಗದಿ ವಿಧಾನ, ಸಮುದಾಯದ ಸಹಭಾಗಿತ್ವ, ಗುಣಾತ್ಮಕ ಸೇವೆಗಳು ಮತ್ತು ಪುರುಷರ ಸಹಭಾಗಿತ್ವ ತತ್ವಗಳ ಮೇಲೆ ಅವಲಂಬಿಸಿದೆ. ಈ ಕಾರ್ಯಕ್ರಮದಡಿಯಲ್ಲಿ ಸಮುದಾಯಕ್ಕೆ ಹೆಚ್ಚಿನ ಅರಿವು ಮೂಡಿಸುವುದಲ್ಲದೇ, ಮೂಲಭೂತ ಸೌಕರ್ಯಗಳಾದ ಕಟ್ಟಡ, ವೈದ್ಯಕೀಯ ಉಪಕರಣಗಳು, ಸಿಬ್ಬಂದಿವರ್ಗ ಮುಂತಾದವುಗಳನ್ನು ಒದಗಿಸಲಾಗಿದೆ. ತಾಯಿ ಮತ್ತು ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಒತ್ತಡ ನೀಡಲಾಗಿದೆ. ಮೊದಲು ನೀಡುತ್ತಿದ್ದ ಗುರಿಗಳನ್ನು ರದ್ದು ಪಡಿಸಲಾಯಿತು. ಕರ್ನಾಟಕದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಪುರುಷರ ಪಾತ್ರವನ್ನು ಹೆಚ್ಚಿಸಲು **"ನೋ ಸ್ಕಾಲ್ ಪೆಲ್ ವ್ಯಾಸೆಕ್ಟಮಿ"** ಶಸ್ತ್ರ ಚಿಕಿತ್ಸೆಯ ಬಗ್ಗೆ ಹೆಚ್ಚು ಮಹತ್ವ ನೀಡಲಾಗಿದೆ.

ಈಗ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯದ ಎರಡನೇ ಹಂತ ಏಪ್ರಿಲ್ 2005 ರಿಂದ ಪ್ರಾರಂಭವಾಗಿದೆ.ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಸೇವೆಯಡಿಯಲ್ಲಿ ತಾಯಿ ಮತ್ತು ಮಕ್ಕಳ ಮರಣವನ್ನು ತಡೆಗಟ್ಟಲು ಗರ್ಭಿಣಿಯರು ಆಸ್ಪತ್ರೆಗಳಲ್ಲಿಯೇ ಹೆರಿಗೆ ಮಾಡಿಸಿಕೊಳ್ಳಲು ಹೆಚ್ಚನ ಆದ್ಯತೆಯನ್ನು ನೀಡಲಾಗಿದೆ.

ಕೇಂದ್ರ ಸರ್ಕಾರವು ಪುರುಷ ಮಹಿಳೆಯರ ಅನುಪಾತದ ಅಸಮತೋಲನವನ್ನು ತಡೆಗಟ್ಟಲು ಗರ್ಭಪೂರ್ವ ಮತ್ತು ಪ್ರಸವ ಪೂರ್ವ ರೋಗ ಪತ್ತೆ ಮಾಡುವ ತಂತ್ರ (ಲಿಂಗ ಆಯ್ಕೆ ನಿಷೇದ) ಕಾಯಿದೆ 1994 ಎಂಬ ಕಾಯಿದೆಯನ್ನು ಜಾರಿಗೆ ತಂದಿದೆ.

ಭಾರತ ಸರ್ಕಾರವು ವಿಸ್ತೃತ ರೋಗ ನಿರೋಧಕ ಚುಚ್ಚುಮದ್ದು ಕಾರ್ಯಕ್ರಮವನ್ನು 1976–77ರಲ್ಲಿ ಪ್ರಾರಂಭಗೊಳಿಸಿದನ್ವಯ ರಾಜ್ಯದಲ್ಲೂ ಇದು ಜಾರಿಗೆ ಬಂದು ನಂತರ 1985ರಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವಾಯಿತು. ಮಕ್ಕಳನ್ನು ಆರು ಮಾರಕ ರೋಗಗಳಾದ ಬಾಲಕ್ಷಯ, ಪೋಲಿಯೊ, ಗಂಟಲುಮಾರಿ, ನಾಯಿ ಕೆಮ್ಮು, ಧನುರ್ವಾಯು ಮತ್ತು ದಡಾರ ರೋಗಗಳಿಂದ ರಕ್ಷಿಸಲು ಹಾಗೂ ಗರ್ಭಿಣಿ ಸ್ತ್ರೀಯರನ್ನು ಧನುರ್ವಾಯು ರೋಗದಿಂದ ತಪ್ಪಿಸಲು ಹೆಚ್ಚಿನ ಆದ್ಯತೆ ಕೊಡಲಾಯಿತು.

1995ರಲ್ಲಿ 0–5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲೀಯೊ ಲಸಿಕೆ ಹನಿ ಹಾಕಿ, ರಾಷ್ಟ್ರವನ್ನು ಪೋಲಿಯೊ ಮುಕ್ತವನ್ನಾಗಿ ಮಾಡುವ ಉದ್ದೇಶದಿಂದ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

14. **ವೈದ್ಯಕೀಯ ಗರ್ಭಪಾತ :**

ಹಲವಾರು ಮಹಿಳೆಯರು ಸಂಕೋಚದಿಂದಲೋ, ಮೂಢನಂಬಿಕೆಯಿಂದಲೋ ಅಥವಾ ಅಜ್ಞಾನದಿಂದಲೋ ನಕಲಿ ವೈದ್ಯರ ಬಳಿ ಗರ್ಭಪಾತಕ್ಕೆ ಒಳಗಾಗಿ ತಮ್ಮ ಜೀವಕ್ಕೆ ಅಪಾಯ ತಂದುಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಲು ಸರ್ಕಾರ ವೈದ್ಯಕೀಯ ಗರ್ಭಪಾತದ ಕಾನೂನನ್ನು ಜಾರಿಗೆ ತಂದಿದೆ.ಇದು 1ನೇ ಏಪ್ರಿಲ್ 1972 ರಿಂದ ಜಾರಿಗೆ ಬಂದಿದೆ. ಬೇಡವಾದ ಗರ್ಭವನ್ನು ತಜ್ಞ ವೈದ್ಯರು ವೈಜ್ಞಾನಿಕ ವಿಧಾನದಿಂದ ಗರ್ಭಪಾತ ಮಾಡುತ್ತಾರೆ. ಇದಕ್ಕೆ ವೈದ್ಯಕೀಯ ಗರ್ಭಪಾತವೆಂದು ಹೆಸರು.

ವೈದ್ಯಕೀಯ ಗರ್ಭಪಾತವನ್ನು ಈ ಕೆಳಕಂಡ ಸನ್ನಿವೇಶದಲ್ಲಿ ಮಾಡಿಸಬಹುದು.

- ಮಗುವಿಗೆ ಅಥವಾ ತಾಯಿಯ ಜೀವಕ್ಕೆ ಅಪಾಯವಿದೆ ಎನ್ನುವ ಸಂದರ್ಭದಲ್ಲಿ
- ಹುಟ್ಟಲಿರುವ ಮಗು ಗಂಭೀರ ಸ್ವರೂಪದ ಅಂಗವಿಕಲತೆಗೆ ಈಡಾಗುವ ಸಂಶಯ ಬಂದಲ್ಲಿ
- ಅತ್ಯಾಚಾರದಿಂದ ಗರ್ಭಿಣಿಯಾಗಿದ್ದರೆ
- ಗರ್ಭ ನಿರೋಧಕಗಳು ವಿಫಲವಾಗಿ ಗರ್ಭ ಧರಿಸಿದ್ದರೆ.

ಈ ಸೌಲಭ್ಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ದೊರೆಯುತ್ತದೆ. ಹಾಗೂ ಇದರ ವಿವರವನ್ನು ಗುಪ್ತವಾಗಿ ಇಡಲಾಗುತ್ತದೆ. ವೈದ್ಯಕೀಯ ಗರ್ಭಪಾತವನ್ನು ಗರ್ಭಧರಿಸಿದ ಮೂರು ತಿಂಗಳೊಳಗಾಗಿ ಮಾಡಿಸಬೇಕು.

15. ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಆರೋಗ್ಯ ತಪಾಸಣೆ ಕಾರ್ಯಕ್ರಮ :

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಭಾಗ್ಯಲಕ್ಷ್ಮಿ ಫಲಾನುಭವಿಗಳ ಆರೋಗ್ಯ ತಪಾಸಣೆಯನ್ನು ಅಕ್ಟೋಬರ್ 2010ನೇ ಸಾಲಿನಿಂದ ಕೈಗೊಳ್ಳಲಾಗಿದೆ.

ಪ್ರತಿಯೊಂದು ಅಂಗನವಾಡಿಗಳಿಗೆ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ನಿಗಧಿತ ಅವಧಿಯಲ್ಲಿ ಭೇಟಿ ನೀಡಿ ಭಾಗ್ಯಲಕ್ಷ್ಮಿ ಫಲಾನುಭವಿಗಳ ಆರೋಗ್ಯ ತಪಾಸಣೆ ಕೈಗೊಳ್ಳುವರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಭ್ಯವಿರುವ ಔಷಧೋಪಚಾರ ನೀಡಲಾಗುವುದು.ಹೆಚ್ಚಿನ ಚಿಕಿತ್ಸೆ ಅವಶ್ಯವಿರುವ ಮಕ್ಕಳನ್ನು ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸಲಾಗುವುದು. ಇಲ್ಲಿ ಲಭ್ಯವಿರುವ ಎಲ್ಲಾ ಸೇವೆಗಳನ್ನು ನೀಡಲಾಗುವುದು. ಇದಲ್ಲದೇ ಇನ್ನೂ ಕೆಲವು ಮಕ್ಕಳಿಗೆ ವಿಶೇಷ ತಜ್ಞ ವೈದ್ಯರ ಸೇವೆ ಬೇಕಾಗಬಹುದು. ಅಂತಹ ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು "ಬಾಲ ಸಂಜೀವಿನಿ" ಕಾರ್ಯಕ್ರಮದಡಿ ನಿಗಧಿತ ವೈದ್ಯಕೀಯ ಮಹಾ ವಿದ್ಯಾಲಯಗಳಿಗೆ ಅವಶ್ಯಕ ಚಿಕಿತ್ಸೆಗಾಗಿ ಕರೆದುಕೊಂಡು ಹೋಗುವರು.

16. ರಾಷ್ಟ್ರೀಯ ಆರೋಗ್ಯ ಯೋಜನೆಗಳು :

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಜ್ಯದ ಜನತೆಗೆ ಮೂಲಭೂತ ಪ್ರಾಥಮಿಕ ಆರೋಗ್ಯ ಒದಗಿಸುವ ಉದ್ದೇಶದಿಂದ ಅನೇಕ ರಾಷ್ಟ್ರೀಯ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಅವುಗಳೆಂದರೆ

- ➢ ರಾಷ್ಟ್ರೀಯ ಪರಿಷ್ಕೃತ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮ
- ➢ ರಾಷ್ಟ್ರೀಯ ಅಂಧತ್ವ ತಡೆಗಟ್ಟುವಿಕೆ ಮತ್ತು ನಿಯಂತ್ರಣಾ ಕಾರ್ಯಕ್ರಮ
- ➢ ರಾಷ್ಟ್ರೀಯ ರೋಗವಾಹಕ ಕೀಟಜನ್ಯ ರೋಗಗಳ ನಿಯಂತ್ರಣಾ ಕಾರ್ಯಕ್ರಮ
- ರಾಷ್ಟ್ರೀಯ ಮಲೇರಿಯಾ ರೋಗ ನಿರೋಧ ಕಾರ್ಯಕ್ರಮ
- ರಾಷ್ಟ್ರೀಯ ಫೈಲೇರಿಯಾ ರೋಗ ನಿಯಂತ್ರಣಾ ಕಾರ್ಯಕ್ರಮ
- ಮೆದುಳು ಜ್ವರ ನಿಯಂತ್ರಣ ಕಾರ್ಯಕ್ರಮ
- ಡೆಂಗ್ಯೂ ಜ್ವರ ಮತ್ತು ಚಿಕುಂಗುನ್ಯಾ ರೋಗಗಳ ನಿಯಂತ್ರಣ ಕಾರ್ಯಕ್ರಮ
- ➢ ರಾಷ್ಟ್ರೀಯ ಏಡ್ಸ್ ನಿಯಂತ್ರಣಾ ಕಾರ್ಯಕ್ರಮ

- ರಾಷ್ಟ್ರೀಯ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ
- ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ

ಇವುಗಳಲ್ಲದೇ ಸಾಂಕ್ರಾಮಿಕ ರೋಗಗಳಾದ ಕರುಳು ಬೇನೆ, ಕಾಲರಾ, ಟೈಫಾಯಿಡ್, ವೈರಲ್ ಹೆಪಟೈಟಿಸ್, ಮಂಗನ ಕಾಯಿಲೆ, ಇಲಿ ಜ್ವರ, ಪ್ಲೇಗ್ ಇವುಗಳನ್ನು ತಡೆಗಟ್ಟುವುದು ಹಾಗೂ ನಿಯಂತ್ರಣಾ ಕ್ರಮ ತೆಗೆದುಕೊಳ್ಳುವುದು ಕೂಡಾ ಇಲಾಖೆಯ ಕರ್ತವ್ಯವಾಗಿದೆ.

17. **ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ :**

ಕಂಡುಹಿಡಿದಿದ್ದು	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 168 ಇದ್ದು ಮಾರ್ಚ್ ಅಂತ್ಯದವರೆಗೆ ಸಾಧನೆ 88 ಆಗಿರುತ್ತದೆ ಶೇ.52ರಷ್ಟು ಪ್ರಗತಿಯನ್ನು ಸಾಧಿಸಿದೆ.
ಗುಣಮುಖವಾದವು	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 97 ಇದ್ದು ಮಾರ್ಚ್ ಅಂತ್ಯದವರೆಗೆ ಶೇ.58ರಷ್ಟು ಪ್ರಗತಿಯನ್ನು ಸಾಧಿಸಿದೆ.

18. ರಾಷ್ಟ್ರೀಯ ಪರಿಷ್ಕೃತ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮ :

ಕಂಡು ಹಿಡಿದ ಹೊಸರೋಗಿಗಳ ಸಂಖ್ಯೆ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 2421 ಇದ್ದು ಮಾರ್ಚ್ ಅಂತ್ಯದವರೆಗೆ ಸಾಧನೆ 1994 ಆಗಿರುತ್ತದೆ ಶೇ.82ರಷ್ಟು ಪ್ರಗತಿಯನ್ನು ಸಾಧಿಸಿದೆ.
	ಕಫ ಪರೀಕ್ಷೆ 2017–18ನೇ ಸಾಲಿಗೆ ವಾರ್ಷಿಕ ಗುರಿ 20030 ಇದ್ದು ಮಾರ್ಚ್ ಅಂತ್ಯದವರೆಗೆ ಸಾಧನೆ 21288 ಆಗಿರುತ್ತದೆ ಶೇ.106ರಷ್ಟು ಪ್ರಗತಿಯನ್ನು ಸಾಧಿಸಿದೆ.

19. ರಾಷ್ಟ್ರೀಯ ಅಂಧತ್ವ ತಡೆಗಟ್ಟುವಿಕೆ ಮತ್ತು ನಿಯಂತ್ರಣಾ ಕಾರ್ಯಕ್ರಮ :

ಅಂಧತ್ವನಿವಾರಣೆಗೆ ಕೈಗೊಂಡ ಶಸ್ತ್ರಚಿಕಿತ್ಸೆ ಸಂಖ್ಯೆ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 12885 ಇದ್ದು ಮಾರ್ಚ್ ಅಂತ್ಯದವರೆಗೆ ಸಾಧನೆ 12302 ಆಗಿರುತ್ತದೆ ಶೇ.95.47ರಷ್ಟು ಪ್ರಗತಿಯನ್ನು ಸಾಧಿಸಿದೆ.

20. ರಾಷ್ಟ್ರೀಯ ರೋಗವಾಹಕ ಕೀಟಜನ್ಯ ರೋಗಗಳ ನಿಯಂತ್ರಣಾ ಕಾರ್ಯಕ್ರಮ :

ಅ) ರಾಷ್ಟ್ರೀಯ ಮಲೇರಿಯಾ ರೋಗ ನಿರೋಧ ಕಾರ್ಯಕ್ರಮ :

ಕೈ ಗೊಂಡ ರಕ್ತ ಪರೀಕ್ಷೆಗಳ ಸಂಖ್ಯೆ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 201613 ಇದ್ದು ಸಾಧನೆ 335369 ಆಗಿರುತ್ತದೆ ಶೇ.179.00 ಪ್ರಗತಿಯನ್ನು ಸಾಧಿಸಿದೆ.
ಮಲೇರಿಯ ಪ್ರಕರಣಗಳು (ಪಿ .ವಿ)	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 20 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.
ಮಲೇರಿಯ ಪ್ರಕರಣಗಳು (ಪಿ.ಎಫ್)	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 00 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.
ಡೆಂಗ್ಯೂ ಜ್ವರ ಪ್ರಕರಣಗಳು	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 3787 ಆನುಮಾನಾಸ್ಪದ ದಾಖಲೆಗಳು ದಾಖಲಾಗಿದ್ದು ಇದರಲ್ಲಿ 912 ಪ್ರಕರಣಗಳು ಪಾಸಿಟಿವ್ ಆಗಿರುತ್ತವೆ.
ಚಿಕನ್ ಗುನ್ಯಾ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 1708 ಆನುಮಾನಾಸ್ಪದ ದಾಖಲೆಗಳು ದಾಖಲಾಗಿದ್ದು ಇದರಲ್ಲಿ 222 ಪ್ರಕರಣಗಳು ಪಾಸಿಟಿವ್ ಆಗಿರುತ್ತವೆ.
ಇಲಿ ಜ್ವರ ಪ್ರಕರಣಗಳು	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 10 ಆನುಮಾನಾಸ್ಪದ ದಾಖಲೆಗಳು ದಾಖಲಾಗಿದ್ದು ಇದರಲ್ಲಿ 02 ಪ್ರಕರಣಗಳು ಪಾಸಿಟಿವ್ ಆಗಿರುತ್ತವೆ. .
ಜೆ.ಇ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 27 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು. 00 ಪ್ರಕರಣಗಳು ಪಾಸಿಟಿವ್ ಆಗಿದ್ದು ಮರಣ ಇಲ್ಲ.
ಹೆಚ್ .ಐ.ವಿ + ಮರಣ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ 408 ಪ್ರಕರಣಗಳು ದಾಖಲಾಗಿದ್ದು. ಇದರಲ್ಲಿ 06 ಪ್ರಕರಣಗಳು ಮರಣ ಹೊಂದಿರುತ್ತವೆ.

21. ರಾಷ್ಟ್ರೀಯ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ :

ಡಿ.ಪಿ.ಟಿ ಮತ್ತು ಪೋಲಿಯೋ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 37616 ಇದ್ದು ಮಾರ್ಚ್2018 ಅಂತ್ಯದವರೆಗೆ ಸಾಧನೆ 36802 ಆಗಿರುತ್ತದೆ ಶೇ.98 ಪ್ರಗತಿಯನ್ನು ಸಾಧಿಸಿದೆ.
ಬಿ.ಸಿ.ಜಿ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 37616 ಇದ್ದು ಮಾರ್ಚ್2018 ಅಂತ್ಯದವರೆಗೆ ಸಾಧನೆ 34052 ಆಗಿರುತ್ತದೆ ಶೇ.91 ಪ್ರಗತಿಯನ್ನು ಸಾಧಿಸಿದೆ.
ದಢಾರ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 37616 ಇದ್ದು ಮಾರ್ಚ್2018 ಅಂತ್ಯದವರೆಗೆ ಸಾಧನೆ 36787 ಆಗಿರುತ್ತದೆ ಶೇ.98 ಪ್ರಗತಿಯನ್ನು ಸಾಧಿಸಿದೆ.

ಗರ್ಭಿಣಿಯರಿಗೆ ಚುಚುಮದ್ದು(ಟಿ.ಟಿ)	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 43000 ಇದ್ದು ಮಾರ್ಚ್2018 ಅಂತ್ಯದವರೆಗೆ ಸಾಧನೆ 33094 ಆಗಿರುತ್ತದೆ ಶೇ.77 ಪ್ರಗತಿಯನ್ನು ಸಾಧಿಸಿದೆ.
ಪೆಂಟಾವಲೆಂಟ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 37616 ಇದ್ದು ಮಾರ್ಚ್2018 ಅಂತ್ಯದವರೆಗೆ ಸಾಧನೆ 36802 ಆಗಿರುತ್ತದೆ ಶೇ.98 ಪ್ರಗತಿಯನ್ನು ಸಾಧಿಸಿದೆ.

1) ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ :

ಟುಬೆಕ್ಟಮಿ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 15366 ಇದ್ದು ಮಾರ್ಚ್ 2018 ರ ಅಂತ್ಯದವರೆಗೆ ಸಾಧನೆ 11053 ಆಗಿರುತ್ತದೆ. ಶೇ.71 ಪ್ರಗತಿಯನ್ನು ಸಾಧಿಸಿದೆ.
ಲೆಪ್ರೋಸ್ಕೋಪಿಕ್	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 1707 ಇದ್ದು ಮಾರ್ಚ್ 2018 ರ ಅಂತ್ಯದವರೆಗೆ ಸಾಧನೆ 2286 ಆಗಿರುತ್ತದೆ. ಶೇ.134 ಪ್ರಗತಿಯನ್ನು ಸಾಧಿಸಿದೆ.
ವ್ಯಾಸೆಕ್ಟಮಿ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 154 ಇದ್ದು ಮಾರ್ಚ್ 2018 ರ ಅಂತ್ಯದವರೆಗೆ ಸಾಧನೆ 18 ಆಗಿರುತ್ತದೆ. ಶೇ.11.7 ಪ್ರಗತಿಯನ್ನು ಸಾಧಿಸಿದೆ.
ವಂಕಿ ಅಳವಡಿಸಿದ್ದು	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 10206 ಇದ್ದು ಮಾರ್ಚ್ 2018 ರ ಅಂತ್ಯದವರೆಗೆ ಸಾಧನೆ 6962 ಆಗಿರುತ್ತದೆ. ಶೇ.67.4 ಪ್ರಗತಿಯನ್ನು ಸಾಧಿಸಿದೆ.
ನಿರೋಧ್	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 12691 ಇದ್ದು ಮಾರ್ಚ್ 2018 ರ ಅಂತ್ಯದವರೆಗೆ ಸಾಧನೆ 6905 ಆಗಿರುತ್ತದೆ. ಶೇ.54.4 ಪ್ರಗತಿಯನ್ನು ಸಾಧಿಸಿದೆ.
ನುಂಗುವ ಗುಳಿಗೆ	ಈ ಕಾರ್ಯಕ್ರಮದಲ್ಲಿ 2017–18ನೇ ಸಾಲಿಗೆ ವಾರ್ಷಿಕ ಗುರಿ 7744 ಇದ್ದು ಮಾರ್ಚ್ 2018 ರ ಅಂತ್ಯದವರೆಗೆ ಸಾಧನೆ 5084 ಆಗಿರುತ್ತದೆ. ಶೇ.65.7 ಪ್ರಗತಿಯನ್ನು ಸಾಧಿಸಿದೆ.

ಕೋಷ್ಟಕ 6.7 :2017–18ನೇ ಸಾಲಿನ ವೆಚ್ಚದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಆಸ್ಪತ್ರೆಗಳು	ಸಿಬ್ಬಂದಿ	ಬಾಡಿಗೆ	ಪೀಠೋಪಕರಣಗಳು ಮತ್ತು ಸಲಕರಣೆ ದುರಸ್ಥಿ	ಒಳ ರೋಗಿಗಳ ಊಟದ ವ್ಯವಸ್ಥೆ	ಸಾದಿಲ್ವಾರು ವೆಚ್ಚ ಮತ್ತು ಸಾಧನೆ	ಹೊಸ ಕಟ್ಟಡದ ನಿರ್ಮಾಣ (ಭೌತಿಕ)	ಕಟ್ಟಡಗಳ ದುರಸ್ಥಿ	ಔಷಧಿಗಳು	ಒಟ್ಟು ಮೊತ್ತ
1	ಸ್ಥಳೀಯ ಸಿಟಿ ಆಸ್ಪತ್ರೆಗಳು	–	–	–	–	–	–	–	–	–
2	ಉಳಿದ ಇತರೆ	4650.10	–	–	–	487.97	–	63.59	–	5201.66
	ಒಟ್ಟು	4650.10	–	–	–	487.97	–	63.59	–	5201.66

ಕೋಷ್ಟಕ 6.8 : ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆಯ ವಿವರಗಳು

ಒಳ ರೋಗಿಗಳ ಸಂಖ್ಯೆ	ಹೊರರೋಗಿಗಳ ಸಂಖ್ಯೆ	ಒಟ್ಟು
139916	2794712	2934628

7. ಆಯುರ್ವೇದ, ಯೋಗ,ಯುನಾನಿ, ಸಿದ್ಧ, ಹೋಮಿಯೋಪತಿ (ಆಯುಷ್)

ದಾವಣಗೆರೆ ಜಿಲ್ಲಾ ಪಂಚಾಯತ್ ಕಾರ್ಯ ವ್ಯಾಪ್ತಿಯಲ್ಲಿ ದಾವಣಗೆರೆ ಜಿಲ್ಲಾ ಆಯುಷ್ ಕಛೇರಿ ಆಡಳಿತ ನಿಯಂತ್ರಣದಲ್ಲಿರುವ ಆಯುಷ್ ಚಿಕಿತ್ಸಾಲಯಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಹಾಕಿಕೊಂಡ ಅಂಶಗಳ ಮತ್ತು ಚಟುವಟಿಕೆಗಳ ಪಕ್ಷಿನೋಟ.

ಮೇಲ್ದರ್ಜೆಗೇರಿಸಿದ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹರಪನಹಳ್ಳಿ.	01
ಮೇಲ್ದರ್ಜೆಗೇರಿಸಿದ ಸರ್ಕಾರಿ ಯೋಗ & ಪ್ರಕೃತಿ ಚಿಕಿತ್ಸಾ ಆಸ್ಪತ್ರೆ, ದಾವಣಗೆರೆ.	01
ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳು.	31
ಸರ್ಕಾರಿ ಆಯುರ್ವೇದ ಆಸ್ಪತ್ರೆ, ಚನ್ನಗಿರಿ.	01
ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹರಿಹರ	01

1. **ಆಯುಷ್ ತರಬೇತಿ ಕಾರ್ಯಕ್ರಮ: ತಾಲ್ಲೂಕು ಮಟ್ಟದ ಆಯುಷ್ ಸೆಮಿನಾರ್:**

2017–18ನೇ ಸಾಲಿಗೆ ರಾಜ್ಯ ವಲಯದ ಆಯುಷ್ ಆರೋಗ್ಯ ಐ.ಇ.ಸಿ. ಹಾಗು ತರಬೇತಿ ಕಾರ್ಯಕ್ರಮಗಳಡಿಯಲ್ಲಿ ಹರಿಹರ ಮತ್ತು ದಾವಣಗೆರೆ ತಾಲ್ಲೂಕಿನ ಜನರಲ್ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಪರಿಶಿಷ್ಟ ಜಾತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ 2017–18ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಡಿಯಲ್ಲಿ (SCP/TSP) ರೂ.1.02ಲಕ್ಷ ಅನುದಾನದಲ್ಲಿ 1 ದಿನದ ತಾಲ್ಲೂಕು ಮಟ್ಟದ ಆಯುಷ್ ತರಬೇತಿ ಕಾರ್ಯಕ್ರಮ "ಆಯುಷ್ ಸೆಮಿನಾರ್"ನ್ನು ದಿನಾಂಕ:17–01–2018ನೇ ಸೋಮವಾರ ಹೋಟೆಲ್ ಶಾಂತಿ ಪಾರ್ಕ್, ದಾವಣಗೆರೆ ಮತ್ತು ದಿನಾಂಕ:06–01–2018 ಶನಿವಾರ ಸ್ತ್ರೀ ಶಕ್ತಿ ಭವನ, ತಾಲ್ಲೂಕ್ ಪಂಚಾಯತ್ ಆವರಣ, ಹರಿಹರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಒಟ್ಟು 115 ಪರಿಶಿಷ್ಟ ಜಾತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯರು & ಜನರಲ್ ಅಂಗನವಾಡಿ ಕಾರ್ಯಕರ್ತೆಯರು ಶಿಬಿರದಲ್ಲಿ ಪಾಲ್ಗೊಂಡು ಆಯುಷ್ ಪದ್ದತಿಗಳು, ಆಹಾರ ವಿಹಾರ, ಮನೆಮದ್ದು, ಇನ್ನಿತರ ವಿಷಯಗಳ ಕುರಿತು ವಿಷಯ ಪರಿಣಿತರಿಂದ ವಿವರವಾಗಿ ಮಾಹಿತಿ ಪಡೆದರು.

2. **ಆರೋಗ್ಯ ಶಿಬಿರಗಳು:**

2017–18ನೇ ಸಾಲಿಗೆ ರಾಜ್ಯ ವಲಯದ ಆಯುಷ್ ಆರೋಗ್ಯ ಐ.ಇ.ಸಿ. ಶಿಬಿರಗಳನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಡಿಯಲ್ಲಿ (SCP/TSP) ರೂ.2.80ಲಕ್ಷ ಅನುದಾನದಲ್ಲಿ ಅಕ್ಟೋಬರ್ ರಿಂದ ಡಿಸಂಬರ್ ತಿಂಗಳಿನಲ್ಲಿ ಚನ್ನಗಿರಿ ತಾ॥ ದುರ್ವಿಗೆರೆ, ಕದರನಹಳ್ಳಿ, ಹರಿಹರ ತಾ॥ ಹಾಲಿವಾಣ, ಮೂಗಿನಗೊಂದಿ, ಹೊನ್ನಾಳಿ ತಾ॥ ಕುಂಬಳೂರು, ಫಲವನಹಳ್ಳಿ, ಹರಪನಹಳ್ಳಿ ತಾ॥ ಕಂಚೀಕೆರೆ, ರಾಗಿಮಸಲವಾಡ, ಕಡಬಗೆರೆ(2), ಮಾಚಿಹಳ್ಳಿ, ಹರಪನಹಳ್ಳಿ(ಆಸ್ಪತ್ರೆ), ದಾವಣಗೆರೆ ತಾ॥ ಕಾನಗೊಂಡನಹಳ್ಳಿ, ಹುಲಿಕಟ್ಟೆ, ಇಲ್ಲಿ ಆಯುಷ್ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 2677 ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಜನಾಂಗದ ಫಲಾನುಭವಿಗಳಿಗೆ ಉಚಿತ ಆರೋಗ್ಯ ಶಿಬಿರವನ್ನು ಯಶಸ್ವಿಗೊಳಿಸಲಾಯಿತು.

3. **SCP & TCP ಯೋಜನೆಯಡಿ ಮನೆಮದ್ದು ಕಾರ್ಯಕ್ರಮ :**

2017–18ನೇ ಸಾಲಿನ SCP & TCP ಯೋಜನೆಯಡಿಯಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ, ಗ್ರಾಮೀಣ ಜನತೆಗಾಗಿ ಆಯುಷ್ ಮನೆಮದ್ದು ಕಾರ್ಯಕ್ರಮವನ್ನು ಜಿಲ್ಲೆಯ ಆಯ್ದ 10 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳ ವ್ಯಾಪ್ತಿಯಲ್ಲಿ ಅಕ್ಟೋಬರ್–2017–ಜನವರಿ–2018 ತಿಂಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಹೊನ್ನಾಳಿ ತಾ॥ ಚಿನ್ನಿಕಟ್ಟೆ, ಹರಪನಹಳ್ಳಿ ತಾ॥ ರಾಗಿಮಸಲವಾಡ, ಹುಲಿಕಟ್ಟೆ, ಕೆ.ಕಲ್ಲಹಳ್ಳಿ, ಹರಪನಹಳ್ಳಿ(ಆಸ್ಪತ್ರೆ), ಚನ್ನಗಿರಿ ತಾ॥ ಬೆಳಲಗೆರೆ, ನಲ್ಕುದುರೆ, ಹರಿಹರ ತಾ॥ ಹಾಲಿವಾಣ, ಬನ್ನಿಕೋಡು, ದಾವಣಗೆರೆ ತಾ॥ ಕಾನಗೊಂಡನಹಳ್ಳಿ, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳ ವ್ಯಾಪ್ತಿಯಲ್ಲಿ ತಲಾ 30ಜನ ಫಲಾನುಭವಿಗಳಿಗೆ ಮೂರು ದಿನಗಳ ಕಾಲ ಆಯುಷ್ ಪದ್ದತಿಗಳ ಪರಿಚಯ ಮನೆ ಮದ್ದುಗಳ ಕುರಿತು ಮಾಹಿತಿ ಹಾಗು ಉಪಯೋಗಿಸುವ ವಿಧಾನದ ಕುರಿತು ಸವಿವರವಾಗಿ ಪ್ರಾತ್ಯಕ್ಷಿಕ ಮೂಲಕ ತಿಳಿಸಿಕೊಡಲಾಯಿತು. ಈ ಉದ್ದೇಶಕ್ಕಾಗಿ 91,000=00 ರೂ ಗಳು ಮಂಜೂರಾಗಿದ್ದು ತಲಾ ಒಂದು ಕಾರ್ಯಕ್ರಮಕ್ಕೆ ರೂ. 9,100=00 ರೂಗಳಂತೆ ವಿನಿಯೋಗಿಸಲಾಯಿತು.

ಕೋಷ್ಟಕ 7.1 : ತಾಲ್ಲುಕು ಸರ್ಕಾರಿ ಆಯುರ್ವೇದ ಆಸ್ಪತ್ರೆ ಚನ್ನಗಿರಿ ಇಲ್ಲಿಗೆ ವೆಚ್ಚ ಮಾಡಲಾದ ವಿವರಗಳು

ಕ್ರ.ಸಂ.	ಲೆಕ್ಕ ಶಿರ್ಷಿಕೆ	ವಿವರ	ಬಿಡುಗಡೆ	ವೆಚ್ಚ
1	2210–02–101–2–04 (ಯೋಜನೆ)	015 ಪೂರಕ ವೆಚ್ಚ	–	–
		051 ಸಾಮಾನ್ಯ ವೆಚ್ಚ	60,000.00	59,966.00
		059 ಇತರೆ ವೆಚ್ಚ	1,20,000.00	60,000.00
		221 ಸಾಮಗ್ರಿ ಸರಬರಾಜು	45,000.00	44,992.00
		222 ಔಷಧಿ ಮತ್ತು ರಾಸಾಯನಿಕ	70,000.00	69,845.00
ಒಟ್ಟು			**2,75,000.00**	**2,34,803.00**

ಕೋಷ್ಟಕ 7.2 : ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹರಿಹರ ವೆಚ್ಚ ಮಾಡಲಾದ ವಿವರಗಳು

ಕ್ರ.ಸಂ.	ಲೆಕ್ಕ ಶಿರ್ಷಿಕೆ	ವಿವರ	ಬಿಡುಗಡೆ	ವೆಚ್ಚ
1	2210–02–101–2–07 (ಯೋಜನೆ)	059 ಇತರೆ ವೆಚ್ಚ	1,00,000.00	1,00,000.00
		ಒಟ್ಟು	1,00,000.00	1,00,000.00

4. ಜಿಲ್ಲಾ ಪಂಚಾಯತ್ ಕಾರ್ಯಕ್ರಮ :

ಜಿಲ್ಲಾ ಪಂಚಾಯತ್ ದಾವಣಗೆರೆಯಿಂದ ಆಯುಷ್ ಇಲಾಖೆಗೆ 2017–18ನೇ ಸಾಲಿನಲ್ಲಿ ಕಟ್ಟಡಗಳಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಯಾದ ಮೊತ್ತ ರೂ.30.00ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಈ ಮೊತ್ತದಲ್ಲಿ ಆಯುಷ್ ಕಛೇರಿ ಅಧೀನದಲ್ಲಿ ಬರುವ ದಾವಣಗೆರೆ, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಲ್ಲಿನ ಚಿಕಿತ್ಸಾಲಯದ ಕಟ್ಟಡ ಕಾಮಗಾರಿಗಳಿಗೆ ರೂ.30.00ಲಕ್ಷಗಳನ್ನು ಖರ್ಚು ಮಾಡಲಾಗಿದೆ. ವಿವರ ಈ ಕೆಳಕಂಡತಿದೆ.

ಕೋಷ್ಟಕ 7.3 : ಕಟ್ಟಡ ಕಾಮಗಾರಿಗಳಿಗೆ ವೆಚ್ಚ ಮಾಡಿದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಲೆಕ್ಕಶೀರ್ಷಿಕೆ	ವಿವರ	ಬಿಡುಗಡೆ	ವೆಚ್ಚ
01	ಕಟ್ಟಡಗಳು 2210–00–105–0–38	ಚನ್ನಗಿರಿ ತಾಲ್ಲೂಕಿನ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಬೆಳಲಗೆರೆ ಇಲ್ಲಿಯ ಹೆಚ್ಚುವರಿ ಪಂಚಕರ್ಮ ಕೊಠಡಿ ನಿರ್ಮಾಣ.	5.00	5.00
02		ಚನ್ನಗಿರಿ ತಾಲ್ಲೂಕಿನ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ನಲ್ಕುದುರೆ ಇಲ್ಲಿಯ ಸಣ್ಣ ಪುಟ್ಟ ರಿಪೇರಿ & ಕಾಂಪೌಂಡ್ ದುರಸ್ತಿ.	1.50	1.50
03		ದಾವಣಗೆರೆ ಜಿಲ್ಲೆಯ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಕಾಡಜ್ಜಿ ಇಲ್ಲಿಯ ಸಣ್ಣ ಪುಟ್ಟ ದುರಸ್ತಿ.	1.00	1.00
04		ದಾವಣಗೆರೆ ತಾಲ್ಲೂಕಿನ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ನರಗನಹಳ್ಳಿ ಇಲ್ಲಿಯ ಸಣ್ಣ ಪುಟ್ಟ ರಿಪೇರಿ & ಕಾಂಪೌಂಡ್ ದುರಸ್ತಿ	2.00	2.00
05		ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಹನುಮಸಾಗರ ತಾಂಡ ಇಲ್ಲಿಯ ಹೊಸ ಕಾಮಗಾರಿ.	10.00	10.00
06		ಹರಪನಹಳ್ಳಿ ತಾಲ್ಲೂಕಿನ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಕಂಚೀಕೆರೆ ಹೊಸ ಕಾಮಗಾರಿ.	8.00	8.00
07		ಹರಪನಹಳ್ಳಿ ತಾಲ್ಲೂಕಿನ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ರಾಗಿಮಸಲವಾಡ. ಹೆಚ್ಚುವರಿ ಪಂಚಕರ್ಮ ಕೊಠಡಿ ನಿರ್ಮಾಣ	2.50	2.50
		ಒಟ್ಟು	30.00	30.00

ಕೋಷ್ಟಕ 7.4 : 2017–18ನೇ ಸಾಲಿನಲ್ಲಿ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆದ ರೋಗಿಗಳ ವಿವರಗಳು

ಕ್ರ. ಸಂ	ವಿವರ	ಒಟ್ಟು ಚಿಕಿತ್ಸೆ ಪಡೆದ ಹೊಸರೋಗಿಗಳು & ಹಳೆ ರೋಗಿಗಳು	ಒಟ್ಟು	ಸರಾಸರಿ ದಿನಕ್ಕೆ ಚಿಕಿತ್ಸೆ ಪಡೆದ ರೋಗಿಗಳು
1	ಸರ್ಕಾರಿ ಆಯುರ್ವೇದ ಆಸ್ಪತ್ರೆ ಹರಪನಹಳ್ಳಿ	10439	10439	29
2	ಸರ್ಕಾರಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ದಾವಣಗೆರೆ	4317	4317	12
3	31 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳು	208817	208817	19
	ಒಟ್ಟು	223573	223573	73

ಕೋಷ್ಟಕ 7.5 : ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು / ಸಿಬ್ಬಂದಿಯ ವಿವರಗಳು

ಕ್ರ. ಸಂ.	ಹುದ್ದೆಗಳ ವರ್ಗ	ತಾಲ್ಲೂಕುಗಳು						
		ದಾವಣಗೆರೆ	ಹರಿಹರ	ಹರಪನಹಳ್ಳಿ	ಜಗಳೂರು	ಚನ್ನಗಿರಿ	ಹೊನ್ನಾಳಿ	ಒಟ್ಟು
	ವೈದ್ಯಾಧಿಕಾರಿಗಳು							
1	ಮಂಜೂರಾದ ಹುದ್ದೆಗಳು	7	3	7	1	5	10	33
2	ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ	7	3	6	–	5	9	30
3	ಖಾಲಿ ಹುದ್ದೆಗಳು	–	–	1	1	–	1	03
	ಔಷಧಿ ವಿತರಕರು							
1	ಮಂಜುರಾದ ಹುದ್ದೆಗಳು	5	2	2	1	–	8	18
2	ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ	–	–	–	–	–	1	1
3	ಖಾಲಿ ಹುದ್ದೆ	5	2	2	1	–	7	17
	ದ್ವಿತೀಯ ದರ್ಜೆ ಸಹಾಯಕರು							
1	ಮಂಜೂರಾದ ಹುದ್ದೆಗಳು	–	–	1	–	–	–	1
2	ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ	–	–	1	–	–	–	1
3	ಖಾಲಿ ಹುದ್ದೆಗಳು	–	–	–	–	–	–	–
	ಶುಶ್ರೂಷಕಿ							
1	ಮಂಜೂರಾದ ಹುದ್ದೆಗಳು	–	–	1	–	–	–	1
2	ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ	–	–	–	–	–	–	–
3	ಖಾಲಿ ಹುದ್ದೆಗಳು	–	–	1	–	–	–	1
	ಕಿ.ಮ.ಆ.ಸ.							
1	ಮಂಜೂರಾದ ಹುದ್ದೆಗಳು	4	2	–	–	–	–	6
2	ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ	–	–	–	–	–	–	–
3	ಖಾಲಿ ಹುದ್ದೆಗಳು	4	2	–	–	–	–	6
	ಗ್ರೂಪ್ 'ಡಿ'							
1	ಮಂಜೂರಾದ ಹುದ್ದೆಗಳು	7	3	3	1	5	10	29
2	ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ	1	–	1	–	1	–	3
3	ಖಾಲಿ ಹುದ್ದೆಗಳು	6	3	2	1	4	10	26

ಕೋಷ್ಟಕ 7.6 : ಜಿಲ್ಲಾ ಆಯುಷ್ ಕಛೇರಿ, ದಾವಣಗೆರೆ ಇಲ್ಲಿನ ಅಧಿಕಾರಿ/ಸಿಬ್ಬಂದಿ ಮಾಹಿತಿ ವಿವರ

ಕ್ರ.ಸಂ.	ಹುದ್ದೆಗಳ ವರ್ಗ	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ	ಖಾಲಿ ಹುದ್ದೆಗಳು
1	ಜಿಲ್ಲಾ ಆಯುಷ್ ಅಧಿಕಾರಿಗಳು	01	01	–
2	ಪ್ರಥಮ ದರ್ಜೆ ಸಹಾಯಕರು	01	01	–
3	ದ್ವಿತೀಯ ದರ್ಜೆ ಸಹಾಯಕರು	01	01	–
4	ಗ್ರೂಪ್ 'ಡಿ'	02	–	02
	ಒಟ್ಟು	05	03	02

ಕೋಷ್ಟಕ 7.7: ಕೇಂದ್ರ ಪುರಸ್ಕೃತ ಯೋಜನೆಯಡಿ ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳ ಗುತ್ತಿಗೆ ಸಿಬ್ಬಂದಿಯವರ ಮಾಹಿತಿ
(ಸರ್ಕಾರಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ, ದಾವಣಗೆರೆ ಮತ್ತು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹರಪನಹಳ್ಳಿ)

ಕ್ರ.ಸಂ.	ಹುದ್ದೆಗಳ ವರ್ಗ	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ	ಖಾಲಿ ಹುದ್ದೆಗಳು
1	ವೈದ್ಯಾಧಿಕಾರಿಗಳು	04	03	01
2	ಔಷಧಿ ವಿತರಕರು	04	02	02
3	ಸ್ತ್ರೀ ರೋಗ ಅಟೆಂಡರ್	02	02	–
4	ಕ್ಷಾರ ಸೂತ್ರ ಅಟೆಂಡರ್	02	02	–
5	ಮಸಾಜಿಸ್ಟ್	04	04	–
	ಒಟ್ಟು	16	13	03

ಕೋಷ್ಟಕ 7.8 : ಚನ್ನಗಿರಿ ತಾಲ್ಲೂಕು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿ ವಿವರ

ಕ್ರ.ಸಂ.	ಹುದ್ದೆಗಳ ವರ್ಗ	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ	ಖಾಲಿ ಹುದ್ದೆಗಳು
1	ವೈದ್ಯಾಧಿಕಾರಿಗಳು(ದರ್ಜೆ–1)	01	–	01
2	ಔಷಧಿ ವಿತರಕರು	01	–	01
3	ಶುಶ್ರೂಷಕಿ	01	–	01
4	ಥೆರಾಪಿಸ್ಟ್	01	–	01
5	ಪ್ರ.ದ.ಸ.	01	01	–
6	ವಾರ್ಡ್ ಅಟೇಂಡರ್/ಆಯ(ಹೊರಗುತ್ತಿಗೆ)	01	–	01
7	ಜವಾನ	01	–	01
	ಒಟ್ಟು	07	01	06

ಹರಿಹರ ತಾಲ್ಲೂಕು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿ ವಿವರ

ಕ್ರ. ಸಂ.	ಹುದ್ದೆಗಳ ವರ್ಗ	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ	ಖಾಲಿ ಹುದ್ದೆಗಳು
1	ವೈದ್ಯಾಧಿಕಾರಿಗಳು	01	–	01
2	ಔಷಧಿ ವಿತರಕರು	01	–	01
3	ಶುಶ್ರೂಷಕಿ	01	–	01
4	ಪಂಚಕರ್ಮ ಥೆರಾಪಿಸ್ಟ್/ಮಸಾಜಿಸ್ಟ್	01	–	01
5	ಪ್ರ.ದ.ಸ.	01	–	01
6	ಕೊಠಡಿ ಅನುಚರ/ಆಯ (ಹೊರಗುತ್ತಿಗೆ)	01	–	01
7	ಸೇವಕ	01	–	01
	ಒಟ್ಟು	07	–	07

8. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ.

1. ರಸ್ತೆಗಳು, ಸೇತುವೆಗಳು ಹಾಗೂ ಕಟ್ಟಡಗಳು :

- 3054 ಮುಖ್ಯ ಮಂತ್ರಿ ರಸ್ತೆ ಅಭಿವೃದ್ಧಿ ಯೋಜನೆಯಡಿ ರೂ.351.42ಲಕ್ಷಗಳ ಮೊತ್ತ 124 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 124 ಕಾಮಗಾರಿಗಳನ್ನು ಪೂರ್ಣಗೊಳಿಸಿ ರೂ.345.98ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.
- 3054 ಮುಖ್ಯ ಮಂತ್ರಿ ರಸ್ತೆ ಯೋಜನೇತರ (ನಿರ್ವಹಣಾ ಅನುದಾನ) ಯೋಜನೆಯಡಿ ರೂ.212.47 ಲಕ್ಷಗಳ ಮೊತ್ತದ 59 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 59 ಕಾಮಗಾರಿಗಳನ್ನು ಪೂರ್ಣಗೊಳಿಸಿ ರೂ.174.10ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

2. ಶಾಸನಬದ್ದ (ಅಭಿವೃದ್ಧಿ) ಅನುದಾನ (ಜಿಲ್ಲಾ ಪಂಚಾಯತ್) ಕಾಮಗಾರಿಗಳು :

2017–18ನೇ ಸಾಲಿನಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ 2017–18ನೇ ಸಾಲಿನಲ್ಲಿ ಶಾಸನಬದ್ದ (ಅಭಿವೃದ್ಧಿ ಅನುದಾನದಡಿಯಲ್ಲಿ ರೂ.271.12 ಲಕ್ಷಗಳ ಅಂದಾಜು ಮೊತ್ತಕ್ಕೆ 157 ಕಾಮಗಾರಿಗಳನ್ನು ಕೈಗೊಂಡು 156 ಕಾಮಗಾರಿಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಿ ರೂ.268.56ಲಕ್ಷ ವೆಚ್ಚ ಭರಿಸಲಾಗಿದೆ.

3. 2702 ಸಣ್ಣ ನೀರಾವರಿ ವಿಷೇಶ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಪುನರ್ ಸ್ಥಿತಿ & ಪುನಃಶ್ಚೇತನ ಮುಂದುರೆದ & ಹೊಸ ಕಾಮಗಾರಿಗಳ ಪ್ರಗತಿ ವರದಿ.

ಸಣ್ಣ ನೀರಾವರಿ ಯೋಜನೆಯಡಿ ಕೆರೆಗಳ ದುರಸ್ಥಿ ಕೆರೆ ಏರಿ ಅಗಲೀಕರಣಕ್ಕಾಗಿ & ಸಮೀಕ್ಷೆ ಕಾರ್ಯಗಳಿಗೆ 24.38 ಅನದಾನದಲ್ಲಿ ರೂ. 24.38 ಲಕ್ಷ ಅನುದಾನ ವೆಚ್ಚ ಮಾಡಿ 49 ಕಾಮಗಾರಿಗಳನ್ನು ಪೂರ್ಚಗೊಳಿಸಲಾಗಿದೆ.

ಕೆರೆ ಸಂಜೀವಿನ–2ರ ಯೋಜನೆ ಅಡಿ ಪ್ರತಿ ಕ್ಷೇತ್ರಕ್ಕೆ ರೂ. 18.00 ಲಕ್ಷದಂತೆ ಒಟ್ಟು ರೂ. 108.00ಲಕ್ಷ ಅನುದಾನಕ್ಕೆ 6 ಕಾಮಗಾರಿಗಳು ಅನುಮೋದನೆಯಾಗಿದ್ದು 6 ಕಾಮಗಾರಿಗಳು ಪೂರ್ಣಗೊಂಡಿದ್ದು ರೂ. 108.00 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

ಕೆರೆ ಸಂಜೀವಿನ–3ರ ಯೋಜನೆ ಅಡಿ ಪ್ರತಿ ಕ್ಷೇತ್ರಕ್ಕೆ ರೂ. 15.00 ಲಕ್ಷದಂತೆ ಒಟ್ಟು ರೂ. 90.00ಲಕ್ಷ ಅನುದಾನಕ್ಕೆ 17 ಕಾಮಗಾರಿಗಳು ಅನುಮೋದನೆಯಾಗಿದ್ದು 17 ಕಾಮಗಾರಿಗಳು ಪೂರ್ಣಗೊಂಡಿದ್ದು ರೂ. 90.00 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

4. **ನಬಾರ್ಡ್ ಯೋಜನೆ**

ನಬಾರ್ಡ್–23 ರಸ್ತೆ ಅಭಿವೃದ್ಧಿ ಯೋಜನೆಯಡಿಲ್ಲಿ ದಾವಣಗೆರೆ ತಾಲ್ಲೂಕು 240.00 ಲಕ್ಷಗಳ ಅಂದಾಜು ಮೊತ್ತಕ್ಕೆ 3 ಕಾಮಗಾರಿಗಳನ್ನು ಅನುಮೋದನೆಯಾಗಿದ್ದು 1 ಕಾಮಗಾರಿ ಪೂರ್ಣಗೊಂಡಿದ್ದು 2 ಕಾಮಗಾರಿಗಳು ಪ್ರಗತಿ, ಹರಿಹರ ತಾಲ್ಲೂಕು 93.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಕಾಮಗಾರಿ ಪ್ರಗತಿಯಲ್ಲಿದೆ, ಚನ್ನಗಿರಿ ತಾಲ್ಲೂಕು 100.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಕಾಮಗಾರಿ ಪ್ರಗತಿಯಲ್ಲಿದೆ, ಹೊನ್ನಾಳಿ ತಾಲ್ಲೂಕು 95 ಲಕ್ಷಗಳ ಅಂದಾಜು ಮೊತ್ತಕ್ಕೆ 2ಕಾಮಗಾರಿಗಳು ಅನುಮೋದನೆಯಾಗಿ ಕಾಮಗಾರಿ ಪ್ರಗತಿಯಲ್ಲಿದ್ದು ಒಟ್ಟು ರೂ. 233.46 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

ನಬಾರ್ಡ್–23 ಕೆರೆ ಯೋಜನೆಯಡಿಲ್ಲಿ ದಾವಣಗೆರೆ ತಾಲ್ಲೂಕು 115.00 ಲಕ್ಷಗಳ ಅಂದಾಜು ಮೊತ್ತಕ್ಕೆ 4 ಕಾಮಗಾರಿಗಳನ್ನು ಅನುಮೋದನೆಯಾಗಿದ್ದು 2 ಕಾಮಗಾರಿ ಪೂರ್ಣಗೊಂಡಿದ್ದು 2 ಕಾಮಗಾರಿಗಳು ಪ್ರಗತಿ, ಹರಿಹರ ತಾಲ್ಲೂಕು 50.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಪ್ರಗತಿಯಲ್ಲಿದೆ ಚನ್ನಗಿರಿ ತಾಲ್ಲೂಕು 50.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಪ್ರಗತಿಯಲ್ಲಿದೆ 1 ಪ್ರಗತಿ ಹೊನ್ನಾಳಿ ತಾಲ್ಲೂಕು 39.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಪ್ರಗತಿಯಲ್ಲಿದ್ದು ಒಟ್ಟು ರೂ. 151.22 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

ನಬಾರ್ಡ್–23 ಕಟ್ಟಡಗಳು ಯೋಜನೆಯಡಿಲ್ಲಿ ದಾವಣಗೆರೆ ತಾಲ್ಲೂಕು 32.65 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿದ್ದು 1 ಕಾಮಗಾರಿ ಪೂರ್ಣಗೊಂಡಿರುತ್ತದೆ. ಹರಿಹರ ತಾಲ್ಲೂಕು 144.75 ಲಕ್ಷಗಳ ಅಂದಾಜು ಮೊತ್ತಕ್ಕೆ 2 ಕಾಮಗಾರಿಗಾರಿಗಳು ಅನುಮೋದನೆಯಾಗಿ ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ, ಚನ್ನಗಿರಿ ತಾಲ್ಲೂಕು 50.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಕಾಮಗಾರಿ ಪ್ರಗತಿಯಲ್ಲಿದೆ, ಹೊನ್ನಾಳಿ ತಾಲ್ಲೂಕು 94.75 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿ ಪ್ರಗತಿಯಲ್ಲಿದ್ದು ಒಟ್ಟು ರೂ. 184.89 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

3054 ಲಮ್‌ಸಮ್ ಯೋಜನೆಯಡಿಲ್ಲಿ ಹರಿಹರ ತಾಲ್ಲೂಕು 350.00 ಲಕ್ಷಗಳ ಅಂದಾಜು ಮೊತ್ತಕ್ಕೆ 2 ಕಾಮಗಾರಿಗಳು ಅನುಮೋದನೆಯಾಗಿ ಕಾಮಗಾರಿಗಳು ಪ್ರಗತಿಯಲ್ಲಿದೆ, ಚನ್ನಗಿರಿ ತಾಲ್ಲೂಕು 10.00 ಲಕ್ಷಗಳ ಅಂದಾಜು ಮೊತ್ತಕ್ಕೆ 1 ಕಾಮಗಾರಿ ಅನುಮೋದನೆಯಾಗಿದ್ದು 1 ಭೌತಿಕವಾಗಿ ಮುಕ್ತಾಯವಾಗಿರುತ್ತದೆ. ಹೊನ್ನಾಳಿ ತಾಲ್ಲೂಕು 100.00 ಲಕ್ಷಗಳ ಅಂದಾಜು ಮೊತ್ತಕ್ಕೆ 22 ಕಾಮಗಾರಿಗಳು ಅನುಮೋದನೆಯಾಗಿದ್ದು 22 ಕಾಮಗಾರಿಗಳು ಮುಕ್ತಾಯವಾಗಿದ್ದು ಒಟ್ಟು ರೂ. 30.00 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ.

9. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹರಪನಹಳ್ಳಿ

ದಾವಣಗೆರೆ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹರಪನಹಳ್ಳಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಅಧೀನದಲ್ಲಿ ಹರಪನಹಳ್ಳಿ ಮತ್ತು ಜಗಳೂರು ತಾಲ್ಲೂಕುಗಳು ಸೇರಿದ್ದು 2017–18ನೇ ಸಾಲಿನಲ್ಲಿ ಈ ಕೆಳಗೆ ನಮೂದಿಸಿರುವಂತೆ ಲೆಕ್ಕಶೀರ್ಷಿಕೆಗಳಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

1. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ:

ಈ ಯೋಜನೆಯಡಿಯಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳು ನಿರ್ವಹಿಸಲಾಗುತ್ತದೆ. ಈ ಯೋಜನೆಗೆ ಒಟ್ಟು ರೂ.173.58 ಲಕ್ಷ ಆರ್ಥಿಕ ಗುರಿ ಹೊಂದಿದ್ದು, ರೂ.171.65 ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಒಟ್ಟು 76 ಕಾಮಗಾರಿಗಳು ಮಂಜೂರಾಗಿದ್ದು, 76 ಕಾಮಗಾರಿಗಳು ಪೂರ್ಣಗೊಂಡಿವೆ.

2. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ನಿರ್ವಹಣಾ ಅನುದಾನ(ಟಾಸ್ಕ್‌ಫೋರ್ಸ್) :

ಈ ಯೋಜನೆಯಡಿಯಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳು ನಿರ್ವಹಿಸಲಾಗುತ್ತದೆ. ಈ ಯೋಜನೆಗೆ ಒಟ್ಟು ರೂ.153.15 ಲಕ್ಷ ಆರ್ಥಿಕ ಗುರಿ ಹೊಂದಿದ್ದು, ರೂ.128.70 ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಒಟ್ಟು 52 ಕಾಮಗಾರಿಗಳು ಮಂಜೂರಾಗಿದ್ದು, 52 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಅಂತಿಮ ಕಂತಿನ ರೂ.27.49ಲಕ್ಷಗಳು ಬಿಡುಗಡೆಯಾಗದೇ ಇರುವುದರಿಂದ 7 ಕಾಮಗಾರಿಗಳ ಬಿಲ್ಲುಗಳು ಪಾವತಿಗಾಗಿ ಬಾಕಿ ಇರುತ್ತವೆ.

3. ರಸ್ತೆ ಸುರಕ್ಷತಾ ಕಾಮಗಾರಿಗಳ ಅನುದಾನ

ಈ ಯೋಜನೆಯಡಿಯಲ್ಲಿ ರಸ್ತೆಗಳ ಸುರಕ್ಷತಾ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ. ಈ ಯೋಜನೆಗೆ ಒಟ್ಟು ರೂ.51.00ಲಕ್ಷ ಆರ್ಥಿಕ ಗುರಿ ಹೊಂದಿದ್ದು, ರೂ.50.34ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಒಟ್ಟು 12 ಕಾಮಗಾರಿಗಳು ಮಂಜೂರಾಗಿದ್ದು, 12 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

4. 3054 ಲಮ್‌ಸಮ್ ಯೋಜನೆ ಅನುದಾನ

1) ಈ ಯೋಜನೆಯಡಿಯಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ. ಈ ಯೋಜನೆಗೆ ಒಟ್ಟು ರೂ.135.00ಲಕ್ಷ ಆರ್ಥಿಕ ಗುರಿ ಹೊಂದಿದ್ದು, ರೂ.35.00ಲಕ್ಷ 1 ಕಾಮಗಾರಿಗೆ ಅನುದಾನ ಬಿಡುಗಡೆಯಾಗಿದ್ದು, ರೂ.35.00ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಒಟ್ಟು 12 ಕಾಮಗಾರಿಗಳು ಮಂಜೂರಾಗಿದ್ದು, 1 ಕಾಮಗಾರಿ ಪೂರ್ಣಗೊಂಡಿರುತ್ತದೆ. ಉಳಿದ 11 ಕಾಮಗಾರಿಗಳ ಅಂದಾಜು ಪಟ್ಟಿಗಳು ತಯಾರಿಕೆ ಹಂತದಲ್ಲಿವೆ.

2) 3054 ಲಮ್‌ಸಮ್ ಯೋಜನೆಯಡಿಯಲ್ಲಿ ನಮ್ಮ ಹೊಲ ನಮ್ಮ ದಾರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ. ಈ ಯೋಜನೆಗೆ ಒಟ್ಟು ರೂ.147.50ಲಕ್ಷ ಆರ್ಥಿಕ ಗುರಿ ಹೊಂದಿದ್ದು, ಒಟ್ಟು 15 ಕಾಮಗಾರಿಗಳು ಮಂಜೂರಾಗಿದ್ದು, ಇದರಲ್ಲಿ 13 ಕಾಮಗಾರಿಗಳು ಭೌತಿಕವಾಗಿ ಮುಗಿದಿವೆ. 2 ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ಕಾಮಗಾರಿಗಳಿಗೆ ರೂ.47.50ಲಕ್ಷ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ.

5. ನಬಾರ್ಡ್ ರಸ್ತೆಗಳು :

<u>ನಬಾರ್ಡ್–21ರ</u> ಯೋಜನೆಯಡಿ ರೂ.112.50 ಲಕ್ಷ ಮೊತ್ತದ 2 ಕಾಮಗಾರಿಗಳು ಅನುಮೋದನೆಯಾಗಿದ್ದು, ಹರಪನಹಳ್ಳಿ ತಾಲ್ಲೂಕಿನ 1 ಕಾಮಗಾರಿ ಹಾಗೂ ಜಗಳೂರು ತಾಲ್ಲೂಕಿನ 1 ಕಾಮಗಾರಿಮಂಜೂರಾಗಿರುತ್ತವೆ. ಹರಪನಹಳ್ಳಿ ತಾಲ್ಲೂಕಿನ 1 ಕಾಮಗಾರಿ ಮುಗಿದಿದ್ದು, ಪ್ರಸಕ್ತ ಸಾಲಿನಲ್ಲಿ ರೂ.33.03ಲಕ್ಷ ವೆಚ್ಚ ಭರಿಸಲಾಗಿದೆ(ಒಟ್ಟು ರೂ.59.77ಲಕ್ಷ) ಹಾಗೂ ಜಗಳೂರು ತಾಲ್ಲೂಕಿನ 1 ಕಾಮಗಾರಿ ಮುಗಿದಿದ್ದು, ಪ್ರಸಕ್ತ ಸಾಲಿನಲ್ಲಿ ರೂ.12.28ಲಕ್ಷ ವೆಚ್ಚ ಭರಿಸಲಾಗಿದೆ.(ಒಟ್ಟು ರೂ.44.13ಲಕ್ಷ)

ನಬಾರ್ಡ್–22ರ ಯೋಜನೆಯಡಿ ರೂ.37.50ಲಕ್ಷ ಮೊತ್ತದ ಹರಪನಹಳ್ಳಿ ತಾಲ್ಲೂಕಿನ 1 ಕಾಮಗಾರಿ ಅನುಮೋದನೆಯಾಗಿದ್ದು, ಕಾಮಗಾರಿ ಮುಗಿದಿದೆ. ಪ್ರಸಕ್ತ ಸಾಲಿನಲ್ಲಿ ರೂ.8.12ಲಕ್ಷ ವೆಚ್ಚ ಭರಿಸಲಾಗಿದೆ. (ಒಟ್ಟು ರೂ.32.98ಲಕ್ಷ)

ನಬಾರ್ಡ್–23ರ ಯೋಜನೆಯಡಿ ರೂ.50.00ಲಕ್ಷ ಮೊತ್ತದ ಜಗಳೂರು ತಾಲ್ಲೂಕಿನ 1 ಕಾಮಗಾರಿ ಅನುಮೋದನೆಯಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಪ್ರಸಕ್ತ ಸಾಲಿನಲ್ಲಿ ರೂ.8.87ಲಕ್ಷ ವೆಚ್ಚ ಭರಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿ ಬಿಡುಗಡೆಯಾದ ಅನುದಾನ ರೂ.62.30ಲಕ್ಷಗಳಿಗೆ ಅನುಗುಣವಾಗಿ ರೂ.62.30ಲಕ್ಷ ವೆಚ್ಚ ಭರಿಸಲಾಗಿದೆ.

6. ನಬಾರ್ಡ್ ಯೋಜನೆಯಡಿ ಕೆರೆಗಳ ದುರಸ್ತಿ ಮತ್ತು ಪುನರುಜ್ಜೀವನ:

ನಬಾರ್ಡ್–22ರ ಯೋಜನೆಯಡಿ ಹರಪನಹಳ್ಳಿ ತಾಲ್ಲೂಕಿನ 2 ಕಾಮಗಾರಿಗಳಿಗೆ ರೂ.50.00ಲಕ್ಷ ಅನುಮೋದನೆಯಾಗಿದ್ದು, 1 ಕಾಮಗಾರಿ ಪೂರ್ಣಗೊಂಡಿರುತ್ತದೆ. 1 ಕಾಮಗಾರಿ ಭೌತಿಕವಾಗಿ ಮುಗಿದಿದೆ. ಪ್ರಸಕ್ತ ಸಾಲಿನಲ್ಲಿ ರೂ.32.09ಲಕ್ಷ ವೆಚ್ಚ ಭರಿಸಲಾಗಿದೆ. ಹಾಗು ಜಗಳೂರು ತಾಲ್ಲೂಕಿನ 2 ಕಾಮಗಾರಿಗಳಿಗೆ ರೂ.40.00ಲಕ್ಷ ಅನುಮೋದನೆಯಾಗಿದ್ದು, 2 ಕಾಮಗಾರಿ ಭೌತಿಕವಾಗಿ ಮುಗಿದಿದೆ. ಪ್ರಸಕ್ತ ಸಾಲಿನಲ್ಲಿ ರೂ.21.69ಲಕ್ಷ ವೆಚ್ಚ ಭರಿಸಲಾಗಿದೆ.
ಪ್ರಸಕ್ತ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿ ಬಿಡುಗಡೆಯಾದ ಅನುದಾನ ರೂ.53.78ಲಕ್ಷಗಳಿಗೆ ಅನುಗುಣವಾಗಿ ರೂ.53.78ಲಕ್ಷ ವೆಚ್ಚ ಭರಿಸಲಾಗಿದೆ.

7. ಸಾರ್ವಜನಿಕ ಶಿಕ್ಷಣ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2202 ಪ್ರೌಢ ಶಾಲಾ ಕಟ್ಟಡಗಳ ದುರಸ್ತಿಗಾಗಿ ಆರ್ಥಿಕವಾಗಿ ರೂ.13.75 ಲಕ್ಷ ಗುರಿ ಹೊಂದಿದ್ದು, ರೂ.13.47 ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 11 ಗುರಿಯನ್ನು ಹೊಂದಿದ್ದು 11 ಸಾಧನೆಯಾಗಿರುತ್ತದೆ.

8. ಆರೋಗ್ಯ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2210 ಆರೋಗ್ಯ ಇಲಾಖೆಯ ಕಟ್ಟಡಗಳ ದುರಸ್ತಿಗಾಗಿ ಆರ್ಥಿಕವಾಗಿ ರೂ.16.80ಲಕ್ಷ ಗುರಿ ಹೊಂದಿದ್ದು, ರೂ.16.43ಲಕ್ಷ ಸಾಧನೆಯಾಗಿರುತ್ತೆ. ಭೌತಿಕ 34 ಗುರಿಯನ್ನು ಹೊಂದಿದ್ದು 34 ಸಾಧನೆಯಾಗಿರುತ್ತದೆ.

9. ಹಿಂದುಳಿದ ವರ್ಗಗಳ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2225 ಹಿಂದುಳಿದ ವರ್ಗಗಳ ಇಲಾಖೆಯ ಕಟ್ಟಡಗಳ ದುರಸ್ತಿಗಾಗಿ ಆರ್ಥಿಕವಾಗಿ ರೂ.14.95ಲಕ್ಷ ಗುರಿ ಹೊಂದಿದ್ದು, ರೂ.14.73ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 6 ಗುರಿಯನ್ನು ಹೊಂದಿದ್ದು 6 ಸಾಧನೆಯಾಗಿರುತ್ತದೆ.

10. ಆಯುಷ್ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2210 ಆಯುಷ್ ಇಲಾಖೆಯ ಕಟ್ಟಡಗಳ ನಿರ್ಮಾಣಕ್ಕಾಗಿ ರೂ.5.00ಲಕ್ಷ ಅಂದಾಜು ಮೊತ್ತದ 1 ಕಾಮಗಾರಿ ಮಂಜೂರಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಆರ್ಥಿಕವಾಗಿ ರೂ.2.50ಲಕ್ಷ ಗುರಿ ಹೊಂದಿದ್ದು, ರೂ.2.49ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 1 ಗುರಿಯನ್ನು ಹೊಂದಿದ್ದು, 1 ಪ್ರಗತಿಯಲ್ಲಿದೆ.

11. ಮೀನುಗಾರಿಕೆ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2405 ಮೀನುಗಾರಿಕೆ ಇಲಾಖೆಯ ಕಟ್ಟಡಗಳ ದುರಸ್ತಿಗಾಗಿ ಆರ್ಥಿಕವಾಗಿ ರೂ.5.00ಲಕ್ಷ ಗುರಿ ಹೊಂದಿದ್ದು, ರೂ.4.97ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 3 ಗುರಿಯನ್ನು ಹೊಂದಿದ್ದು, 3 ಸಾಧನೆಯಾಗಿರುತ್ತದೆ.

12. ಪಶು ಸಂಗೋಪನೆ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2403 ಪಶು ಸಂಗೋಪನೆ ಇಲಾಖೆಯ ಕಟ್ಟಡಗಳ ದುರಸ್ತಿಗಾಗಿ ಆರ್ಥಿಕವಾಗಿ ರೂ.3.75ಲಕ್ಷ ಗುರಿ ಹೊಂದಿದ್ದು, ರೂ.3.63ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 3 ಗುರಿಯನ್ನು ಹೊಂದಿದ್ದು, 3 ಸಾಧನೆಯಾಗಿರುತ್ತದೆ.

13. ಸಾಮಾಜಿಕ ಅರಣ್ಯ ಇಲಾಖೆ ಕಟ್ಟಡಗಳ ದುರಸ್ತಿ/ನಿರ್ವಹಣೆ :

2406 ಸಾಮಾಜಿಕ ಅರಣ್ಯ ಇಲಾಖೆಯ ಕಟ್ಟಡಗಳ ದುರಸ್ತಿಗಾಗಿ ಆರ್ಥಿಕವಾಗಿ ರೂ.0.50ಲಕ್ಷ ಗುರಿ ಹೊಂದಿದ್ದು, ರೂ.0.49ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 1 ಗುರಿಯನ್ನು ಹೊಂದಿದ್ದು, 1 ಸಾಧನೆಯಾಗಿರುತ್ತದೆ.

14. ಕನ್ನಡ ಸಂಸ್ಕೃತಿ ಇಲಾಖೆ:

2205 ಕನ್ನಡ ಸಂಸ್ಕೃತಿಇಲಾಖೆ ಕಟ್ಟಡಗಳ ದುರಸ್ತಿಗಾಗಿ ರೂ.3.30 ಲಕ್ಷ ಗುರಿ ಹೊಂದಿದ್ದು, ರೂ.3.21ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 2 ಗುರಿಯನ್ನು ಹೊಂದಿದ್ದು 2 ಸಾಧನೆಯಾಗಿರುತ್ತದೆ.

15. ಮಾರುಕಟ್ಟೆ ಮೂಲಭೂತ ಸೌಕರ್ಯ ಯೋಜನೆ ಇಲಾಖೆ :

3475 ಮಾರುಕಟ್ಟೆ ಮೂಲಭೂತ ಸೌಕರ್ಯ ಯೋಜನೆಯಡಿ ರೂ.7.50ಲಕ್ಷ ಗುರಿ ಹೊಂದಿದ್ದು, ರೂ.7.31ಲಕ್ಷ ಸಾಧನೆಯಾಗಿರುತ್ತದೆ. ಭೌತಿಕ 2 ಗುರಿಯನ್ನು ಹೊಂದಿದ್ದು 2 ಸಾಧನೆಯಾಗಿರುತ್ತದೆ.

16. ಸರ್ವ ಶಿಕ್ಷಣ ಅಭಿಯಾನ ಯೋಜನೆ :

ಈ ಯೋಜನೆಯಡಿ ಹರಪನಹಳ್ಳಿ ತಾಲ್ಲೂಕಿಗೆ 6 ಕಾಮಗಾರಿಗಳು ಮಂಜೂರಾಗಿರುತ್ತವೆ. ಕಾಮಗಾರಿಗಳ ಅಂದಾಜು ಮೊತ್ತ ರೂ.51.11ಲಕ್ಷ ಗುರಿ ಹೊಂದಿದ್ದು, ರೂ.13.25ಲಕ್ಷ ಸಾಧನೆಯಾಗಿರುತ್ತದೆ. 1 ಕಾಮಗಾರಿ ಮುಗಿದಿದ್ದು, 3 ಕಾಮಗಾರಿಗಳು ಭೌತಿಕವಾಗಿ ಮುಗಿದಿರುತ್ತವೆ. 1 ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿದೆ.
ಜಗಳೂರು ತಾಲ್ಲೂಕಿಗೆ 7 ಕಾಮಗಾರಿಗಳು ಮಂಜೂರಾಗಿರುತ್ತವೆ. ಕಾಮಗಾರಿಗಳ ಅಂದಾಜು ಮೊತ್ತ ರೂ.15.36ಲಕ್ಷ ಗುರಿ ಹೊಂದಿದ್ದು, ರೂ.10.85ಲಕ್ಷ ಸಾಧನೆಯಾಗಿರುತ್ತದೆ. 5 ಕಾಮಗಾರಿ ಮುಗಿದಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

17. ಪದವಿ ಪೂರ್ವ ಕಾಲೇಜ್ ಕಟ್ಟಡ ನಿರ್ಮಾಣ ಯೋಜನೆ :

ಪದವಿ ಪೂರ್ವ ಕಾಲೇಜ್ ಕಟ್ಟಡ ನಿರ್ಮಾಣ ಯೋಜನೆಯಡಿ ಹರಪನಹಳ್ಳಿ ತಾಲ್ಲೂಕಿಗೆ 1 ಕಾಮಗಾರಿ ಮಂಜೂರಾಗಿದ್ದು, ಕಾಮಗಾರಿಯ ಅಂದಾಜು ಮೊತ್ತ ರೂ.55.00ಲಕ್ಷ ಗುರಿ ಹೊಂದಿದ್ದು, ಕಾಮಗಾರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಪದವಿ ಪೂರ್ವ ಕಾಲೇಜ್ ಕಟ್ಟಡ ಟಿ.ಎಸ್.ಪಿ ಯೋಜನೆಯಡಿ ಜಗಳೂರು ತಾಲ್ಲೂಕಿಗೆ 3 ಕಾಮಗಾರಿಗಳು ಮಂಜೂರಾಗಿರುತ್ತವೆ. ಕಾಮಗಾರಿಗಳ ಅಂದಾಜು ಮೊತ್ತ ರೂ.253.40ಲಕ್ಷ ಗುರಿ ಹೊಂದಿದ್ದು, 1 ಕಾಮಗಾರಿ ಭೌತಿಕವಾಗಿ ಮುಗಿದಿದೆ. ರೂ.19.67ಲಕ್ಷ ಸಾಧನೆಯಾಗಿರುತ್ತದೆ. ಉಳಿದ 2 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

18. ಕೆರೆಸಂಜೀವಿನಿ ಯೋಜನೆ :

ಕೆರೆಸಂಜೀವಿನಿ–3ರ ಯೋಜನೆಯಡಿಯಲ್ಲಿ ಕೆರೆಗಳಲ್ಲಿನ ಜಂಗಲ್ ಹಾಗೂ ಹೂಳು ತೆಗೆಯಲು ಯೋಜಿಸಲಾಗಿರುತ್ತದೆ. ಕೆರೆಸಂಜೀವಿನಿ–3 ಯೋಜನೆಯಡಿಯಲ್ಲಿ ಹರಪನಹಳ್ಳಿ ತಾಲ್ಲೂಕಿನ2 ಕಾಮಗಾರಿಗಳಿಗೆ ರೂ.15.00ಲಕ್ಷಗಳು ಹಾಗೂ ಜಗಳೂರು ತಾಲ್ಲೂಕಿನ 1 ಕಾಮಗಾರಿಗೆ ರೂ.15.00ಲಕ್ಷಗಳು ಒಟ್ಟು ರೂ.30.00ಲಕ್ಷ ಆರ್ಥಿಕ ಗುರಿ ಹೊಂದಿದ್ದು, ಒಟ್ಟಾರೆ ರೂ.27.52ಲಕ್ಷಗಳ ವೆಚ್ಚ ಸಾಧನೆಯಾಗಿರುತ್ತದೆ. ಭೌತಿಕ 3 ಕಾಮಗಾರಿಗಳ ಗುರಿಯನ್ನು ಹೊಂದಿದ್ದು, 3 ಸಾಧನೆಯಾಗಿರುತ್ತದೆ.

19. ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ ಮತ್ತು ದುರಸ್ತಿ :

2702–00–101–0–26 ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ ಮತ್ತು ದುರಸ್ತಿ ಲೆಕ್ಕಶೀರ್ಷಿಕೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹರಪನಹಳ್ಳಿ ತಾಲ್ಲೂಕಿನ 8 ಕೆರೆ ದುರಸ್ತಿಗಾಗಿ ರೂ.4.76 ಲಕ್ಷಗಳು ಹಾಗೂ ಜಗಳೂರು ತಾಲ್ಲೂಕಿನ 4 ಕೆರೆ ದುರಸ್ತಿಗಾಗಿ ರೂ.2.75ಲಕ್ಷಗಳು ಒಟ್ಟಾರೆ ಆರ್ಥಿಕವಾಗಿ ರೂ.7.51ಲಕ್ಷಗಳ ಗುರಿ ಹೊಂದಿದ್ದು, ರೂ.7.38 ಲಕ್ಷ ಸಾಧನೆಯಾಗಿರುತ್ತದೆ. ಭೌತಿಕವಾಗಿ 12 ಗುರಿಯನ್ನು ಹೊಂದಿದ್ದು, 12 ಕಾಮಗಾರಿಗಳು ಸಾಧನೆಯಾಗಿರುತ್ತದೆ.

20. ಶಾಸನಬದ್ಧ ಅಭಿವೃದ್ಧಿ ಅನುದಾನ:

ಈ ಯೋಜನೆಯಡಿಯಲ್ಲಿ ಎಲ್.ಇ.ಡಿ ವಿದ್ಯುತ್ ಕಂಬಗಳನ್ನು, ಬಯಲು ರಂಗಮಂದಿರ ಹಾಗೂ ಶಾಲಾ ಕ್ರೀಡಾಂಗಣ ಅಭಿವೃದ್ಧಿ ಸಿ.ಸಿ.ರಸ್ತೆಗಳಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿರುತ್ತದೆ.

3	ಕಬ್ಬು(ಕೂಳೆ)	900	627	150	50	25	0	375	650	25	140	25	0	1500	1467
4	ತಂಬಾಕು(ವಿಎಫ್‌ಸಿ	0	0	0	0	0	0	0	0	0	0	0	0	0	0
5	ಇತರೆ ಬೆಳೆಗಳು	0	0	0	0	0	0	0	0	0	0	0	0	0	0
ಒಟ್ಟು ವಾಣಿಜ್ಯ ಬೆಳೆಗಳು:		1800	1071	300	75	50	0	750	1480	50	150	50	0	3000	2776
ಸಮಗ್ರ ಒಟ್ಟು:		**20000**	**19052**	**13500**	**10361**	**1500**	**0**	**8500**	**9525**	**9500**	**10460**	**9000**	**8186**	**62000**	**57584**

ಕೋಷ್ಟಕ 15.5 : ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ ಕಛೇರಿಯ ಹಾಗೂ ಅಧೀನ ಕಛೇರಿಗಳಲ್ಲಿ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ಕ್ರೋಢೀಕೃತ ವಿವರಗಳು
(ದಿನಾಂಕ: 31.03.2018ಕ್ಕೆ ಇರುವಂತೆ)

ಕ್ರ.ಸಂ.	ಹುದ್ದೆಯ ವಿವರಗಳು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಷರಾ
ಎ–ಗ್ರೂಪ್					
1	ಜಂಟಿ ಕೃಷಿ ನಿರ್ದೇಶಕರು	1	1	0	
2	ಉಪ ಕೃಷಿ ನಿರ್ದೇಶಕರು – 1, ದಾವಣಗೆರೆ	1	1	0	
3	ಉಪ ಕೃಷಿ ನಿರ್ದೇಶಕರು – 2, ಹರಪನಹಳ್ಳಿ	1	1	0	
4	ಉಪ ಕೃಷಿ ನಿರ್ದೇಶಕರು , ರ.ನಿ.ಪ್ರ, ಕಾಡಜ್ಜಿ.	1	1	0	
5	ಸಹಾಯಕ ಕೃಷಿ ನಿರ್ದೇಶಕರು(ಕೇಂದ್ರ)	1	0	1	
6	ಸಹಾಯಕ ಕೃಷಿ ನಿರ್ದೇಶಕರು(ವಿತ)	1	1	0	
7	ಸಹಾಯಕ ಕೃಷಿ ನಿರ್ದೇಶಕರು(ಜಾರಿದಳ)	2	1	1	
8	ಸಹಾಯಕ ಕೃಷಿ ನಿರ್ದೇಶಕರು(ಉ&ಮೌ)	1	0	1	
9	ಸಹಾಯಕ ಕೃಷಿ ನಿರ್ದೇಶಕರು	9	7	2	
10	ಸಹಾಯಕ ಕೃಷಿ ನಿರ್ದೇಶಕರು (ರೈಮ)	2	1	1	
11	ಆಡಳಿತಾಧಿಕಾರಿಗಳು	1	0	1	
12	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು	1	1	0	
13	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	1	0	1	
	ಒಟ್ಟು	23	15	8	
ಬಿ–ಗ್ರೂಪ್					
1	ಕೃಷಿ ಅಧಿಕಾರಿಗಳು	63	39	24	
2	ಆಡಳಿತ ಸಹಾಯಕರು	1	1	0	
3	ಸಹಾಯಕ ಕೃಷಿ ಅಧಿಕಾರಿ	100	61	39	
4	ವಲಯ ಅರಣ್ಯಾಧಿಕಾರಿಗಳು	2	1	1	
5	ಸಹಾಯಕ ತೋಟಗಾರಿಕೆ ಅಧಿಕಾರಿಗಳು	1	0	1	
	ಒಟ್ಟು	167	102	65	

ಕ್ರ.ಸಂ.	ಹುದ್ದೆಯ ವಿವರಗಳು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಷರಾ
ಸಿ–ಗ್ರೂಪ್					
1	ಅಧೀಕ್ಷಕರು	12	11	1	
2	ಪ್ರಥಮ ದರ್ಜೆ ಸಹಾಯಕರು	22	18	4	
3	ದ್ವಿತೀಯ ದರ್ಜೆ ಸಹಾಯಕರು	22	15	7	
4	ಬೆರಳಚ್ಚುಗಾರರು	14	8	6	
5	ಶೀಘ್ರಲಿಪಿಗಾರರು	1	0	1	
6	ರೇಖಾಗಾರರು	2	1	1	
7	ಕೃಷಿ ಉಪಕರಣಗಳ ಮೇಲ್ವಿಚಾರಕರು	1	1	0	
8	ಪ್ರಯೋಗ ಶಾಲಾ ಸಹಾಯಕರು	8	1	7	
9	ವಾಹನ ಚಾಲಕರು	13	5	8	
10	ಉಪ ವಲಯ ಅರಣ್ಯಾಧಿಕಾರಿಗಳು	6	1	5	
11	ಸಹಾಯಕ ತೋಟಗಾರ	2	0	2	
12	ಅರಣ್ಯ ರಕ್ಷಕರು	18	1	17	
	ಒಟ್ಟು	121	62	59	
	ಡಿ–ಗ್ರೂಪ್				
1	ಪ್ರಯೋಗ ಶಾಲಾ ಪರಿಚಾರಕರು	15	12	3	
2	ಸಹಾಯಕ ತೋಟಗಾರ	6	1	5	
3	ಡಿ–ದರ್ಜೆ ನೌಕರರು	42	14	28	
4	ಬಾಣಸಿಗರು (ಅಡಿಗೆಯವರು)	1	0	1	
	ಒಟ್ಟು	64	27	37	
	ಎ, ಬಿ ಸಿ ಮತ್ತು ಡಿ ಹುದ್ದೆಗಳ ಒಟ್ಟು	375	206	169	

16. ತೋಟಗಾರಿಕೆ

ದಾವಣಗೆರೆ ಜಿಲ್ಲೆಯು ದಿನಾಂಕ:15–08–1997 ರಿಂದ ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದು, ಆರು ತಾಲ್ಲೂಕುಗಳಾದ ದಾವಣಗೆರೆ, ಹರಿಹರ, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ, ಹಾಗೂ ಜಗಳೂರು ಒಳಗೊಂಡಿರುತ್ತದೆ. ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿ ಉತ್ತರ ಅಕ್ಷಾಂಶದ 14 ಡಿಗ್ರಿಯಿಂದ 18 ಡಿಗ್ರಿಗಳ ನಡುವೆ ಮತ್ತು ರೇಖಾಂಶದ 75.5^0ರಲ್ಲಿ ಇರುತ್ತದೆ. ಈ ಜಿಲ್ಲೆಯು ಭೌಗೋಳಿಕವಾಗಿ 5975 ಚ.ಕಿ.ಮೀ. ವಿಸ್ತೀರ್ಣದಿಂದ ಕೂಡಿದ್ದು, ಸಮುದ್ರ ಮಟ್ಟದಿಂದ 1928 ಅಡಿ ಎತ್ತರದಲ್ಲಿ ಇರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 5.97 ಲಕ್ಷ ಹೆಕ್ಟೇರ್‌ಗಳಲ್ಲಿ ಸಾಗುವಳಿ ವಿಸ್ತೀರ್ಣ 4.26ಲಕ್ಷ ಹೆ.ಆಗಿರುತ್ತದೆ. ಇದರಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ 2017–18ನೇ ಸಾಲಿನಲ್ಲಿ 87,399.69ಹೆ. ಪ್ರದೇಶ ಇದ್ದು, ಇದು ಸಾಗುವಳಿ ವಿಸ್ತೀರ್ಣದ ಶೇ.16.51ರಷ್ಟು ಆಗಿರುತ್ತದೆ. ಇದರಲ್ಲಿ ತೋಟದ ಬೆಳೆಗಳ ಪ್ರದೇಶ **54,904 ಹೆಕ್ಟೇರ್,** ಹಣ್ಣಿನ ಬೆಳೆಗಳ ಪ್ರದೇಶ **10,073ಹೆಕ್ಟೇರ್,** ತರಕಾರಿ ಬೆಳೆಗಳ ಪ್ರದೇಶ **16,374ಹೆಕ್ಟೇರ್**, ಹೂವಿನ ಬೆಳೆಗಳ ಪ್ರದೇಶ 1112 **ಹೆಕ್ಟೇರ್,** ಸಾಂಬಾರು ಬೆಳೆಗಳ ಪ್ರದೇಶ **1487 ಹೆಕ್ಟೇರ್** ಇರುತ್ತದೆ. ಜಿಲ್ಲೆಯಲ್ಲಿ ಮುಖ್ಯವಾಗಿ ತೋಟದ ಬೆಳೆಗಳಾದ ತೆಂಗು, ಅಡಿಕೆ, ವಿಳ್ಯೇದೆಲೆ, ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಪಪ್ಪಾಯ, ದಾಳಿಂಬೆ, ಸಪೋಟ, ತರಕಾರಿ ಬೆಳೆಗಳಾದ ಈರುಳ್ಳಿ, ಮೆಣಸಿನಕಾಯಿ, ಟೊಮೋಟೊ, ಕಲ್ಲಂಗಡಿ, ಕರಬೂಜ, ಹೂವಿನ ಬೆಳೆಗಳಾದ ಚೆಂಡುಹೂವು, ಮಲ್ಲಿಗೆ, ಇತ್ಯಾದಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ

ಕೋಷ್ಟಕ 16.1 **: ತೋಟಗಾರಿಕೆ ಬೆಳೆಗಳ ವಿಸ್ತೀರ್ಣದ ವಿವರಗಳು**

(ಹೆಕ್ಟರ್‌ಗಳಲ್ಲಿ)

ಹಣ್ಣಿನ ಬೆಳೆಗಳು		ತರಕಾರಿ ಬೆಳೆಗಳು		ತೋಟದ ಬೆಳೆಗಳು		ಹೂವಿನ ಬೆಳೆಗಳು		ಸಾಂಬಾರು ಬೆಳೆಗಳು	
ಹೆಸರು	ವಿಸ್ತೀರ್ಣ	ಹೆಸರು	ವಿಸ್ತೀರ್ಣ	ಹೆಸರು	ವಿಸ್ತೀರ್ಣ	ಹೆಸರು	ವಿಸ್ತೀರ್ಣ	ಹೆಸರು	ವಿಸ್ತೀರ್ಣ
ಮಾವು	3380	ಟೊಮೋಟೊ	5445	ತೆಂಗು	11345	ಸೇವತಿಂಗೆ	100	ಹುಣಸೆ	160
ಬಾಳೆ	5710	ಈರುಳ್ಳಿ	6821	ಅಡಿಕೆ	42000	ಚೆಂಡು	850	ಶುಂಠಿ	30
ಸಪೋಟ	500	ಮೆಣಸಿನಕಾಯಿ	1440	ವಿಳ್ಯೇದೆಲೆ	570	ಮಲ್ಲಿಗೆ	55	ಅರಿಶಿಣ	160
ಪಪ್ಪಾಯ	419	ಬದನೆ	217	ಕೋಕೋ	470	ಗುಲಾಬಿ	72	ಒಣಮೆಣಸಿ ನಕಾಯಿ	230
ದಾಳಿಂಬ	650	ಬೆಂಡೆಕಾಯಿ	369	ತಾಳೆಬೆಳೆ	1046	ಆಸ್ಟರ್	30	ಬೆಳ್ಳುಳ್ಳಿ	37
ಸೀಬೆ	18	ಮಿಡಿಸೌತೆ	118					ಮೆಣಸು	290

1. ಆಡಳಿತ ವ್ಯಾಪ್ತಿ:

ತೋಟಗಾರಿಕೆ ಉಪ ನಿರ್ದೇಶಕರು ಜಿಲ್ಲೆಯ ತೋಟಗಾರಿಕೆ ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯ ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ತಾಲ್ಲೂಕಿನಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ಹರಿಹರ ಜಗಳೂರು ತಾಲ್ಲೂಕಿನಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ತಾಂತ್ರಿಕ ಸಿಬ್ಬಂದಿಯ ಸಹಯೋಗದೊಂದಿಗೆ ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

: ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು :

2. ವಿಶೇಷ ಹನಿ ನೀರಾವರಿ ರಾಜ್ಯ ವಲಯ ಯೋಜನೆ :

ಸದರಿ ಯೋಜನೆಯಡಿಯಲ್ಲಿ 2017–18ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ರೈತರಿಗೆ ತಲಾ 5 ಹೆಕ್ಟೇರ್‌ಗಳವರೆಗೆ ಸಹಾಯಧನ ನೀಡಲಾಗಿದೆ. ಸರ್ಕಾರದ ಮಾರ್ಗಸೂಚಿಯಂತೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. 2017–18ನೇ ಸಾಲಿನಲ್ಲಿ **ವಾರ್ಷಿಕ ಆರ್ಥಿಕ ಗುರಿ ರೂ.65.00 ಲಕ್ಷ** ಇದ್ದು, ಅದರಲ್ಲಿ **ರೂ.65.00ಲಕ್ಷಗಳನ್ನು** ವೆಚ್ಚಮಾಡಲಾಗಿರುತ್ತದೆ. **ಭೌತಿಕ ಗುರಿ 156** ಹೆ.ಗಳಿದ್ದು, ಅದರಲ್ಲಿ **156 ಹೆ.** ಸಾಧನೆ ಮಾಡಲಾಗಿರುತ್ತದೆ.

3. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ :

ಸದರಿ ಯೋಜನೆಯಲ್ಲಿ 2017–18ನೇ ಸಾಲಿಗೆ ರೂ.**4.00ಲಕ್ಷ** ಗುರಿ ಇದ್ದು, ಅದರಲ್ಲಿ **ರೂ.4.00ಲಕ್ಷ** ಸಾಧನೆ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ 11500 ತೆಂಗು ಬೀಜಗಳನ್ನು ಸಂಗ್ರಹಿಸಿ ಬಿತ್ತನೆ ಮಾಡಲಾಗಿದ್ದು, ಸದರಿ ಸಸಿಗಳು 2017–18ನೇ ಸಾಲಿನ ಜುಲೈ ಮಾಹೆಯಲ್ಲಿ ಮಾರಾಟಕ್ಕೆ ಸಿದ್ದಗೊಳ್ಳುತ್ತವೆ. 2017–18ನೇ ಸಾಲಿನಲ್ಲಿ ಬಿತ್ತನೆ ಮಾಡಿರುವ 15000 ಸಸಿಗಳು ಜುಲೈ–2016ರ ಅಂತ್ಯಕ್ಕೆ ಮಾರಾಟಕ್ಕೆ ಸಿದ್ಧಗೊಂಡಿವೆ.

4. ಪ್ರಚಾರ ಮತ್ತು ಸಾಹಿತ್ಯ :

ಪ್ರಚಾರ ಮತ್ತು ಸಾಹಿತ್ಯ ಕಾರ್ಯಾಕ್ರಮದಲ್ಲಿ 2017–18ನೇ ಸಾಲಿನಲ್ಲಿ ರೂ.3.00ಲಕ್ಷ ಗುರಿ ಇದ್ದು ರೂ.3.00ಲಕ್ಷ ವೆಚ್ಚ ಮಾಡಿ ಭೌತಿಕ ಗುರಿ 1253 ಸಂಖ್ಯೆ ಇದ್ದು, 2001 ಸಂಖ್ಯೆ ಪ್ರಮುಖ ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳ ಮಾಹಿತಿಯುಳ್ಳ ಕರಪತ್ರಗಳನ್ನು ಮುದ್ರಿಸಿ ರೈತರಿಗೆ ವಿತರಣೆ ಮಾಡಲಾಗಿದೆ.

5. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ: ಮತ್ತು ಮೂಲ ಸೌಕರ್ಯ ಅಬಿವೃದ್ಧಿ ಯೋಜನೆ :

ಸದರಿ ಯೋಜನೆಯಲ್ಲಿ 2017–18ನೇ ಸಾಲಿಗೆ 8.00 ಲಕ್ಷ ಗುರಿ ಇದ್ದು, ರೂ.8.00 ಲಕ್ಷ ವೆಚ್ಚ ಮಾಡಲಾಗಿದೆ. ದಾವಣಗೆರೆ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ತೋಟಗಾರಿಕೆ ಕ್ಷೇತ್ರಗಳು ಈ ಕೆಳಕಂಡಂತೆ ಇರುತ್ತವೆ.

- ದಾವಣಗೆರೆ ತಾಲ್ಲೂಕು ಅವರಗೊಳ್ಳ ತೋಟಗಾರಿಕೆ ಕ್ಷೇತ್ರ–5.00 (ಎ)
- ಹರಿಹರ ತಾಲ್ಲೂಕು ಬುಳ್ಳಾಪುರ ತೋಟಗಾರಿಕೆ ಕ್ಷೇತ್ರ –10.00(ಎ)
- ಚನ್ನಗಿರಿ ತಾಲ್ಲೂಕು ಗರಗ ತೋಟಗಾರಿಕೆ ಕ್ಷೇತ್ರ –76.26 (ಎ)
- ಹರಪನಹಳ್ಳಿ ತಾಲ್ಲೂಕು ಕೆ.ಕಲ್ಲಹಳ್ಳಿ ತೋಟಗಾರಿಕೆ ಕ್ಷೇತ್ರ –57.19 (ಎ)
- ಜಗಳೂರು ತಾಲ್ಲೂಕು ವ್ಯಾಸಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ–21.36(ಎ)

ಮೇಲಿನ ತೋಟಗಾರಿಕೆ ಕ್ಷೇತ್ರಗಳಲ್ಲಿ ಇರುವ ಮಾವು, ಸಪೋಟ, ದಾಳಿಂಬೆ ಗಿಡಗಳಿಗೆ ಪಾತಿ ಮಾಡಿಸುವುದು, ಗೊಬ್ಬರ ಹಾಕಿಸುವುದು, ನೀರು ಉಣಿಸುವುದು, ಹಾಗೂ ವಯಸ್ಸಾದ ಹಣ್ಣಿನ ಗಿಡಗಳ ತೆಗೆದು ಹೊಸದಾಗಿ ಹಣ್ಣಿನ ಗಿಡಗಳ ಹಾಕುವುದು ಹಾಗೂ ಕ್ಷೇತ್ರದ ನೀರಿನ ಸೌಕರ್ಯಕ್ಕಾಗಿ ಬಳಸಿದ ಐ.ಪಿ.ಸೆಟ್ ವಿದ್ಯುತ್ ಬಾಕಿ ಪಾವತಿಗಾಗಿ ವೆಚ್ಚ ಮಾಡಲಾಗಿದೆ.

6. ತೋಟಗಾರಿಕೆ ಕಟ್ಟಡಗಳು:

2017–18ನೇ ಸಾಲಿಗೆ ರೂ.20.00 ಲಕ್ಷ ಗುರಿ ಇದ್ದು ಪೂರ್ಣ ಅನುದಾನ ಬಿಡುಗಡೆಯಾಗಿ ತೋಟಗಾರಿಕೆ ಉಪನಿರ್ದೇಶಕರವರ ಕಛೇರಿ ಆಧುನೀಕರಣ ವಿದ್ಯುದ್ದೀಕರಣ ಹಾಗೂ ಕಾಂಪೌಂಡ್ ಕಾಮಗಾರಿ ಅಡಿ ವೆಚ್ಚ ಮಾಡಲಾಗಿರುತ್ತದೆ.

7. ಸಾಮರ್ಥ್ಯವುಳ್ಳ ರಾಜ್ಯಗಳನ್ನು ಎಣ್ಣೆ ತಾಳೆಯ ವ್ಯವಸಾಯ :

ಸದರಿ ಯೋಜನೆಯಡಿಯಲ್ಲಿ 2017–18ನೇ ಸಾಲಿಗೆ ರೂ.4.00ಲಕ್ಷ ಗುರಿ ನಿಗಧಿಪಡಿಸಿದ್ದು, ರೂ.4.00ಲಕ್ಷ ಪೂರ್ಣ ವೆಚ್ಚ ಮಾಡಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಹನಿ ನೀರಾವರಿ ಅಳವಡಿಕೆ, ರೈತರಿಗೆ ತರಬೇತಿ ಕಾರ್ಯಕ್ರಮ, ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ, ರೈತರು ತಾಳೆತೋಟದಲ್ಲಿ ಕೊರೆಯಿಸಿದ ಕೊಳವೆಬಾವಿ, ಕಳೆ ಕತ್ತರಿಸುವ ಯಂತ್ರಕ್ಕೆ ಸಹಾಯಧನ ಹಾಗೂ ವಿಸ್ತರಣೆ ಮತ್ತು ಪ್ರಚಾರಕ್ಕಾಗಿ ಕಿರುಹೊತ್ತಿಗೆ ಮುದ್ರಿಸಿ ವಿತರಿಸಲಾಗಿದೆ.

: ತಾಲ್ಲೂಕ ಪಂಚಾಯತ್ ಯೋಜನೆಗಳು:

8. ರೈತರಿಗಾಗಿ ತರಬೇತಿ:

2017–18ನೇ ಸಾಲಿಗೆ ರೂ.1.00ಲಕ್ಷ ಗುರಿ ಇದ್ದು, ರೂ.1.00ಲಕ್ಷ ವೆಚ್ಚ ಮಾಡಿ 500ರೈತ ಮಹಿಳೆಯರಿಗೆ ತರಬೇತಿ ನೀಡಲಾಗಿದೆ. ಸದರಿ ಯೋಜನೆಯಲ್ಲಿ ಇಲಾಖಾ ಕಛೇರಿಯಲ್ಲಿ ವಿವಿಧ ಗ್ರಾಮ ಪಂಚಾಯಿತಿಗಳಿಗೆ ಸೇರಿದ ಗ್ರಾಮಗಳಿಂದ ಆಯ್ದ ಮಹಿಳಾ ಫಲಾನುಭವಿಗಳಿಗೆ ತೋಟಗಾರಿಕೆ ಹಣ್ಣುಗಳ ಮತ್ತು ತರಕಾರಿಗಳ ಶೇಖರಣೆ ಮತ್ತು ಸಂಸ್ಕರಣೆ ಬಗ್ಗೆ ವಿಷಯ ತಜ್ಞರಿಂದ ಹಾಗೂ ಇಲಾಖೆಯ ಅಧಿಕಾರಿಗಳಿಂದ ತರಬೇತಿಯನ್ನು ನೀಡಲಾಗಿದೆ.

9. ರೈತರಿಗೆ ಸಹಾಯ :

2017–18ನೇ ಸಾಲಿಗೆ ರೂ.8.00ಲಕ್ಷ ಆರ್ಥಿಕ ಗುರಿ ಇದ್ದು, ಇದರಲ್ಲಿ ರೂ.8.00ಲಕ್ಷ ವೆಚ್ಚ ಮಾಡಿ 2200 ಫಲಾನುಭವಿಗಳಿಗೆ ರೂ.1000/– ಮೊತ್ತದ ಸಪೋಟ ಮತ್ತು ಮಾವು ಹಣ್ಣಿನ ಕಸಿಸಸಿಗಳನ್ನು ವಿತರಿಸಲಾಗಿದೆ.

10. ಕ್ಷೇತ್ರ ಹಾಗೂ ಸಸ್ಯಾಗಾರಗಳ ವಿವರಗಳು :

ತೋಟಗಾರಿಕೆ ಇಲಾಖೆಯು ಜಿಲ್ಲೆಯ ಅಧೀನ ಬರುವ ಕ್ಷೇತ್ರ ಹಾಗೂ ಸಸ್ಯಾಗಾರಗಳಲ್ಲಿ ಸಪೋಟ, ಸೀಬೆ, ಮಾವು, ತೆಂಗು, ನಿಂಬೆ, ಪಪ್ಪಾಯ, ಕರಿಬೇವು, ಅಲಂಕಾರಿಕ ಗಿಡಗಳು, ಸಸಿ–ಕಸಿಗಳನ್ನು ಅಭಿವೃದ್ಧಿಪಡಿಸಿ ಇಲಾಖಾ ದರದಂತೆ ರೈತರಿಗೆ ಮಾರಾಟ ಮಾಡಲಾಗುತ್ತದೆ.

ಕೋಷ್ಟಕ 16.2

ಕ್ರ. ಸಂ	ಜಿಲ್ಲೆ/ ತಾಲ್ಲೂಕು ಹೆಸರು	ತೋಟಗಾರಿಕೆ ಕ್ಷೇತ್ರ/ ಸಸ್ಯಾಗಾರದ ಹೆಸರು	ಸ್ಥಾಪನೆಯಾದ ವರ್ಷ	ಒಟ್ಟು ವಿಸ್ತೀರ್ಣ	ಅಭಿವೃದ್ಧಿಗೊಂಡ ವಿಸ್ತೀರ್ಣ (ಎ.ಗಳಲ್ಲಿ)	ಅಭಿವೃದ್ಧಿ ಪಡಿಸಿಬೇಕಾದ ವಿಸ್ತೀರ್ಣ (ಎ.ಗಳಲ್ಲಿ)	ಮೂಲಭೂತ ಸೌಕರ್ಯವಿರುವ ವಿವರಗಳು	ಪ್ರಸ್ತುತ ಸಸ್ಯ ಸಂಪತ್ತಿನ ವಿವರ	ಸಿಬ್ಬಂದಿ ವಿವರಗಳು
1	2	3	4	5	6	7	8	9	10
1	ದಾವಣಗೆರೆ	ಆವರಗೊಳ್ಳ ತೋಟಗಾರಿಕೆ ಕ್ಷೇತ್ರ	1964	5.00	5.00	–	ಕೊಳವೆಬಾವಿ–1 ಕಛೇರಿ ಕಟ್ಟಡ–1 ಪಂಪ್‌ಸೆಟ್–1 ಕಾಂಪೌಂಡ್ ಗೋಡೆ–1 ಪಾಲಿ ಮನೆ–1	ಮಾವು–36 ಸಪೋಟ–41 ತೆಂಗು–17 ಹಲಸು–6 ದಾಳಿಂಬೆ–15 ಸೀತಾಫಲ–3 ಹುಣಸೆ–2 ನುಗ್ಗೆ–8	ತೋಟಗಾರಿಕೆ ಸಹಾಯಕರು–1
2	ಹರಿಹರ	ಬುಳ್ಳಾಪುರ ತೋಟಗಾರಿಕೆ ಕ್ಷೇತ್ರ	1971	10.00	10.00	–	ಕಛೇರಿ ಕಟ್ಟಡ–1 ಕೊಳವೆ ಬಾವಿ–2 ಪಂಪ್‌ಹೌಸ್–1 ಚೈನ್ ಲಿಂಕ್ ಬೇಲಿ–1 ಪಾಲಿಮನೆ–1 ನೆರಳುಪರದೆ–1	ಸಪೋಟ–104 ತೆಂಗು–14 ಮಾವು–20 ಹುಣಸೆ–7	1)ತೋಟಗಾರಿಕೆ ಸಹಾಯಕರು–1
3	ಚನ್ನಗಿರಿ	ಗರಗ ತೋಟಗಾರಿಕೆ ಕ್ಷೇತ್ರ	1968	76.26	51.26	–	ಕೊಳವೆಬಾವಿ–4 ಕಛೇರಿ ಕಟ್ಟಡ–1 ಪಾಲಿಮನೆ–1 ನೆರಳುಪರದೆ–1	ಮಾವು–824 ಸಪೋಟ–1184 ತೆಂಗು–11 ಹಲಸು–312 ಗೋಡಂಬಿ–194 ನೇರಳೆ–624 ಸೀಬೆ–514	1. ಸಹಾಯಕ ತೋಟಗಾರಿಕೆ ಅಧಿಕಾರಿ–01 2. ತೋಟಗಾರಿಕೆ ಸಹಾಯಕರು–01 ಖಾಲಿ 3. ತೋಟಗಾರಿಕೆ ಸಹಾಯಕರು–01 4. ತೋಟಗಾರರು–01
4	ಹರಪನಹಳ್ಳಿ	ಕೆ.ಕಲ್ಲಹಳ್ಳಿ ತೋಟಗಾರಿಕೆ ಕ್ಷೇತ್ರ	1985	57.19	40.00	17.19	ಉಗ್ರಾಣ–1 ದನದ ಕೊಟ್ಟಿಗೆ–1 ಪಂಪ್‌ಹೌಸ್–1 ಕೊಳವೆಬಾವಿ–3	ಮಾವು–197 ಸಪೋಟ–169 ಹುಣಸೆ–02 ತೆಂಗು–03	1) ತೋಟಗಾರಿಕೆ ಸಹಾಯಕರು–01
5	ಜಗಳೂರು	ವ್ಯಾಸಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ	1971	21.36	21.36	0	ಕೊಳವೆಬಾವಿ–2 ಕಛೇರಿ ಕಟ್ಟಡ–1 ಮುಳ್ಳುತಂತಿ ನೀರಿನ ತೊಟ್ಟಿ–1	ಮಾವು–23 ಸಪೋಟ–210 ಸೀಬೆ–102 ಹುಣಸೆ–200	1) ತೋಟಗಾರಿಕೆ ಸಹಾಯಕರು–01
ಒಟ್ಟು				**169.81**	**127.62**	**42.19**			

ಕೋಷ್ಟಕ 16.3 : ಮಂಜೂರಾಗಿರುವ ಮತ್ತು ಭರ್ತಿಯಾಗಿರುವ ಹುದ್ದೆಗಳ ಮಾಹಿತಿ

ಕ್ರ. ಸಂ.	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
01	ತೋಟಗಾರಿಕೆ ಉಪ ನಿರ್ದೇಶಕರು	01	01	–
02	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	06	04	00
03	ಸಹಾಯಕ ತೋಟಗಾರಿಕೆ ನಿರ್ದೇಶಕರು	02	06	01
04	ಸಹಾಯಕ ತೋಟಗಾರಿಕೆ ಅಧಿಕಾರಿ	34	28	05
05	ಅಧೀಕ್ಷಕರು	05	05	–
06	ಪ್ರಥಮದರ್ಜೆ ಸಹಾಯಕರು	06	03	03
07	ದ್ವಿತೀಯದರ್ಜೆ ಸಹಾಯಕರು	04	01	03
08	ತೋಟಗಾರಿಕೆ ಸಹಾಯಕರು	16	13	04
09	ಬೆರಳಚ್ಚುಗಾರರು	01	0	01
10	ವಾಹನ ಚಾಲಕರು	01	0	01
11	ಕಚೇರಿ ಸೇವಕರು	01	0	01
12	ತೋಟಗಾರರು	3	3	4
13	ವಾಚ್‌ಮನ್	0	0	0
ಒಟ್ಟು		**80**	**68**	**12**

17. ಪಶು ಸಂಗೋಪನೆ

ಪೀಠಿಕೆ :

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು 1945 ರಲ್ಲಿಯೇ ಕೃಷಿ ಇಲಾಖೆಯಿಂದ ಪ್ರತ್ಯೇಕಗೊಂಡು, ಸ್ವತಂತ್ರ ಇಲಾಖೆಯಾಗಿ ರೂಪುಗೊಂಡಿರುವುದಲ್ಲದೆ ಆರಂಭಗೊಂಡ ದಿನಗಳಲ್ಲಿ ಇಲಾಖೆಯ ಚಟುವಟಿಕೆಗಳು ಕೇವಲ ಜಾನುವಾರುಗಳಿಗೆ ಆರೋಗ್ಯ ರಕ್ಷಣೆಯನ್ನು ಒದಗಿಸುವುದಕ್ಕೆ ಮಾತ್ರ ಸೀಮಿತಗೊಂಡಿತ್ತಾದರೂ ಇಂದು ಇಲಾಖೆಯು ರೈತರಿಗೆ ಹೈನುಗಾರಿಕೆಯ ಬಗ್ಗೆ, ಜಾನುವಾರು ತಳಿ ಸಂವರ್ಧನೆ ಬಗ್ಗೆ ಮತ್ತು ಕುಕ್ಕುಟ ಅಭಿವೃದ್ಧಿಯ ಬಗ್ಗೆ ಆಧುನಿಕ ತಾಂತ್ರಿಕತೆಯ ಮಾಹಿತಿಗಳನ್ನು ಒದಗಿಸುತ್ತಿರುವುದಲ್ಲದೇ ಇಲಾಖೆಯ ಅತೀ ಮುಖ್ಯವಾದ ಜಾನುವಾರು ಸಂಪತ್ತಿನ ಆರೋಗ್ಯ ರಕ್ಷಣೆಯ ಕಾರ್ಯದೊಂದಿಗೆ ದನ, ಎಮ್ಮೆ, ಕುರಿ ಮತ್ತು ಉಣ್ಣೆ, ಮೇಕೆ, ವರಾಹ, ಕುಕ್ಕುಟ, ಬಾತು ಕೋಳಿ, ಮೊಲ, ಮೇವು ಇತ್ಯಾದಿಗಳ ಅಭಿವೃದ್ಧಿ ಚಟುವಟಿಕೆಗಳು, ವಿಸ್ತರಣಾ ಸೇವೆಗಳು ಮತ್ತು ತರಬೇತಿ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ, ಮಾದರಿ ಸಮೀಕ್ಷೆ ಮತ್ತು ಜಾನುವಾರು ಗಣತಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಈ ಎಲ್ಲಾ ಚಟುವಟಿಕೆಗಳ ಅಂತಿಮ ಗುರಿ ಜಾನುವಾರು ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಮತ್ತು ಕುಕ್ಕುಟ ಉತ್ಪನ್ನಗಳಾದ ಮೊಟ್ಟೆ ಮತ್ತು ಕೋಳಿ ಮಾಂಸ ಅಧಿಕವಾಗಿ ಲಭ್ಯಗೊಳಿಸುವ ಮೂಲಕ ಜನ ಜೀವನ ಮಟ್ಟವನ್ನು ಸುಧಾರಿಸುವುದರೊಂದಿಗೆ ದೇಶದ ಸಂಪತ್ತನ್ನು ಹೆಚ್ಚುವುದಾಗಿದೆ.

ಉದ್ದೇಶಗಳು:

- ಜಿಲ್ಲೆಯಲ್ಲಿರುವ ಸಾಕು ಪ್ರಾಣಿಗಳ ಮತ್ತು ಕುಕ್ಕುಟ ಸಂಪತ್ತಿನ ಆರೋಗ್ಯ ರಕ್ಷಣೆ ಹಾಗೂ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳಿಂದ ರಕ್ಷಣೆ ನೀಡುವುದು.
- ಸುಧಾರಿತ ರೀತಿಯಲ್ಲಿ ತಳಿ ಸಂವರ್ಧನೆ, ಮೇವು ಉತ್ಪಾದನೆ ಹಾಗೂ ನಿರ್ವಹಣಾ ಕಾರ್ಯಗಳ ಮೂಲಕ ಜಾನುವಾರುಗಳ ಮತ್ತು ಕುಕ್ಕುಟಗಳ ಉತ್ಪತ್ತಿಯನ್ನು ವೃದ್ಧಿಸುವುದು.
- ಸುಧಾರಿತ/ಆಧುನಿಕ ಪಶುಸಂಗೋಪನೆ ಪದ್ಧತಿಗಳ ಬಗ್ಗೆ ರೈತರಿಗೆ ತರಬೇತಿ, ತಿಳುವಳಿಕೆ ನೀಡುವುದು ಮತ್ತು ಅದರ ಪ್ರಚಾರಕ್ಕಾಗಿ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳುವುದು.
- ವಿವಿಧ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳಾದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳನ್ನು ಜಾರಿಗೊಳಿಸುವುದು.
- ಪ್ರತಿ 5 ವರ್ಷಗಳಿಗೊಮ್ಮೆ ಜಾನುವಾರು ಗಣತಿಯನ್ನು ನಡೆಸುವುದು ಮತ್ತು ಪ್ರಮುಖ ಪ್ರಾಣಿಜನ್ಯ ಉತ್ಪನ್ನಗಳಾದ ಹಾಲು, ಮಾಂಸ, ಉಣ್ಣೆ ಮತ್ತು ಮೊಟ್ಟೆ ಮತ್ತಿತರವುಗಳನ್ನು ಅಂದಾಜು ಮಾಡುವುದಕ್ಕಾಗಿ ವರ್ಷವಿಡೀ ಸಮಗ್ರ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುವುದು.

ಕೋಷ್ಟಕ 17.1 : ಇಲಾಖೆಯ ಚಟುವಟಿಕೆಗಳು ಮತ್ತು ಸಾಧನೆಗಳು

ಕ್ರ. ಸಂ.	ಇಲಾಖಾ ಚಟುವಟಿಕೆಗಳು	2015–2016		2016–2017		2017–18	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	ಕೃತಕ ಗರ್ಭಧಾರಣೆ ಮಾಡಿದ ಜಾನುವಾರು ಸಂಖ್ಯೆ	130300	145595	140815	148750	154896	157439
2	ಕಾಲು ಬಾಯಿ ಜ್ವರದ ವಿರುದ್ಧ ಲಸಿಕೆ ಹಾಕಿದ ಸಂಖ್ಯೆ	922148	457171	916926	876793	916926	855678
3	ಕೊಕ್ಕರೆ ರೋಗದ ವಿರುದ್ಧ ಲಸಿಕೆ ಹಾಕಿದ ಕೋಳಿಗಳ ಸಂಖ್ಯೆ	264472	294683	264472	262772	264472	292336
4	ಮೇವು ಬೆಳೆಯಲು ಪ್ರೋತ್ಸಾಹಿಸಿದ ವಿಸ್ತೀರ್ಣ (ಹೆಕ್ಟೇರ್)	855	1690	897	2259	897	2834
5	ಪಶು ಆರೋಗ್ಯ ಬರಡು ರಾಸು ಚಿಕಿತ್ಸಾ ಶಿಬಿರಗಳ ಸಂಖ್ಯೆ	30	55	72	72	78	95
6	ಗಿರಿರಾಜ ಕೋಳಿ ಮರಿಗಳ ಸಾಕಾಣಿಕೆ ಮಾಡಿದ ಸಂಖ್ಯೆ	6000	6000	9666	9666	16750	18319

ಕೋಷ್ಟಕ 17.2 : ಕಳೆದ 2 ವರ್ಷದಲ್ಲಿ ವಿವಿಧ ಯೋಜನೆಯಲ್ಲಿ ಸಾಧಿಸಿದ ಆರ್ಥಿಕ & ಭೌತಿಕ ಪ್ರಗತಿಯ ವಿವರಗಳು

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮ & ಲೆಕ್ಕಶೀರ್ಷಿಕೆ	2016–17				2017–18			
		ಆರ್ಥಿಕ		ಭೌತಿಕ		ಆರ್ಥಿಕ		ಭೌತಿಕ	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	ಕಟ್ಟಡಗಳು 2403–00–101–0–28	35.00	35.00	15	15	50.00	47.50	12	11
2	ಔಷಧಿ ಹಾಗೂದ್ರವಸಾರಜನಕ ಸರಬರಾಜು(ಲಿ) 2403–00–101–0–27	58.00	58.00	29000	27338	85.00	84.99	29000	27985
3	ಗಿರಿರಾಜ ಹಕ್ಕಿಗಳ ಸಾಕಾಣಿಕೆ 2403–00–103–0–31	5.80	5.79	9666	9666	13.40	12.53	22333	18319
4	ವಿಸ್ತರಣಾ ಘಟಕಗಳ ಬಲಪಡಿಸುವಿಕೆ 2403–00–101–0–30	12.00	12.00	6	9	15.00	15.00	6	12
5	ಪ್ರಾ.ಪ.ಚಿ. ಕೇಂದ್ರಗನ್ನು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು. 2403–00–101–0–61	515.51	493.07	60000	75119	1659.19	1635.72	173	173
6	ಬರಡು ರಾಸು ಚಿಕಿತ್ಸಾ ಶಿಬಿರಗಳ ವ್ಯವಸ್ಥೆ 2403–00–101–0–64	7.20	7.20	72	72	7.78	7.76	78	78
7	ಆಸ್ಕಾಡ್ (ಕೇಂದ್ರ 75 % + ರಾಜ್ಯ 25 %) 2403–00–101–0–01	6.00	5.998	175	175	8.71	8.71	175	175
8	ಜೀವ ತ್ಯಾಜ್ಯ ವಸ್ತುಗಳ ವಿಲೇವಾರಿ 2403–00–101–0–63	35.00	35.00	15	15	50.00	47.50	12	11

ಕೋಷ್ಟಕ 17.3 : ಹುದ್ದೆಗಳ ವಿವರ

ಕ್ರ. ಸಂ.	ಹುದ್ದೆಯ ವಿವರ	ಮಂಜೂರಾದ ಹುದ್ದೆ	ಭರ್ತಿ ಹುದ್ದೆ	ಖಾಲಿ ಹುದ್ದೆ
1	ಉಪ ನಿರ್ದೇಶಕರು	**2**	0	2
2	ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ)	**8**	8	0
3	ಮುಖ್ಯ ಪಶುವೈದ್ಯಾಧಿಕಾರಿಗಳು	**13**	13	0
4	ಮುಖ್ಯ/ಹಿರಿಯ ಪಶುವೈದ್ಯಾಧಿಕಾರಿಗಳು	**13**	11	2
5	ಹಿರಿಯ ಪಶುವೈದ್ಯಾಧಿಕಾರಿಗಳು/ ಪಶುವೈದ್ಯಾಧಿಕಾರಿಗಳು	**81**	67	14
6	ಆಡಳಿತ ಸಹಾಯಕರು	**1**	1	0
7	ಅಧೀಕ್ಷಕರು	**2**	2	0
8	ಪ್ರಥಮ ದರ್ಜೆ ಸಹಾಯಕರು	**4**	4	0
9	ದ್ವಿತೀಯ ದರ್ಜೆ ಸಹಾಯಕರು	**7**	7	0
10	ಬೆರಳಚ್ಚುಗಾರರು	**1**	0	1
11	ವಾಹನಚಾಲಕರು	**8**	2	6
12	ಜಾನುವಾರು ಅಭಿವೃದ್ಧಿ ಅಧಿಕಾರಿ	**8**	0	8
13	ಜಾನುವಾರು ಅಧಿಕಾರಿ	**12**	12	0
14	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	**98**	75	23
15	ಪಶುವೈದ್ಯಕೀಯ ಪರೀಕ್ಷಕರು	**66**	45	21
16	ಪಶುವೈದ್ಯಕೀಯ ಸಹಾಯಕರು	**109**	34	75
17	ಲ್ಯಾಬ್ ಟೆಕ್ನಿಷಿಯನ್	**1**	0	1
1	ಡಿ ದರ್ಜೆ ನೌಕರರು	**273**	99	174
	ಜಿಲ್ಲೆಯ ಒಟ್ಟು	**707**	**380**	**327**

ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು :

1. **ಗಿರಿರಾಜ ಕೋಳಿ ಮರಿಗಳ ಪೂರೈಕೆ :**

ಈ ಯೋಜನೆ ಅನ್ವಯ, ಇಲಾಖಾ ಕೇಂದ್ರಗಳಲ್ಲಿ ಒಂದು ದಿನದ ಗಿರಿರಾಜ ಮರಿಗಳನ್ನು 5 ವಾರದವರೆಗೆ ಸಾಕಿ, ರೋಗ ನಿರೋಧಕ ಲಸಿಕಗಳನ್ನು ಹಾಕಿ, ಲಾಭ ನಷ್ಟವಿಲ್ಲದಂತೆ, ಇಲಾಖೆಯು ನಿಗದಿಪಡಿಸಿದ ದರದಲ್ಲಿ ಗ್ರಾಮೀಣ ಮಹಿಳೆಯರಿಗೆ ವಿತರಿಸಲಾಗುತ್ತಿದೆ.

2. **ವಿಶೇಷ ಘಟಕ ಯೋಜನೆ :**

ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಮಾತ್ರ ಈ ಸೌಲಭ್ಯ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಮಿಶ್ರತಳಿ ಹಸು ಘಟಕ, ಸುಧಾರಿತ ಎಮ್ಮೆ ಘಟಕಗಳನ್ನು ಶೇಕಡಾ 50 ರ ಸಹಾಯಧನದೊಂದಿಗೆ ವಿತರಿಸಲಾಗುತ್ತಿದೆ. ಶೇಕಡಾ 50 ಭಾಗವನ್ನು ವಿವಿಧ ಬ್ಯಾಂಕುಗಳಿಂದ ಸಾಲದ ರೂಪದಲ್ಲಿ ನೀಡಲಾಗುವುದು.

3. **ಗಿರಿಜನ ಉಪಯೋಜನೆ :**

ಈ ಯೋಜನೆಯಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ಮಾತ್ರ ಉಪಕಸಬಾಗಿ ಮಿಶ್ರತಳಿ ಹಸು ಘಟಕ, ಸುಧಾರಿತ ಎಮ್ಮೆ ಘಟಕಗಳನ್ನು ಶೇಕಡ 50 ರ ಸಹಾಯಧನದೊಂದಿಗೆ ವಿತರಿಸಲಾಗುತ್ತಿದೆ. ಉಳಿದ ಶೇಕಡ 50 ಭಾಗವನ್ನು ವಿವಿಧ ಬ್ಯಾಂಕುಗಳಿಂದ ಸಾಲದ ರೂಪದಲ್ಲಿ ನೀಡಲಾಗುವುದು.

4. **ವಿಶೇಷ ಘಟಕ ಯೋಜನೆ (ರಾಜ್ಯ ವಲಯ):**

ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಮಾತ್ರ ಈ ಸೌಲಭ್ಯ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಮಿಶ್ರತಳಿ ಹಸು ಘಟಕ, ಸುಧಾರಿತ ಎಮ್ಮೆ ಘಟಕಗಳನ್ನು ಶೇಕಡಾ 50 ರ ಸಹಾಯಧನದೊಂದಿಗೆ ವಿತರಿಸಲಾಗುತ್ತಿದೆ. ಶೇಕಡಾ 50 ಭಾಗವನ್ನು ವಿವಿಧ ಬ್ಯಾಂಕುಗಳಿಂದ ಸಾಲದ ರೂಪದಲ್ಲಿ ನೀಡಲಾಗುವುದು.

5. **ಪಶುಭಾಗ್ಯ ಯೋಜನೆ :**

2017–18 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಗೆ ಒಟ್ಟು 961 ಗುರಿ ನೀಡಲಾಗಿದ್ದು ಅದರಲ್ಲಿ 935 ಸಾಧನೆಯಾಗಿರುತ್ತದೆ. ಇದರಲ್ಲಿ 492 ಹೈನುಗಾರಿಕೆ ಘಟಕಗಳ ಗುರಿಗೆ 471 ಸಾಧನೆಯಾಗಿರುತ್ತದೆ. ಮತ್ತು 36 ಕುರಿ/ಮೇಕೆ ಘಟಕಗಳ(10+1) ಗುರಿಗೆ 35ಸಾಧನೆಯಾಗಿರುತ್ತದೆ ಹಾಗೂ 421 ಕುರಿ/ಮೇಕೆ ಘಟಕಗಳ (3) ಗುರಿಗೆ 418 ಸಾಧನೆಯಾಗಿರುತ್ತದೆ ಇರುತ್ತವೆ. 12 ಕೋಳಿ ಸಾಕಾಣಿಕೆ ಘಟಕಗಳ ಗುರಿಗೆ 11 ಸಾಧನೆಯಾಗಿರುತ್ತದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇಕಡ 50 ರಷ್ಟು ಸಹಾಯಧನ ಮತ್ತು ಇತರೆ ವರ್ಗದ ಫಲಾನುಭವಿಗಳಿಗೆ ಶೇಕಡ 25 ಸಹಾಯಧನ ಇರುತ್ತದೆ. ಸಹಾಯಧನ ಹೊರತುಪಡಿಸಿ ಉಳಿದ ಮೊತ್ತವನ್ನು ವಿವಿಧ ಬ್ಯಾಂಕುಗಳಿಂದ ಸಾಲದ ರೂಪದಲ್ಲಿ ನೀಡಲಾಗುವುದು.

6. **ಮೇವು ಕತ್ತರಿಸುವ ಯಂತ್ರಗಳು :**

ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ 2–ಹೆಚ್.ಪಿ ಸಾಮರ್ಥ್ಯದ ಒಟ್ಟು 7 ಫಲಾನುಭವಿಗಳಿಗೆ ಮೇವು ಕತ್ತರಿಸುವ ಯಂತ್ರಗಳನ್ನು ಶೇಕಡ 50ರ ಸಹಾಯಧನದೊಂದಿಗೆ ಒದಗಿಸಲಾಗುವುದು.

ಕೋಷ್ಟಕ 17.4 : 19 ನೇ ಜಾನುವಾರು ಗಣತಿಯ ಪ್ರಕಾರ ಜಿಲ್ಲೆಯಲ್ಲಿರುವ ಜಾನುವಾರು ಮತ್ತು ಕುಕ್ಕುಟಗಳ ಸಂಖ್ಯೆ

ಕ್ರ. ಸಂ.	ತಾಲ್ಲೂಕು	ದನಕರುಗಳು			ಎಮ್ಮೆಗಳು	ಕುರಿಗಳು	ಮೇಕೆಗಳು	ಹಂದಿಗಳು	ಇತರೆ	ನಾಯಿಗಳು	ಒಟ್ಟು ಜಾನುವಾರು	ಕುಕ್ಕುಟಗಳು
		ಮಿಶ್ರ ತಳಿ	ಸ್ಥಳೀಯ	ಒಟ್ಟು								
1	ಚನ್ನಗಿರಿ	1844	44015	62459	39398	25182	10052	475	79	2478	140123	50875
2	ದಾವಣಗೆರೆ	33380	24024	57404	34058	31313	14951	2399	5	5196	145326	405570
3	ಹರಪನಹಳ್ಳಿ	9462	57413	66875	36674	166191	32881	266	76	6353	309316	52129
4	ಹರಿಹರ	21022	9182	30204	20064	29103	9464	274	4	3261	92374	220084
5	ಹೊನ್ನಾಳಿ	36319	39665	75984	27390	25348	18111	293	0	2224	149350	54747
6	ಜಗಳೂರು	5415	32840	38255	18077	65928	17646	112	4	3945	143967	108999
ಒಟ್ಟು		**124042**	**207139**	**331181**	**175661**	**343065**	**103105**	**3819**	**168**	**23457**	**980456**	**892404**

18. ಮೀನುಗಾರಿಕೆ

ದಾವಣಗೆರೆ ಜಿಲ್ಲೆಯಲ್ಲಿನ ಆರು ತಾಲ್ಲೂಕುಗಳಲ್ಲಿ ಇಲಾಖೆ ವ್ಯಾಪ್ತಿಯ 120 ಕೆರೆಗಳು (7331 ಹೆಕ್ಟೇರ್). ಗ್ರಾಮ ಪಂಚಾಯ್ತಿ ವ್ಯಾಪ್ತಿಯ 211 ಕೆರೆಗಳು (2944 ಹೆಕ್ಟೇರ್), 2 ಜಲಾಶಯಗಳು (3612 ಹೆಕ್ಟೇರ್) ಹಾಗೂ ಸುಮಾರು 148 ಖಾಸಗಿ ಕೊಳಗಳು (43.00 ಹೆಕ್ಟೇರ್) ಹೀಗೆ ಒಟ್ಟು 13921 ಹೆಕ್ಟರ್ ಜಲ ವಿಸ್ತೀರ್ಣ ಮತ್ತು 03 ಹಳ್ಳಗಳು 23 ಕಿ.ಮೀ ಹಾಗು ಹೊನ್ನಾಳಿ, ಹರಿಹರ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಒಟ್ಟು 115 ಕಿ.ಮೀ ತುಂಗಭದ್ರಾನದಿ ಹರಿಯುತ್ತಿದ್ದು, ಈ ಎಲ್ಲಾ ಜಲಪ್ರದೇಶವು ಮೀನುಗಾರಿಕೆ ಅಭಿವೃದ್ಧಿಗೆ ಲಭ್ಯವಾಗಿರುತ್ತದೆ. 2017–18ನೇ ಸಾಲಿಗೆ ಕೆರೆ/ಜಲಾಶಯ/ನದಿಭಾಗಗಳ ಗುತ್ತಿಗೆ ನವೀಕರಣ ಮೊತ್ತವನ್ನು ಪಾವತಿಸಲು ಸರ್ಕಾರವು ವಿನಾಯಿತಿ ಆದೇಶ ನೀಡಿರುತ್ತದೆ. ಬರಗಾಲದ ಕಾರಣ ಹಿಂದಿನ ಸಾಲುಗಳಿಗಿಂತ ಮೀನು ಉತ್ಪಾದನೆ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ಸದರಿ ಸಾಲಿನಲ್ಲಿ ಒಟ್ಟು 131.05ಲಕ್ಷ ಮೀನುಮತಿ ಬಿತ್ತನೆ ಮಾಡಲಾಗಿದೆ.

ಜಿಲ್ಲೆಯಲ್ಲಿ ಅಂದಾಜು ಒಟ್ಟು 3,500 ಕುಟುಂಬಗಳು ಮೀನುಗಾರಿಕೆ ವೃತ್ತಿ ಮಾಡುತ್ತಿದ್ದು ಕುಟುಂಬದ ವಾರ್ಷಿಕ ಅಂದಾಜು ಸರಾಸರಿ ಆದಾಯ ರೂ.0.50 ಲಕ್ಷ ಇರುತ್ತದೆ.

ಜಿಲ್ಲೆಯ ಕೊಂಡಜ್ಜಿಯಲ್ಲಿ ಮೀನುಮರಿ ಪಾಲನಾ ಕೇಂದ್ರ, ಹರಪನಹಳ್ಳಿ, ಜಗಳೂರು ಹಾಗೂ ಹೊನ್ನಾಳಿಯಲ್ಲಿ ಮೀನುಮರಿ ನರ್ಸರಿ ಕೊಳಗಳಿದ್ದು, ಮೀನುಮರಿ ಪಾಲನೆ ಮಾಡಿ ರೈತರಿಗೆ ವಿತರಿಸಲಾಗುತ್ತಿದೆ. ಇದಲ್ಲದೆ ಹರಪನಹಳ್ಳಿ ತಾಲ್ಲೂಕಿನ ತೊಗರಿಕಟ್ಟೆಯಲ್ಲಿ ಖಾಸಗಿ ಮೀನುಮರಿ ಪಾಲನಾ ಕೇಂದ್ರಗಳು ಇವೆ. ಜಿಲ್ಲೆಯಲ್ಲಿ ಒಟ್ಟು 25 ಮೀನುಗಾರಿಕೆ ಸಹಕಾರ ಸಂಘಗಳಿದ್ದು ಅದರಲ್ಲಿ 3 ಸಂಘಗಳು ಸ್ಥಗಿತಗೊಂಡಿದ್ದು, 22 ಸಂಘಗಳ ಕಾರ್ಯಚಟುವಟಿಕೆ ಉತ್ತಮವಾಗಿದೆ.

ಜಿಲ್ಲೆಯಲ್ಲಿ ನೀರಾವರಿ ಜಮೀನು ಹಾಗೂ ಜೌಗು ಮತ್ತು ಸೌಳು ಭೂಮಿ ಸಾಕಷ್ಟು ಇದ್ದು, ಇಂತಹ ಜಮೀನಿನಲ್ಲಿ ರೈತರು ಮೀನುಕೃಷಿ ಕೊಳ ನಿರ್ಮಾಣ ಮಾಡಿ ಮೀನು ಸಾಗಾಣಿಕೆ ಮಾಡಿದಲ್ಲಿ ಉತ್ತಮ ಆದಾಯ ಪಡೆಯಬಹುದಾಗಿದೆ. ಇದಕ್ಕೆ ಇಲಾಖೆಯಿಂದ ಸಹಾಯಧನ ದೊರೆಯುತ್ತಿದೆ.

ದಾವಣಗೆರೆ ನಗರದಲ್ಲಿ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಇವರ ಅನುಧಾನದಲ್ಲಿ ಡಾಂಗೆ ಪಾರ್ಕ್ ಹತ್ತಿರ ಸುಸಜ್ಜಿತ ಮಾರುಕಟ್ಟೆ ನಿರ್ಮಾಣಗೊಂಡಿದೆ. ಅಲ್ಲದೆ ಹೊಂಡದ ರಸ್ತೆ ರೈಲ್ವೆ ಗೇಟ್ ಹತ್ತಿರ ಮತ್ತೊಂದು ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು ಕಾಮಗಾರಿ ಪ್ರಾರಂಭವಾಗಬೇಕಾಗಿದೆ.

ಕೋಷ್ಟಕ 18.1 : ಇಲಾಖೆ ಕೆರೆಗಳ ವಿಲೇವಾರಿ ಮತ್ತು ಮೀನುಮರಿ ಬಿತ್ತನೆ ವಿವರ

ಕ್ರ. ಸಂ.	ತಾಲ್ಲೂಕು	ಇಲಾಖಾ ಕೆರೆಗಳು (ಸಂಖ್ಯೆ)					ಇಲಾಖೆ ಕೆರೆಗಳಿಗೆ ಮೀನುಮರಿ ಬಿತ್ತನೆ (ಲಕ್ಷಗಳಲ್ಲಿ)	
		ಗುರಿ	ಸಾಧನೆ				ಗುರಿ	ಸಾಧನೆ
			ಹಳ್ಳ	ನದಿ	ಜಲಾಶಯ	ಇತರೆ		
1	ದಾವಣಗೆರೆ	24	1	0	0	23	34.00	19.59
2	ಹರಿಹರ	04	1	2	1	04	13.00	11.65
3	ಹರಪನಹಳ್ಳಿ	25	0	1	0	27	37.50	28.19
4	ಹೊನ್ನಾಳಿ	16	0	1	0	15	30.00	6.69
5	ಚನ್ನಗಿರಿ	33	0	0	0	33	40.00	16.60
6	ಜಗಳೂರು	18	0	0	0	08	21.50	11.61
	ಒಟ್ಟು	120	2	4	1	110	176.00	94.33

ಕೋಷ್ಟಕ 18.2 : ಗ್ರಾಮ ಪಂಚಾಯ್ತಿ ಕೆರೆಗಳು ಮತ್ತು ಮೀನುಮರಿ ಬಿತ್ತನೆ ವಿವರ

ಕ್ರ.ಸಂ	ತಾಲ್ಲೂಕು	ಗ್ರಾಮ ಪಂಚಾಯ್ತಿ ಕೆರೆಗಳು (ಸಂಖ್ಯೆ)		ಬಿತ್ತನೆ ಮಾಡಿದ ಮರಿಗಳು (ಲಕ್ಷಗಳಲ್ಲಿ)	
		ಗುರಿ	ಸಾಧನೆ	ಗುರಿ	ಸಾಧನೆ
1	ದಾವಣಗೆರೆ	17	09	15.00	2.94
2	ಹರಿಹರ	02	02	1.00	1.75
3	ಹರಪನಹಳ್ಳಿ	21	18	18.00	16.20
4	ಹೊನ್ನಾಳಿ	23	09	16.00	5.58
5	ಚನ್ನಗಿರಿ	21	06	15.00	5.50
6	ಜಗಳೂರು	16	0	7.00	0
	ಒಟ್ಟು	100	44	72.00	31.97

ಕೋಷ್ಟಕ 18.3 : ಖಾಸಗಿ ಕೊಳಗಳ ವಿವರ ಮತ್ತು ಮೀನುಮರಿ ಬಿತ್ತನೆ.

ಕ್ರ.ಸಂ	ತಾಲ್ಲೂಕು	ಖಾಸಗಿ ಕೊಳಗಳು (ಹೆಕ್ಟೇರ್‌ಗಳಲ್ಲಿ)		ಬಿತ್ತನೆ ಮಾಡಿದ ಮರಿಗಳು (ಲಕ್ಷಗಳಲ್ಲಿ)	
		ಗುರಿ	ಸಾಧನೆ	ಗುರಿ	ಸಾಧನೆ
1	ದಾವಣಗೆರೆ	16	7.50	4.50	1.65
2	ಹರಿಹರ	13	7.00	3.00	135
3	ಹರಪನಹಳ್ಳಿ	10	4.0295	4.50	1.00
4	ಹೊನ್ನಾಳಿ	07	1.20	1.75	0.35
5	ಚನ್ನಗಿರಿ	07	0.60	1.75	0.40
6	ಜಗಳೂರು	05	0	0.50	0
	ಒಟ್ಟು	58	20.32	16.00	4.75

ಕೋಷ್ಟಕ 18.4 : ಮೀನುಮರಿ ಪಾಲನೆ ಮತ್ತು ಬಿತ್ತನೆ ಮೀನುಮರಿ ವಿತರಣೆ (ಮೀನುಮರಿ ಲಕ್ಷದಲ್ಲಿ)

ಕ್ರ. ಸಂ	ತಾಲ್ಲೂಕು	ಮೀನುಮರಿ ಪಾಲನೆ (ಫ್ರೈ)	ವಿತರಣೆ (ಬಿತ್ತನೆ ಮೀನುಮರಿ)	
			ಗುರಿ	ಸಾಧನೆ
1	ದಾವಣಗೆರೆ	–	–	–
2	ಹರಿಹರಕೊಂಡಜ್ಜಿ ಮೀನುಮರಿ ಪಾಲನಾ ಕೇಂದ್ರ	20.70	20.00	2.72
3	ಹರಪನಹಳ್ಳಿತಾಲ್ಲೂಕು ನರ್ಸರಿ	7.20	2.00	1.62
4	ಹೊನ್ನಾಳಿತಾಲ್ಲೂಕು ನರ್ಸರಿ	5.40	4.00	2.16
5	ಜಗಳೂರು	3.60	1.50	1.08
	ಒಟ್ಟು	30.90	27.50	7.58

1. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ :

ಸದರಿ ಯೋಜನೆಯಲ್ಲಿ 50.00 ಲಕ್ಷ ಫ್ರೈ ಮೀನುಮರಿ ಪಾಲನೆ ಗುರಿ ನಿಗಧಿಪಡಿಸಿದ್ದು, ಕೊಂಡಜ್ಜಿ ಮೀನುಮರಿ ಪಾಲನಾ ಕೇಂದ್ರ, ಜಗಳೂರು ಮತ್ತು ಹೊನ್ನಾಳಿ ಮತ್ತು ಹರಪನಹಳ್ಳಿ ತಾಲ್ಲೂಕು ನರ್ಸರಿಗಳಲ್ಲಿ 16.08 ಲಕ್ಷ ವಿವಿಧ ಜಾತಿಯ ಫ್ರೈ ಮೀನುಮರಿ ಪಾಲನೆ ಮಾಡಿ ಒಟ್ಟು 7.58 ಲಕ್ಷ ಬಿತ್ತನೆ ಮೀನುಮರಿಗಳನ್ನು ಮೀನುಕೃಷಿಕರಿಗೆ ಸರಬರಾಜು ಮಾಡಲಾಗಿದೆ. ಇದಕ್ಕೆ ಬೇಕಾದ ಸಗಣಿ ಗೊಬ್ಬರ, ಆಹಾರ, ಮೀನುಮರಿ ಖರೀದಿ,ಬಲೆ ಮತ್ತು ಪೂರಕ ಸಾಮಗ್ರಿಗಳ ಖರೀದಿ, ಪಾಲನಾ ಕೇಂದ್ರ/ನರ್ಸರಿಗಳ ನಿರ್ವಹಣೆ, ವಿದ್ಯುತ್ ಹಾಗು ದೂರವಾಣಿ ಬಿಲ್ ಪಾವತಿ, ಹುಲ್ಲುಗೆಂಡೆ ಮೀನುಮರಿ ಖರೀದಿಗೆ ಸಹಾಯಧನ, ಹೊರಗುತ್ತಿಗೆ ವಾಹನ ನಿರ್ವಹಣೆ, ಹೊರಗುತ್ತಿಗೆ ಸಿಬ್ಬಂದಿ ವೇತನ ಪಾವತಿ ಇತ್ಯಾದಿ ವೆಚ್ಚ ಭರಿಸಿದೆ. ರೂ.4.50ಲಕ್ಷ ಮೊತ್ತದಲ್ಲಿ ಹರಪನಹಳ್ಳಿ ತಾಲ್ಲೂಕು ನರ್ಸರಿ ಕೇಂದ್ರದಲ್ಲಿ ಪಾಲನೆ ಮಾಡಲಾದ ಮೀನುಮರಿಗಳ ಪ್ಯಾಕಿಂಗ್

ಹಾಗು ಸಾಮಗ್ರಿ ದಾಸ್ತಾನಿಗೆ ಶೆಡ್ ನಿರ್ಮಾನ ಮತ್ತು ಇತರೆ ಕಾಮಗಾರಿ ಇರುವ 05 ನರ್ಸರಿ ಕೊಳಗಳ ದುರಸ್ತಿ ಕಾಮಗಾರಿ ಕೈಗೊಳ್ಳಲಾಗಿದೆ. ಉಳಿದ ಅನುದಾನ ರೂ.2.50ಲಕ್ಷಗಳಲ್ಲಿಕಾಟ್ಲಾ, ರೂ.0.50ಲಕ್ಷ ರೋಹು ಮತ್ತು 0.35ಲಕ್ಷ ಸಾಮಾನ್ಯ ಗೆಂಡೆ ಹೀಗೆ ಒಟ್ಟು 2.35ಲಕ್ಷ ಬಿತ್ತನೆ ಮೀನುಮರಿಗಳನ್ನು ಖರೀದಿಸಿ ಚನ್ನಗಿರಿ ತಾಲ್ಲೂಕು ಶಾಂತಿಸಾಗರ ಜಲಾಶಯಕ್ಕೆ ದಾಸ್ತಾನು ಮಾಡಿದ್ದು, ಒಟ್ಟು ರೂ.27.89ಲಕ್ಷ ವೆಚ್ಚ ಭರಿಸಲಾಗಿದೆ.

ಸದರಿ ಯೋಜನೆಯ ವಿಶೇಷ ಘಟಕ ಉಪಯೋಜನೆ/ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪ್ರತಿ ಹೆಕ್ಟೇರ್ ಮೀನು ಸಾಕಾಣಿಕೆ ಕೊಳ ನಿರ್ಮಾಣಕ್ಕೆ ಘಟಕ ವೆಚ್ಚ ರೂ.5.00ಲಕ್ಷಗಳ ಶೇ80ರಷ್ಟು ಗರಿಷ್ಟ ರೂ.4.00ಲಕ್ಷ ಸಹಾಯಧನ ನೀಡಲಾಗುವುದು. ಸದರಿ ಯೋಜನೆಯಡಿ ಸಹಾಯಧನ ಪಡೆಯಲು ಫಲಾನುಭವಿಯು ಕೊಳದ ವಿಸ್ತೀರ್ಣ 2000 ಚ.ಮೀ.ಗಿಂತ ಕಡಿಮೆ ಇಲ್ಲದ ಹಾಗು ಗರಿಷ್ಟ 5.00 ಹೆಕ್ಟೇರ್ ಮಿತಿಗೊಳಪಟ್ಟ ಮೀನು ಸಾಕಾಣಿಕೆ ಕೊಳ ನಿರ್ಮಿಸಬೇಕಾಗಿರುತ್ತದೆ.

ಪ್ರಸ್ತಾತ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ರೂ.2.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, 0.5 ಹೆಕ್ಟೇರ್ ಮೀನು ಸಾಕಾಣಿಕೆ ಕೊಳ ನಿರ್ಮಾಣ ಮಾಡಿದ ಪರಿಶಿಷ್ಟ ಜಾತಿಯ 02 ಫಲಾನುಭವಿಗಳಿಗೆ (ಚನ್ನಗಿರಿ ಮತ್ತು ಹರಪನಹಳ್ಳಿ ತಾಲ್ಲೂಕಿನ) ರೂ.2.00ಲಕ್ಷ ಸಹಾಯಧನ ನೀಡಲಾಗಿದೆ. ಎಲ್ಲಾ ಸೇರಿ ಒಟ್ಟು ರೂ.29.89ಲಕ್ಷ ವೆಚ್ಚ ಭರಿಸಲಾಗಿದೆ.

2. **ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ:**

ಸದರಿ ಯೋಜನೆಯಡಿ ಮೀನು ಹಿಡಿಯುವ ತಾಣಗಳಿಂದ ಮೀನುಗಳನ್ನು ತಾಜಾ ಸ್ಥಿತಿಯಲ್ಲಿ ಮಾರಾಟ ಕೇಂದ್ರಗಳಿಗೆ ಮತ್ತು ಗ್ರಾಹಕರಿಗೆ ತ್ವರಿತವಾಗಿ ತಲುಪಿಸಲು ದ್ವಿಚಕ್ರ ವಾಹನ ಮತ್ತು ಕ್ರೇಟ್ಸ್ ಖರೀದಿಸಲು ಘಟಕ ವೆಚ್ಚ ರೂ.40,000/– ಗಳಿಗೆ ಶೇ.25ರಷ್ಟು ಅಥವಾ ಗರಿಷ್ಟ ರೂ.10,000/– ಸಹಾಯಧನ ನೀಡಲಾಗುವುದು. ಪ್ರಸ್ತುತ ಸಾಲಿನಲ್ಲಿ ಒಟ್ಟು 20 ಫಲಾನುಭವಿಗಳಿಗೆ ಸಹಾಯಧನ ವಿತರಿಸಿ ರೂ.1.99ಲಕ್ಷ ವೆಚ್ಚ ಭರಿಸಲಾಗಿದೆ.

3. ವಸ್ತು ಪ್ರದರ್ಶನ ಮತ್ತು ತರಬೇತಿ:

ಮೈಸೂರು ದಸರಾ ಉತ್ಸವದ ಅಂಗವಾಗಿ ದೇಣಿಗೆ ರೂ.1.00ಲಕ್ಷ, ತೋಟಗಾರಿಕೆ ಇಲಾಖೆ ವತಿಯಿಂದ ಆಯೋಜಿಸಲಾದ ಫಲಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಿ, ಮೀನುಗಾರಿಕೆ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ. ಕರ್ನಾಟಕ ಮತ್ಸ್ಯಮೇಳ–2017 ಬೆಂಗಳೂರು ಕಾರ್ಯಕ್ರಮದಲ್ಲಿ ಭಾಗವಹಿಸಲು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ 49 ಮೀನುಕೃಷಿಕರನ್ನು ಕರೆದುಕೊಂದು ಹೋಗಿ ಬರಲಾಗಿದೆ. ಕಛೇರಿಗಳಲ್ಲಿನ ಅಕ್ಷೇರಿಯಂಗಳ ನಿರ್ವಹಣೆ, ಜಗಳೂರು, ಹರಪನಹಳ್ಳಿ, ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕುಗಳಲ್ಲಿ ಮೀನುಗಾರಿಕೆ ಪ್ರದರ್ಶನಕ್ಕೆ ಬೇಕಾದ ಮೀನಿನ ಭಾವಚಿತ್ರ ಹಾಗೂ ಇಲಾಖೆಯ ಯೋಜನೆಗಳ ಮಾಹಿತಿಯನ್ನೊಳಗೊಂಡ ಡಿಸ್‌ಪ್ಲೇ ಬೋರ್ಡ್/ಚಾರ್ಟ್ ಖರೀದಿ, ತಾಲ್ಲೂಕು ಪಂಚಾಯತ್ ಸದಸ್ಯರ ತರಬೇತಿ ಮುಂತಾದವುಗಳಿಗೆ ಸೇರಿ ಒಟ್ಟು ರೂ.2.99ಲಕ್ಷ ವೆಚ್ಚ ಭರಿಸಲಾಗಿದೆ. ಶೇ.100 ರಷ್ಟು ಪ್ರಗತಿ ಸಾಧಿಸಿದೆ.

4. ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ :

1) ಹರಿಹರ ತಾಲ್ಲೂಕು – ಕೊಂಡಜ್ಜಿ ಮೀನುಮತಿ ಪಾಲನಾ ಕೇಂದ್ರ :

ಅ) ಪಾಲನಾ ಕೇಂದ್ರದಲ್ಲಿ ಹೊಸದಾಗಿ ಕೊರೆಯಿಸಿದ ಬೋರ್‌ವೆಲ್‌ನಿಂದ ಪಾಲನಾ ಕೊಳಗಳಿಗೆ ನೀರು ಸರಬರಾಜು ಮಾಡಲು ಪೈಪ್ ಲೈನ್ ಮತ್ತು ವಿದ್ಯುತ್ ಸಂಪರ್ಕ ಅಳವಡಿಸುವುದು ಹಾಗೂ ಇತರೆ ಕಾಮಗಾರಿ(ಮುಂದುವರೆದ ಕಾಮಗಾರಿ) ರೂ.1.00ಲಕ್ಷ

ಆ) ಸಿಮೆಂಟ್ ನರ್ಸರಿ ಕೊಳಗಳ ದುರಸ್ತಿ – ರೂ.4.00ಲಕ್ಷ

ಇ) ಬಾಕಿ ಉಳಿದ ಡ್ರೈನೇಜ್ ನಿರ್ಮಾಣದ ಕಾಮಗಾರಿ – ರೂ.4.00ಲಕ್ಷ

ಈ) ಬಾಕಿ ಉಳಿದ ಕಾಂಪೌಂಡ್ ಗೋಡೆ ನಿರ್ಮಾಣದ ಕಾಮಗಾರಿ – ರೂ.2.00ಲಕ್ಷ

2) ಹರಪನಹಳ್ಳಿ ತಾಲ್ಲೂಕು ಕಛೇರಿ ಹಳೇ ಕಟ್ಟಡದ ಮೇಲ್ಛಾವಣಿ ದುರಸ್ತಿ ಮತ್ತು ಇತರೆ ಕಾಮಗಾರಿ – ರೂ.2.00ಲಕ್ಷ

3) ಹೊನ್ನಾಳಿ ತಾಲ್ಲೂಕು ನರ್ಸರಿ ಕೇಂದ್ರದಲ್ಲಿ ಪಾಲನೆ ಮಾಡಲಾದ ಮೀನುಮರಿ ಪ್ಯಾಕಿಂಗ್‌ಗೆ ಹಾಗೂ ಸಾಮಗ್ರಿ ದಾಸ್ತಾನಿಗೆ ಪ್ಯಾಕಿಂಗ್ ಶೆಡ್ ನಿರ್ಮಾಣ ಮತ್ತು ಇತರೆ ಕಾಮಗಾರಿ – ರೂ.4.00 ಲಕ್ಷ

4) ಅ) ಜಗಳೂರು ತಾಲ್ಲೂಕು ನರ್ಸರಿ ಕೇಂದ್ರದಲ್ಲಿ ಮೀನುಮರಿ ಸರಬರಾಜಿಗೆ ಕಂಡೀಷನ್ ಕೊಳ ನಿರ್ಮಾಣ ಮತ್ತು ಇತರೆ ಕಾಮಗಾರಿ – ರೂ.2.50ಲಕ್ಷ

ಆ) ನರ್ಸರಿ ಕೇಂದ್ರಕ್ಕೆ ಗೇಟ್ ನಿರ್ಮಾಣ ಮತ್ತು ಇತರೆ ಕಾಮಗಾರಿ – ರೂ.0.50ಲಕ್ಷ

ಮೇಲಿನ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿಯಿಂದ ಅನುಷ್ಠಾನ ಸಂಸ್ಥೆಗಳಾದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ&ಹರಪನಹಳ್ಳಿ ಇವರಿಗೆ ವಹಿಸಿ, ಸದರಿಯವರಿಗೆ ಹಣ ಬಿಡುಗಡೆಗೊಳಿಸಲಾಗಿದ್ದು, ಒಟ್ಟು ರೂ.20.00ಲಕ್ಷ ವೆಚ್ಚ ಭರಿಸಲಾಗಿದೆ.

: ತಾಲ್ಲೂಕು ಪಂಚಾಯಿತಿ ಯೋಜನೆಗಳು :

5. ವಿಶೇಷ ಘಟಕ ಯೋಜನೆ:

ಈ ಯೋಜನೆಯಲ್ಲಿ ಕೆರೆ/ನದಿ/ಜಲಾಶಯಗಳಿಗೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿನಿಂದ ಅನುಮೋದನೆಗೊಂಡ ಮೀನುಗಾರಿಕೆ ವೃತ್ತಿನಿರತ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಗರಿಷ್ಟ ರೂ.5,000/–ಗಳ ಮೌಲ್ಯದ ಮೀನುಗಾರಿಕೆ ಸಲಕರಣೆಗಳಾದ ನೈಲಾನ್ ಮಾನೋಫಿಲಾಮೆಂಟ್ ಬಲೆ, ಹೆಡ್‌ರೋಪ್, ಪುಟ್‌ರೋಪ್‌ಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರಿಂದ ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ 20 ಫಲಾನುಭವಿಗಳಿಗೆ ವಿತರಿಸಲಾಗಿದೆ. ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ.

6. ಗಿರಿಜನ ಉಪಯೋಜನೆ:

ಈ ಯೋಜನೆಯಲ್ಲಿ ಕೆರೆ/ನದಿ/ಜಲಾಶಯಗಳಿಗೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿನಿಂದ ಅನುಮೋದನೆಗೊಂಡ ಮೀನುಗಾರಿಕೆ ವೃತ್ತಿನಿರತ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಗರಿಷ್ಟ ರೂ.5,000/–ಗಳ ಮೌಲ್ಯದ ಮೀನುಗಾರಿಕೆ ಸಲಕರಣೆಗಳಾದ ನೈಲಾನ್ ಮಾನೋಫಿಲಾಮೆಂಟ್ ಬಲೆ, ಹೆಡ್‌ರೋಪ್, ಪುಟ್‌ರೋಪ್‌ಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರಿಂದ ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ 08 ಫಲಾನುಭವಿಗಳಿಗೆ ವಿತರಿಸಲಾಗಿದೆ. ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ.

: ರಾಜ್ಯವಲಯ ಕಾರ್ಯಕ್ರಮಗಳು :

7. ಮೀನುಮರಿ ಖರೀದಿಗೆ ಸಹಾಯ:

ಕೆರೆಗಳನ್ನು ಗುತ್ತಿಗೆ/ಹರಾಜಿನಲ್ಲಿ ಪಡೆದ 16 ಮೀನುಕೃಷಿಕರು ಸರ್ಕಾರದ ಮೀನುಮರಿ ಕೇಂದ್ರ/ಇಲಾಖೆಯಿಂದ ನೊಂದಣೆಯಾಗಿರುವ ಖಾಸಗಿ ಮೀನುಮರಿ ಕೇಂದ್ರದಿಂದ ಖರೀದಿಸಿದ ಮೀನುಮರಿಗಳ ಮೊತ್ತದ ಶೇ. 50% ಅಥವಾ ಫಲಾನುಭವಿಗೆ ಗರಿಷ್ಠ ರೂ. 5000/– ಗಳನ್ನು ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ. 20,000.00 ಸಹಾಯಧನ ನೀಡಿದ್ದು, ಒಟ್ಟು ರೂ.1.47ಲಕ್ಷ ಸಹಾಯಧನ ನೀಡಲಾಗಿದೆ.

8. ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ:

ಕೆರೆ/ನದಿ/ಜಲಾಶಯದಲ್ಲಿ ಮೀನುಗಾರಿಕೆ ಮಾಡುತ್ತಿರುವ ಮೀನುಗಾರ ಫಲಾನುಭವಿಗಳಿಗೆ ಬೇಕಾದ ಮೀನುಗಾರಿಕೆ ಸಲಕರಣೆ ನೈಲಾನ್ ಮಾನೋಫಿಲಾಮೆಂಟ್ ಬಲೆ, ಹೆಡ್‌ರೋಪ್, ಪುಟ್‌ರೋಪ್‌ಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರಿಂದ ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ ಮೀನುಗಾರಿಕೆ ಉಪನಿರ್ದೇಶಕರು, ಶಿವಮೊಗ್ಗ ಇವರಿಂದ ಅನುಮೋದನೆಗೊಂಡ ಫಲಾನುಭವಿಗಳಿಗೆ ವಿತರಿಸಲಾಗಿದೆ. ಶೇ.100ರಷ್ಟು ಪ್ರಗತಿ ಸಾಧಿಸಿದೆ.

9. ಸಂಶೋಧನೆ ವಿಸ್ತರಣೆ ಮತ್ತು ತರಬೇತಿ :

ಜುಲೈ–10ರಂದು ಜಿಲ್ಲೆಯ ಮೀನುಕೃಷಿಕರಿಗೆ ಆಹ್ವಾನಿಸಿ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆಯಲ್ಲಿ "ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ"ಯನ್ನು ಆಚರಿಸಲಾಗಿದ್ದು, ಒಟ್ಟು 133 ಜನ ಮೀನುಗಾರರು, ಮೀನುಕೃಷಿಕರು ಮತ್ತು ಮೀನುಮಾರಟಗಾರರಿಗೆ ತರಬೇತಿ ನೀಡಲಾಗಿದೆ. ದಿನಾಂಕ:13–07–2017ರಂದು ಹರಿಹರ ತಾಲ್ಲೂಕು ಕೊಂಡಜ್ಜಿ ಮೀನುಮರಿ ಪಾಲನಾ ಕೇಂದ್ರದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದ್ದು, 83 ಜನ ಮೀನುಗಾರರು, ಮೀನುಕೃಷಿಕರು ಮತ್ತು ಮೀನುಮಾರಾಟಗಾರರಿಗೆ ತರಬೇತಿ ನೀಡಲಾಗಿದೆ. ರೂ.0.40ಲಕ್ಷ ವೆಚ್ಚ ಭರಿಸಲಾಗಿದೆ.

10. ಫೈಬರ್ ಗ್ಲಾಸ್ ಹರಿಗೋಲು ಖರೀದಿಗೆ ಸಹಾಯ:

ಕೆರೆ/ನದಿ/ಜಲಾಶಯದಲ್ಲಿ ಮೀನುಗಾರಿಕೆ ಉಪನಿರ್ದೇಶಕರು, ಶಿವಮೊಗ್ಗ ಇವರಿಂದ ಅನುಮೋದನೆಗೊಂಡ ಮೀನುಗಾರಿಕೆ ವೃತ್ತಿ ಮಾಡುತ್ತಿರುವ 34 ಮೀನುಗಾರ ಫಲಾನುಭವಿಗಳಿಗೆ ಬೇಕಾದ ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲುಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರಿಂದ ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ. ಶೇ.100ರ ಪ್ರಗತಿ ಸಾಧಿಸಿದೆ.

11. ವಿಶೇಷ ಅನುದಾನ ವಿಶೇಷ ಘಟಕ ಯೋಜನೆ & ಗಿರಿಜನ ಉಪಯೋಜನೆ :

ಕೆರೆ/ನದಿ/ಜಲಾಶಯದಲ್ಲಿ ಮೀನುಗಾರಿಕೆ ಉಪನಿರ್ದೇಶಕರು, ಶಿವಮೊಗ್ಗ ಇವರಿಂದ ಅನುಮೋದನೆಗೊಂಡ ಮೀನುಗಾರಿಕೆ ವೃತ್ತಿ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆ (ನೈಲಾನ್

ಮಾನೋಫಿಲಾಮೆಂಟ್ ಬಲೆ, ಹೆಡ್‌ರೋಪ್, ಪುಟ್‌ರೋಪ್‌ಗಳನ್ನು ಮತ್ತು ಫೈಬರ್ ಗ್ಲಾಸ್ ಹರಿಗೋಲುಗಳನ್ನು)ಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರಿಂದ ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ 24 ಫಲಾನುಭವಿಗಳಿಗೆ ವಿತರಿಸಿ ರೂ.4.80ಲಕ್ಷ ವೆಚ್ಚ ಭರಿಸಿ ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ.

12. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :

ಅ) ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ :

ಮೀನುಗಾರಿಕೆ ಉಪನಿರ್ದೇಶಕರು, ಶಿವಮೊಗ್ಗ ಇವರಿಂದ ಅನುಮೋದನೆಗೊಂಡ 37 ವೃತ್ತಿಪರ ಮೀನುಗಾರರಿಗೆ ಮೀನುಗಾರಿಗೆ ಸಲಕರಣೆ ಕಿಟ್ (ನೈಲಾನ್ ಮಾನೋಫಿಲಾಮೆಂಟ್ ಬಲೆ, ಹೆಡ್‌ರೋಪ್, ಪುಟ್‌ರೋಪ್‌ಗಳನ್ನು ಮತ್ತು ಫೈಬರ್ ಗ್ಲಾಸ್ ಹರಿಗೋಲುಗಳನ್ನು)ಗಳನ್ನು ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ ವಿತರಿಸಲಾಗಿದ್ದು, ಒಟ್ಟು ರೂ.3.70ಲಕ್ಷ ವೆಚ್ಚ ಭರಿಸಿ, ಶೇ.100ರಷ್ಟು ಪ್ರಗತಿ ಸಾಧಿಸಿದೆ.

ಆ) ಫೈಬರ್ ಗ್ಲಾಸ್ ಹರಿಗೋಲು ವಿತರಣೆ :

ಮೀನುಗಾರಿಕೆ ಉಪನಿರ್ದೇಶಕರು, ಶಿವಮೊಗ್ಗ ಇವರಿಂದ ಅನುಮೋದನೆಗೊಂಡ 63 ವೃತ್ತಿಪರ ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲುಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರಿಂದ ಅನುಮೋದನೆಗೊಂಡ ಸರಬರಾಜುದಾರರಿಂದ ಖರೀದಿಸಿ ವಿತರಿಸಲಾಗಿದ್ದು, ಒಟ್ಟು ರೂ.3.627 ಲಕ್ಷ ವೆಚ್ಚ ಭರಿಸಿ, ಶೇ.100ರಷ್ಟು ಪ್ರಗತಿ ಸಾಧಿಸಿದೆ.

19. ಸಹಕಾರ

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಹಾಯಧನ (ಎನ್‌ಸಿಡಿಸಿ) :

ಈ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ 6 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆಒಟ್ಟು ರೂ.3.50ಲಕ್ಷ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

2. ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ(ಎನ್.ಸಿ.ಡಿ.ಸಿ) :

ಈ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ 6 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಒಟ್ಟು ರೂ.2.90ಲಕ್ಷ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

3. ವಿವಿಧ ವರ್ಗಗಳ ಸಹಕಾರ ಸಂಘಗಳಿಗೆ ಷೇರು ಬಂಡವಾಳ(ಎನ್.ಸಿ.ಡಿ.ಸಿ) :

ಈ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ 6 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಒಟ್ಟು ರೂ.3.00ಲಕ್ಷ ಷೇರು ಬಂಡವಾಳವನ್ನು ಮಂಜೂರು ಮಾಡಲಾಗಿದೆ.

4. ವಿವಿಧ ವರ್ಗಗಳ ಸಹಕಾರ ಸಂಘಗಳಿಗೆ ಸಾಲದ ಸಹಾಯ :

ಈ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ 6 ಸಹಕಾರ ಸಂಘಗಳಿಗೆ ಒಟ್ಟು ರೂ.2.00ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

: ತಾಲ್ಲೂಕು ಪಂಚಾಯತಿ ಕಾರ್ಯಕ್ರಮಗಳು :

5. ವಿಶೇಷ ಘಟಕ ಯೋಜನೆಯಡಿ ಸಹಾಯಧನ :

ಈ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ 06 ಪಿಕಾರ್ಡ್ ಬ್ಯಾಂಕಿನಿಂದ 17 ಜನ ಪರಿಶಿಷ್ಟ ಜಾತಿ ಸದಸ್ಯರಿಗೆ ಒಟ್ಟು ರೂ. 1.63ಲಕ್ಷ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

ಕೋಷ್ಟಕ 19.1 : ಯೋಜನಾ ಕಾರ್ಯಕ್ರಮಗಳಡಿ ಸಾಧಿಸಿದ ಪ್ರಗತಿ ತಃಖ್ತೆ

ಕ್ರ. ಸಂ.	ಕಾರ್ಯಕ್ರಮಗಳು&ಲೆಕ್ಕಶೀರ್ಷಿಕೆ	ಆರ್ಥಿಕ			ವಾರ್ಷಿಕ ಗುರಿ	
		ವಾರ್ಷಿಕ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಗುರಿ	ಸಾಧನೆ
ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು						
1	ಫ್ಯಾಕ್ಸ್‌ಗಳಿಗೆ ಬಡ್ಡಿರಹಿತ ಸಾಲ(6425–00–101–0–31)	3.50	3.50	3.50	07	07
2	ದುರ್ಬಲ ವರ್ಗದ ಸಹಕಾರ ಸಂಘಗಳ ಪ್ರೋತ್ಸಾಹ ಮತ್ತು ಅಭಿವೃದ್ಧಿಗಾಗಿ ಸಹಾಯಧನ(2425–00–108–0–17)	0.00	0.00	0.00	0	0
3	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯ(ಎನ್.ಸಿ.ಡಿ.ಸಿ) ಸಹಾಯಧನ(2425–00–101–0–28)	2.90	2.90	2.90	06	06
4	ದುರ್ಬಲ ವರ್ಗದ ಸಹಕಾರ ಸಂಘಗಳ ಉನ್ನತಿ ಮತ್ತು ಅಭಿವೃದ್ಧಿಗಾಗಿ ಷೇರು (4425–00–101–0–26)	3.00	3.00	3.00	06	06
5	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಾಲದ ಸಹಾಯ (6425–00–101–0–27)	2.00	2.00	2.00	06	06
ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು						
1	ವಿಶೇಷ ಘಟಕ ಯೋಜನೆಯಡಿ ಸಹಾಯಧನ(2425–00–101–0–61)	1.63	1.63	1.63	17	17
	ಒಟ್ಟು :	**1.63**	**1.63**	**1.63**	**17**	**17**

ಮಂಜೂರಾಗಿರುವ ಮತ್ತು ಭರ್ತಿಯಾಗಿರುವ ಹುದ್ದೆಗಳ ಮಾಹಿತಿ

ಕ್ರ.ಸಂ	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು
1	ಸಹಕಾರ ಸಂಘಗಳ ಉಪ ನಿಬಂಧಕರು	01	01
2	ಸಹಕಾರ ಸಂಘಗಳ ಸಹಾಯಕ ನಿಬಂಧಕರು	02	02
3	ಸಹಕಾರ ಅಭಿವೃದ್ಧಿ ಅಧಿಕಾರಿ	07	05
4	ಅಧೀಕ್ಷಕರು	02	02
5	ಹಿರಿಯ ನಿರೀಕ್ಷಕರು	03	03
6	ನಿರೀಕ್ಷಕರು	11	04
7	ಪ್ರಥಮದರ್ಜೆ ಸಹಾಯಕರು	03	03
8	ಶಿಘ್ರಲಿಪಿಗಾರರು	01	0
9	ಬೆರಳಚ್ಚುಗಾರರು	03	0
10	ದ್ವಿತಿಯ ದರ್ಜೆಯ ಸಹಾಯಕರು	08	07
11	ವಾಹನ ಚಾಲಕ	03	0
12	ಜಾರಿಗಾರರು	02	0
13	ಜವಾನರು	08	02
	ಒಟ್ಟು	54	29

20. ಗ್ರಾಮೋದ್ಯೋಗ ಮತ್ತು ಚಿಕ್ಕಪುಟ್ಟ ಉದ್ಯಮ

1. **ಜಿಲ್ಲಾ ಉದ್ಯಮ ಕೇಂದ್ರ :**

ಈ ಯೋಜನೆಯಡಿ 2017–18ನೇ ಸಾಲಿಗೆ ರೂ.17.56ಲಕ್ಷ ಅನುದಾನ ನಿಗದಿಯಾಗಿದ್ದು, ಪೂರ್ಣ ಅನುದಾನ ಬಿಡುಗಡೆಯಾಗಿರುತ್ತದೆ. ಗ್ರಾಮಾಂತರ ಭಾಗದಲ್ಲಿ ಹೊಲಿಗೆ ತರಬೇತಿ ಪಡೆದ ಫಲಾನುಭವಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರ ವಿತರಣ ಕಾರ್ಯಕ್ರಮ ಹಮ್ಮಿಕೊಂಡಿದ್ದು 2017–18ನೇ ಸಾಲಿನಲ್ಲಿ ಇ–ಪ್ರೋಕ್ಯೂರ್‌ಮೆಂಟಿನಲ್ಲಿ ಟೆಂಡರ್ ಕರೆದು ಹೊಲಿಗೆ ಯಂತ್ರಗಳನ್ನು ಖರೀದಿಸಿ ಅರ್ಹ 457 ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

2. **ವೃತ್ತಿಪರ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣ ಪೂರೈಕೆ :**

ಸದರಿ ಯೋಜನೆಯಡಿಯಲ್ಲಿ 2017–18ನೇ ಸಾಲಿನಲ್ಲಿ ರೂ.4.00ಲಕ್ಷ ಅನುದಾನ ನಿಗಧಿಯಾಗಿದ್ದು, ಪೂರ್ಣ ಅನುದಾನ ಬಿಡುಗಡೆಯಾಗಿರುತ್ತದೆ. ಗ್ರಾಮಾಂತರ ಭಾಗದಲ್ಲಿ ಅನುವಂಶಿಕವಾಗಿ ಕೆಲಸ ನಿರ್ವಹಿಸುತ್ತಿರುವ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣ ಪೂರೈಕೆ ಯೋಜನೆಯಾಗಿದ್ದು, 2017–18ನೇ ಸಾಲಿಗೆ ಬಡಗಿತನ ಮತ್ತು ಕ್ಷೌರಿಕ ವೃತ್ತಿ ಮಾಡುತ್ತಿರುವ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳನ್ನು ಉಚಿತವಾಗಿ ಹಂಚಿಕೆ ಮಾಡಲು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದರಂತೆ ರೂ.4.00ಲಕ್ಷಗಳಿಗೆ ಇ–ಪ್ರೋಕ್ಯೂರ್‌ಮೆಂಟಿನಲ್ಲಿ ಟೆಂಡರ್ ಕರೆದು ಒಟ್ಟು 124 ಫಲಾನುಭವಿಗಳಿಗೆ ಬಡಗಿತನ ಸುಧಾರಿತ ಉಪಕರಣ ಹಂಚಿಕೆ ಮಾಡಲಾಗಿದೆ.

3. **ವಿಚಾರಗೋಷ್ಠಿಗಳು ಕ್ಷೇತ್ರೋತ್ಸವಗಳು ಮತ್ತು ವಸ್ತು ಪ್ರದರ್ಶನಗಳು :**

ಸದರಿ ಯೋಜನೆಯಡಿ ರೂ.4.00ಲಕ್ಷ ನಿಗಧಿಯಾಗಿ ಸಂಪೂರ್ಣ ಹಣ ಬಿಡುಗಡೆಯಾಗಿದ್ದು, ದಸರಾ ವಸ್ತು ಪ್ರದರ್ಶನ ಹಾಗು ಸಾಕ್ಷ್ಯ ಚಿತ್ರಗಳ ಕಾರ್ಯಕ್ರಮಕ್ಕಾಗಿ ರೂ.2.00ಲಕ್ಷಗಳ ವೆಚ್ಚ ಮಾಡಲಾಗಿದೆ.

4. **ಸಣ್ಣ ಕೈಗಾರಿಕೆಗಳ ಕುಶಲಕರ್ಮಿಗಳು ಸೇರಿದಂತೆ ಕುಶಲ ಕರ್ಮಿಗಳಿಗೆ ಬಡ್ಡಿ ಸಹಾಯಧನ :**

ಈ ಕಾರ್ಯಕ್ರಮದಲ್ಲಿ ಕುಶಲಕರ್ಮಿಗಳ ಬ್ಯಾಂಕ್‌ನಲ್ಲಿ ಸಾಲ ಪಡೆದು ಘಟಕ ಸ್ಥಾಪನೆ ಮಾಡಿದ್ದು, ಬ್ಯಾಂಕ್‌ಗಳು ಆಕರಿಸುವ ಬಡ್ಡಿಯಲ್ಲಿ 7% ಗಿಂತ ಹೆಚ್ಚಿಗೆ ಹಾಗು 12%ಗೆ ಮಿತಿಗೊಳಿಸ ಅಂದರೆ 5% ಬಡ್ಡಿ ಸಹಾಯಧನ ನೀಡಲು ಅವಕಾಶವಿದ್ದು, ಬ್ಯಾಂಕ್‌ಗಳು ವಿಧಿಸಿದ ನಿಯಮಗಳಿಗೆ ಒಳಪಡಿಸಬೇಕು. ಅಂಥಹ ಪ್ರಕರಣಗಳು ಸಿಗದೇ ಇದ್ದ ಕಾರಣ ಯೋಜನೆ ಅನುಷ್ಠಾನವಾಗಿರುವುದಿಲ್ಲ.

21. ರೇಷ್ಮೆ

ದಾವಣಗೆರೆ ಜಿಲ್ಲೆಯಲ್ಲಿ 2017–18 ನೇ ಸಾಲಿನ ಅಂತ್ಯಕ್ಕೆ 409.89 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು 627 ಕುಟುಂಬಗಳು ರೇಷ್ಮೆ ಕೃಷಿ ಕೈಗೊಂಡಿದ್ದು, ಇವರುಗಳ ಪೈಕಿ 54 ಜನ ಪರಿಶಿಷ್ಟ ಜಾತಿ, 61 ಜನ ಪರಿಶಿಷ್ಟ ಪಂಗಡ, ಹಾಗೂ 15 ಜನ ಅಲ್ಪ ಸಂಖ್ಯಾತರ ಕುಟುಂಬಗಳು ಸೇರಿರುತ್ತವೆ. ಒಟ್ಟಾರೆ ರೇಷ್ಮೆ ಬೆಳೆಗಾರರಲ್ಲಿ 128 ಮಹಿಳೆಯರು ರೇಷ್ಮೆ ಕಸುಬನ್ನು ಮಾಡುತ್ತಿರುತ್ತಾರೆ.

ದಾವಣಗೆರೆ ಜಿಲ್ಲೆಯ ದಾವಣಗೆರೆ ಹಾಗೂ ಹರಿಹರ ತಾಲ್ಲೂಕುಗಳು ಭದ್ರಾ ಅಚ್ಚುಕಟ್ಟು ವ್ಯಾಪ್ತಿಗೆ ಬರುತ್ತಿದ್ದು ಶೇಕಡ 90ರಷ್ಟು ನೀರಾವರಿ ಪ್ರದೇಶವಾಗಿರುತ್ತದೆ. ಇಲ್ಲಿ ಭತ್ತ ಮತ್ತು ಕಬ್ಬು ಪ್ರಮುಖ ವಾಣಿಜ್ಯ ಬೆಳೆಗಳಾಗಿರುತ್ತವೆ. ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕುಗಳು ಅರೆ ಮಲೆನಾಡು ಪ್ರದೇಶವಾಗಿದ್ದು, ಅಡಿಕೆ, ತೆಂಗು ಮತ್ತು ತರಕಾರಿ ಬೆಳೆಗಳು ಪ್ರಮುಖ ಬೆಳೆಯಾಗಿರುತ್ತವೆ. ಇನ್ನುಳಿದ ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕುಗಳು ಬಯಲು ಪ್ರದೇಶವಾಗಿದ್ದು ಕೊಳವೆಬಾವಿಯಿಂದ ನೀರಾವರಿ ಅನುಕೂಲವಿದ್ದು, ಮಳೆಕೊರತೆಯಿಂದ ಹಾಗೂ ವಿದ್ಯುತ್ ಅಭಾವದಿಂದ ನೀರಾವರಿ ಕೃಷಿ ಕಡಿಮೆಯಾಗಿರುವುದರಿಂದ ಇಲ್ಲಿ ಹೆಚ್ಚು ಆದಾಯ ತರುವ ವಾಣಿಜ್ಯ ಬೆಳೆಗಳಾದ ಮಿಡಿಸೌತೆ (ಗರ್ಕಿನ್), ಬೆಂಡೆ ಹಾಗೂ ಮೆಣಸಿನಕಾಯಿ ಬೀಜೋತ್ಪಾದನೆ ಮತ್ತು ತರಕಾರಿ ಬೆಳೆಗಳನ್ನು (ಪ್ರಮುಖವಾಗಿ ಈರುಳ್ಳಿ) ಬೆಳೆಯಲಾಗುತ್ತಿದೆ. ಭತ್ತ ಹಾಗೂ ಬೀಜೋತ್ಪಾದನೆ ಬೆಳೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕ್ರಿಮಿನಾಶಕ ಉಪಯೋಗದಿಂದ ಹೆಚ್ಚಿನ ರೇಷ್ಮೆ ಕೃಷಿ ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತಿಲ್ಲ.

ಜಿಲ್ಲಾ ಪಂಚಾಯತ್ ವ್ಯಾಪ್ತಿಯಡಿ ಜಿಲ್ಲೆಯ ಆರು ತಾಲ್ಲೂಕುಗಳಿಂದ 1 ತಾಂತ್ರಿಕ ಸೇವಾ ಕೇಂದ್ರ, ಒಂದು ರೇಷ್ಮೆ ಕೃಷಿ ಕ್ಷೇತ್ರ ಕೆಲಸ ನಿರ್ವಸುತ್ತಿದ್ದು, 2017–18 ನೇ ಸಾಲಿನಲ್ಲಿ ಒಟ್ಟು 113.09 ಹೆಕ್ಟೇರ್ 113 ಜನ ರೇಷ್ಮೆ ಬೆಳೆಗಾರರಿಂದ ಹೊಸದಾಗಿ ಹಿಪ್ಪುನೇರಳೆ ನಾಟಿ ಮಾಡಿಸಲಾಗಿದೆ. ಹಾಗೂ 0.28 ಲಕ್ಷ ಮಿಶ್ರತಳಿ ಮತ್ತು 2.81 ಲಕ್ಷ ದ್ವಿತಳಿ ಮೊಟ್ಟೆಗಳನ್ನು ಚಾಕಿ ಮಾಡಿ ಕ್ರಮವಾಗಿ 19.00 ಮೆ.ಟನ್ ಮಿಶ್ರತಳಿ ಹಾಗೂ 180.75 ಮೆ.ಟನ್ ದ್ವಿತಳಿ ಗೂಡನ್ನು ಉತ್ಪಾದಿಸಲಾಗಿರುತ್ತದೆ.

ಜಿಲ್ಲಾ ವ್ಯಾಪ್ತಿಯಲ್ಲಿರುವ ಅಧಿಕಾರಿಗಳು / ಸಂಸ್ಥೆಗಳು



ಕೋಷ್ಟಕ 21.1

ಕ್ರ. ಸಂ	ತಾಲ್ಲೂಕು	ಒಟ್ಟು ಇರುವ ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ರೇಷ್ಮೆ ಬೆಳೆಗಾರರ ವಿವರ				
			ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪ ಸಂಖ್ಯಾತರರು	ಇತರೆ	ಒಟ್ಟು
1	ದಾವಣಗೆರೆ	46.72	4	19	2	38	63
2	ಹರಿಹರ	9.40	0	0	3	5	8
3	ಜಗಳೂರು	113.77	21	17	5	144	187
4	ಹರಪನಹಳ್ಳಿ	227.40	24	25	5	282	336
5	ಹೊನ್ನಾಳಿ	11.80	4	0	0	28	32
6	ಚನ್ನಗಿರಿ	0.80	1	0	0	0	1
	ಒಟ್ಟು	409.89	54	61	15	497	627

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1. **ಕ್ಷೇತ್ರೋತ್ಸವ :**

ಹೊಸದಾಗಿರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತಾಂತ್ರಿಕ ಮಾಹಿತಿ ನೀಡುವ ಸಲುವಾಗಿ ದಸರ ಉತ್ಸವ ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿದ್ದ ವಸ್ತು ಪ್ರದರ್ಶನದ ಸಲುವಾಗಿ ರೂ ಒಟ್ಟು ರೂ.1.00ಲಕ್ಷ ವೆಚ್ಚ ಭರಿಸಲಾಗಿದೆ.

ಕೋಷ್ಟಕ 21.2

ಗುರಿ		ಸಾಧನೆ		ಶೇ.ಸಾಧನೆ	
ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1.00	1	1.00	1	100%	100%

2. **ರೇಷ್ಮೆ ಬೆಳೆಗಾರರಿಗೆ ಸಹಾಯ :**

ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ದ್ವಿತಳಿ ಗೂಡು ಬೆಳೆಯುವುದಕ್ಕಾಗಿ ಪ್ರೋತ್ಸಾಹಿಸಲು ರೇಷ್ಮೆ ಬೆಳೆಗಾರರು 100 ಮೊಟ್ಟೆಗೆ ಸರಾಸರಿ ಇಳುವರಿ 60 ಕೆ.ಜಿ.ಗಿಂತ ಹೆಚ್ಚಿನ ಇಳುವರಿ ಪಡೆದ ರೇಷ್ಮೆ ಬೆಳೆಗಾರರಿಗೆ ದ್ವಿತಳಿ ಗೂಡಿಗೆ ಪ್ರತಿ ಕೆ.ಜಿ.ಗೂಡಿಗೆ ರೂ.50/–ರಂತೆ ಸಹಾಯಧನ ನೀಡಲಾಗುತ್ತಿದೆ. ಮತ್ತು ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವವರಿಗೆ ಹಿಪ್ಪುನೇರಳೆ ನರ್ಸರಿ ಸಸಿಗಳನ್ನು ಬೆಳೆಸಲು ಕಿಸಾನ್ ನರ್ಸರಿ ಕಾರ್ಯಕ್ರಮದಲ್ಲಿ ಸಹಾಯದನ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಾಗೂ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆಗೆ ರೋಗ ರುಜಿನ ಬಾರದಂತೆ ತಡೆಗಟ್ಟಲು ಸೋಂಕು ನಿವಾರಕಗಳನ್ನು ಖರೀದಿಸಿ ಉಚಿತವಾಗಿ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕೋಷ್ಟಕ 21.3

ಕಾರ್ಯಕ್ರಮ	ಗುರಿ		ಸಾಧನೆ		ಶೇ.ಸಾಧನೆ	
	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
ಸಾಮಾನ್ಯ	1.50	7	1.496	7	100	100
ಪ.ಜಾ	7.00	15	7.00	15	100	100
ಪ.ಪಂ	1.00	20	1.00	20	100	100

ತಾಲ್ಲೂಕು ಪಂಚಾಯತ್ ಕಾರ್ಯಕ್ರಮ

3. **ಉತ್ಪಾದನಾ ಆಧಾರಿತ ದ್ವಿತಳಿ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ :**

ವಿಘಯೋ ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ತೋಟ ಸ್ಥಾಪನೆಗೆ ರೇಷ್ಮೆ ಕೃಷಿಕರಿಗೆ ಘಟಕದರ ಎಕರೆಗೆ ರೂ.14000/– ನಿಗದಿಪಡಿಸಲಾಗಿದ್ದು ಇದರಲ್ಲಿ ಶೇ 90 % ರಷ್ಟು ಸಹಾಯಧನ ರೂ.12600/– ರಂತೆ ಒಟ್ಟು ಫಲಾನುಭವಿಗೆ ಗರಿಷ್ಠ 2 ಹೆಕ್ಟೇರ್ ವರೆಗೆ ಸಹಾಯಧನ, ನೀಡಲಾಗಿದೆ.

ಕೋಷ್ಟಕ 21.4

ಗುರಿ		ಸಾಧನೆ		ಶೇ.ಸಾಧನೆ	
ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1.19	22	1.19	22	100	100

ಕೋಷ್ಟಕ 21.5 : ದಾವಣಗೆರೆ ಜಿಲ್ಲೆಯ ರೇಷ್ಮೆ ಇಲಾಖೆಯಲ್ಲಿರುವ ಸಿಬ್ಬಂದಿಗಳ ಭರ್ತಿ ಮತ್ತು ಖಾಲಿ ಇರುವ ವಿವರ

ಕ್ರ. ಸಂ	ಹುದ್ದೆಗಳ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1.	ರೇಷ್ಮೆ ಉಪನಿರ್ದೇಶಕರು	1	1	0
2.	ರೇಷ್ಮೆ ಸಹಾಯಕ ನಿರ್ದೇಶಕರು	1	0	1
3.	ಪತ್ರಾಂಕಿತ ವ್ಯವಸ್ಥಾಪಕರು	1	1	0
4.	ರೇಷ್ಮೆ ವಿಸ್ತರಣಾಧಿಕಾರಿಗಳು	1	0	1
5.	ಅಧೀಕ್ಷಕರು	1	1	0
6.	ರೇಷ್ಮೆ ನಿರೀಕ್ಷಕರು	6	2	4
7.	ಪ್ರಥಮ ದರ್ಜೆ ಸಹಾಯಕರು	2	1	1
8.	ರೇಷ್ಮೆ ಪ್ರದರ್ಶಕರು	9	8	1
9.	ರೇಷ್ಮೆ ಪ್ರವರ್ತಕರು	2	0	2
10.	ವಾಹನ ಚಾಲಕರು	2	0	2
11.	ಡಿ.ಗ್ರೂಪ್ ನೌಕರರು	6	5	1
	ಒಟ್ಟು	32	19	**13**

ಕೋಷ್ಟಕ 21.6

ಕ್ರ. ಸಂ.	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆಯಾದ ಅನುದಾನ	ಸಂಚಿತ ಸಾಧನೆ		ಶೇಕಡ ಸಾಧನೆ
		ಭೌತಿಕ	ಆರ್ಥಿಕ	ಆರ್ಥಿಕ	ಭೌತಿಕ	ಆರ್ಥಿಕ	
1	ರೇಷ್ಮೆ ಅಭಿವೃದ್ಧಿ ಯೋಜನೆ (ಸಾಮಾನ್ಯ)2851–00–107–1–35	179	50.320	74.970	222	74.799	100
2	ರೇಷ್ಮೆ ಅಭಿವೃದ್ಧಿ ಯೋಜನೆ (ವಿ.ಫ.ಯೋ) 2851–00–107–1–35	26	12.150	10.755	15	10.692	99
3	ರೇಷ್ಮೆ ಅಭಿವೃದ್ಧಿ ಯೋಜನೆ (ಗಿ.ಉ ಯೋ)2851–00–107–1–35	36	25.65	25.065	21	25.088	100
4	ನೂತನ ಕತೃತ್ವ ಶಕ್ತಿ ಮತ್ತು ಭಾಗಿದಾರರಿಗೆ ಸವಲತ್ತು (ಸಾಮಾನ್ಯ) 2851–00–107–1–48	1206	24.630	24.630	1206	24.610	100
5	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2851–00–107–1–49	83	54.86	54.86	83	54.86	100
6	ರೇಷ್ಮೆ ವ್ಯವಸಾಯ ಯೋಜನೆ 2851–00–107–1–80	947	10.76	10.76	947	10.68	99

22. ಕೈಮಗ್ಗ ಮತ್ತು ಜವಳಿ

ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 428 ಕೈಮಗ್ಗ ನೇಕಾರರು, 141 ವಿದ್ಯುತ್ ಮಗ್ಗ ನೇಕಾರರು ನೇಯ್ಗೆ ಚಟುವಟಿಕೆಯಲ್ಲಿ ತೊಟಗಿರುತ್ತಾರೆ. 10 ಕೈಮಗ್ಗೆ ನೇಕಾರ ಸಹಕಾರ ಸಂಘಗಳು ಹಾಗೂ 04 ವಿದ್ಯುತ್ ಚಾಳಿತ ನೇಕಾರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ 2 ಕೆ.ಹೆಚ್.ಡಿ.ಸಿ ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

- ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಘಟಕಗಳ ಸಂಖ್ಯೆ : 06
- ಸ್ಪಿನ್ನಿಂಗ್ ಮಿಲ್ಲುಗಳ ಸಂಖ್ಯೆ : 02
- ಕೈಮಗ್ಗಗಳ ಸಂಖ್ಯೆ : 428
- ವಿದ್ಯುತ್ ಮಗ್ಗಗಳ ಸಂಖ್ಯೆ : 90
- ರೇಪಿಯರ್ ವಿದ್ಯುತ್ ಮಗ್ಗಗಳ ಸಂಖ್ಯೆ (ಲಾಳಿ ರಹಿತ ಮಗ್ಗ): 174
- ರೆಡಿಮೇಡ್ ಗಾರ್ಮೆಂಟ್ಸ್ ಘಟಕಗಳ ಸಂಖ್ಯೆ :20
- ಖಾಸಗಿ ಸಿದ್ಧ ಉಡುಪು (ಗಾರ್ಮೆಂಟ್ಸ್) ತರಬೇತಿ ಕೇಂದ್ರಗಳು :07
- ಸರ್ಕಾರದಿಂದ ಸ್ಥಾಪಿತವಾದ ಸಿದ್ಧ ಉಡುಪು ಕೌಶಲ್ಯಾಭಿವೃದ್ಧಿ ಕೇಂದ್ರಗಳು :04
- ದಾವಣಗೆರೆ ಜವಳಿ ಪಾರ್ಕ್‌ನಲ್ಲಿ ಈವರೆಗಿನ ಅಂದಾಜು ಬಂಡವಾಳ ಹೂಡಿಕೆ :6561 (ರೂ.ಲಕ್ಷಗಳಲ್ಲಿ)
- ದಾವಣಗೆರೆ ಜವಳಿ ಪಾರ್ಕ್‌ನಲ್ಲಿ ಈವರೆಗಿನ ಉದ್ಯೋಗ ಸೃಷ್ಟಿ :2032

ಕೋಷ್ಟಕ 22.1

ಕ್ರ.ಸಂ.	ಕಾರ್ಯಕ್ರಮದ ವಿವರ			ಪ್ರತಿ ಕಾರ್ಯಕ್ರಮದ ಸಂಕ್ಷಿಪ್ತ ಮಾಹಿತಿ
1	ಕೈಮಗ್ಗ ಉದ್ದಿಮೆಗಳಿಗೆ ಸಹಾಯ			ಈ ಯೋಜನೆಯಡಿ ಕೈ ಮಗ್ಗ ನೇಕಾರ ಸಹಕಾರ ಸಂಘಗಳ 08 ಪ.ಜಾ. ಫಲಾನುಭವಿಗಳಿಗೆ ದುಡಿಮೆ ಬಂಡವಾಳ, 01 ನೇಕಾರರ ಸಹಕಾರ ಸಂಘಕ್ಕೆ 45 ದಿನಗಳ ಕೈಮಗ್ಗ ನೇಯ್ಗೆ ತರಬೇತಿಗಾಗಿ, ಹಾಗೂ 03 ನೇಕಾರರ ಸಹಕಾರ ಸಂಘಗಳಿಗೆ ದುಡಿಮೆ ಬಂಡವಾಳಕ್ಕಾಗಿ ಆರ್ಥಿಕ ಸಹಾಯ ಮಂಜೂರು ಮಾಡಲಾಗಿದೆ. 2017–18ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ರೂ.4.00 ಲಕ್ಷ ಆರ್ಥಿಕ ಮತ್ತು 21 ಭೌತಿಕ ಗುರಿ ಸಾಧಿಸಲಾಗಿದೆ. ಪ್ರಗತಿ ಶೇ.100.
	2851–00–107–0–31–100			
		ಆರ್ಥಿಕ (ಲಕ್ಷ)	ಭೌತಿಕ	
	ಗುರಿ	4.00	21	
	ಸಾಧನೆ	4.00	21	
2	ಕೈಮಗ್ಗ ಸಹಕಾರಿ ಸೊಸೈಟಿಗಳಿಗೆ ಸರ್ಕಾರದ ಷೇರು ಮೊತ್ತ			ಈ ಯೋಜನೆಯಡಿ ಕೈಮಗ್ಗ ನೇಕಾರ ಸಹಕಾರ ಸಂಘಗಳ ಸಾಲ ಎತ್ತುವ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಸರ್ಕಾರದ ಷೇರು ಬಂಡವಾಳ ಮಂಜೂರು ಮಾಡಲಾಗಿದೆ. 2017–18ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ರೂ.2.00 ಲಕ್ಷ ಆರ್ಥಿಕ ಮತ್ತು 07 ಭೌತಿಕ ಗುರಿ ಸಾಧಿಸಲಾಗಿದೆ. ಪ್ರಗತಿ ಶೇ.100.
	4851–00–101–0–37–051			
		ಆರ್ಥಿಕ (ಲಕ್ಷ)	ಭೌತಿಕ	
	ಗುರಿ	2.00	7	
	ಸಾಧನೆ	2.00	7	

ಕೋಷ್ಟಕ 22.2 : ಆರ್ಥಿಕ/ಭೌತಿಕ ಪ್ರಗತಿ

ಕ್ರ. ಸಂ.	ಸಹಕಾರ ಸಂಘದ ಹೆಸರು	ತಾಲ್ಲೂಕು	ಭೌತಿಕ	ಮಂಜೂರಾದ ಮೊತ್ತ	ಉದ್ದೇಶ
1	**ಕೈಮಗ್ಗ ಉದ್ದಿಮೆಗಳಿಗೆ ಸಹಾಯ 2851–00–107–0–31–100**				
1	ಶ್ರೀ ರೇಣುಕ ಕೈಮಗ್ಗ ನೇಕಾರರ ವಿದ್ಯೋದ್ದೇಶ ಮತ್ತು ಅಭಿವೃದ್ಧಿ ಸಹಕಾರ ಸಂಘ ನಿಯಮಿತ, ದಾವಣಗೆರೆ	ದಾವಣಗೆರೆ	02	50000	ಪ.ಜಾ. ಪಲಾನು ಭವಿಗಳಿಗೆ ದುಡಿಮೆ ಬಂಡವಾಳಕ್ಕಾಗಿ ಸಹಾಯಧನ ಮಂಜೂರಾತಿ.
2	ಶ್ರೀ ಮಾರ್ಕಂಡೇಶ್ವರಸ್ವಾಮಿ ರೇಷ್ಮೆ – ಹತ್ತಿ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ದಾವಣಗೆರೆ	ದಾವಣಗೆರೆ	02	50000	
4	ಪಟ್ಟಸಾಲೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಯರಗುಂಟೆ ಗ್ರಾಮ, ಕೊಂಡಜ್ಜಿ ರಸ್ತೆ, ದಾವಣಗೆರೆ	ದಾವಣಗೆರೆ	02	50000	
4	ಶ್ರೀ ಮಾರ್ಕಂಡೇಯ ಕೈಮಗ್ಗ ನೇಕಾರರ ಸಹಕಾರ ಸಂಘ ನಿಯಮಿತ, ಗುತ್ತೂರು, ಹರಿಹರ.	ಹರಿಹರ	02	50000	
5	ವಾಸನ ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ ನಿ., ವಾಸನ ಹರಿಹರ ತಾ.	ಹರಿಹರ	10	75000	45 ದಿನಗಳ ಕೈಮಗ್ಗ ನೇಯ್ಗೆ ತರಬೇತಿಗಾಗಿ
6	ವಾಸನ ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ ನಿ., ವಾಸನ ಹರಿಹರ ತಾ.	ಹರಿಹರ	01	25000	ದುಡಿಮೆ ಬಂಡವಾಳಕ್ಕಾಗಿ
7	ದೇವರಹಳ್ಳಿ ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ, ದೇವರಹಳ್ಳಿ, ಚನ್ನಗಿರಿ ತಾ.	ಚನ್ನಗಿರಿ	01	50000	ದುಡಿಮೆ ಬಂಡವಾಳಕ್ಕಾಗಿ
8	ಶ್ರೀ ಕನಕದಾಸ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಸಂಘ, ಉಚ್ಚಂಗಿದುರ್ಗ.	ಹರಪನಹಳ್ಳಿ	01	50000	ದುಡಿಮೆ ಬಂಡವಾಳಕ್ಕಾಗಿ
	ಒಟ್ಟು		21	4.00	
1.	**ಕೈಮಗ್ಗ ಸಹಕಾರಿ ಸೊಸೈಟಿಗಳಿಗೆ ಸರ್ಕಾರದ ಷೇರು ಮೊತ್ತ 4851–00–101–0–37–051**				
1	ಶ್ರೀ ರೇಣುಕ ಕೈಮಗ್ಗ ನೇಕಾರರ ವಿದ್ಯೋದ್ದೇಶ ಮತ್ತು ಅಭಿವೃದ್ಧಿ ಸಹಕಾರ ಸಂಘ ನಿಯಮಿತ, ದಾವಣಗೆರೆ.	ದಾವಣಗೆರೆ	01	30000	ಸರ್ಕಾರದ ಷೇರು ಮೊತ್ತ
2	ಶ್ರೀ ಮಾರ್ಕಂಡೇಶ್ವರಸ್ವಾಮಿ ರೇಷ್ಮೆ – ಹತ್ತಿ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ದಾವಣಗೆರೆ.	ದಾವಣಗೆರೆ	01	30000	ಸರ್ಕಾರದ ಷೇರು ಮೊತ್ತ
3	ಪಟ್ಟಸಾಲೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಯರಗುಂಟೆ ಗ್ರಾಮ, ಕೊಂಡಜ್ಜಿ ರಸ್ತೆ, ದಾವಣಗೆರೆ.	ದಾವಣಗೆರೆ	01	30000	ಸರ್ಕಾರದ ಷೇರು ಮೊತ್ತ
4	ಶ್ರೀ ಮಾರ್ಕಂಡೇಯ ಕೈಮಗ್ಗ ನೇಕಾರರ ಸಹಕಾರ ಸಂಘ ನಿಯಮಿತ, ಗುತ್ತೂರು, ಹರಿಹರ.	ಹರಿಹರ	01	30000	ಸರ್ಕಾರದ ಷೇರು ಮೊತ್ತ
5	ವಾಸನ ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ ನಿ., ವಾಸನ ಹರಿಹರ ತಾ.	ಹರಿಹರ	01	20000	ಸರ್ಕಾರದ ಷೇರು ಮೊತ್ತ
6	ದೇವರಹಳ್ಳಿ ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ, ದೇವರಹಳ್ಳಿ, ಚನ್ನಗಿರಿ ತಾ.	ಚನ್ನಗಿರಿ	01	30000	ಸರ್ಕಾರದ ಷೇರು ಮೊತ್ತ
7	ಶ್ರೀ ಕನಕದಾಸ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಸಂಘ, ಉಚ್ಚಂಗಿದುರ್ಗ.	ಹರಪನಹಳ್ಳಿ	01	30000	ಸರ್ಕಾರದ ಷೇರು ಮೊತ್ತ
	ಒಟ್ಟು		07	2.00	

23. ಸಾಮಾಜಿಕ ಅರಣ್ಯ

ದಾವಣಗೆರೆ ಸಾಮಾಜಿಕ ಅರಣ್ಯ ವಿಭಾಗವು ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು ಡೆಕನ್ ಪರ್ಯಾಯ ದ್ವೀಪದ ದಕ್ಷಿಣ ಭಾಗದಲ್ಲಿರುತ್ತದೆ. ಈ ವಿಭಾಗವು ದಾವಣಗೆರೆ, ಹರಿಹರ, ಜಗಳೂರು, ಹರಪನಹಳ್ಳಿ, ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳ ಎಲ್ಲೆಗಳಿಂದ ರಚನೆಗೊಂಡಿರುತ್ತದೆ. ಈ ವಿಭಾಗವು ಪೂರ್ವ ರೇಖಾಂಶ 75^0–17'–60' ರಿಂದ 76^0–29'–60' ವರೆಗೆ ಹಾಗೂ ಉತ್ತರ ಅಕ್ಷಾಂಶ 14^0–3'–00' ರಿಂದ 14^0–55" ರ ಮಧ್ಯ ಇರುತ್ತದೆ.

ದಾವಣಗೆರೆ ಸಾಮಾಜಿಕ ಅರಣ್ಯ ವಿಭಾಗವು ಸರ್ಕಾರದ ಆದೇಶ ಸಂಖ್ಯೆ, ಅಪಜೀ:148;ಅಪಸೇ;98, ದಿನಾಂಕ: 12.08.1998ರನ್ವಯ ಸೃಜನೆಗೊಂಡು ದಿನಾಂಕ 19ನೇ ಆಗಸ್ಟ್ 1998 ರಿಂದ ಕಾರ್ಯಾಚರಣೆ ಪ್ರಾರಂಭಿಸಿರುತ್ತದೆ. ದಾವಣಗೆರೆ ನಗರವು ವಿಭಾಗದ ಕೇಂದ್ರ ಸ್ಥಾನವಾಗಿದ್ದು, ಒಂದು ಉಪ ವಿಭಾಗವನ್ನು ದಾವಣಗೆರೆ ಕೇಂದ್ರಸ್ಥಾನವಾಗಿ ಹಾಗೂ ಆರು ವಲಯಗಳಾದ ದಾವಣಗೆರೆ, ಹರಿಹರ, ಜಗಳೂರು, ಹರಪನಹಳ್ಳಿ, ಚನ್ನಗಿರಿ ಮತ್ತು ಹೊನ್ನಾಳಿ ಸಾಮಾಜಿಕ ಅರಣ್ಯ ವಲಯಗಳನ್ನು ಕೇಂದ್ರಸ್ಥಾನವಾಗಿ ಹೊಂದಿರುತ್ತದೆ.

ದಾವಣಗೆರೆ ಜಿಲ್ಲೆಯ ಒಟ್ಟು ವಿಸ್ತೀರ್ಣ 5975.97 ಚ.ಕಿ.ಮೀ. ಆಗಿರುತ್ತದೆ. ಒಟ್ಟು ಜನ ಸಂಖ್ಯೆ 19,45,497 ಇದ್ದು, ಇದರಲ್ಲಿ ಗ್ರಾಮೀಣ ಜನಸಂಖ್ಯೆ 13,16,487 (2011ರ ಜನಗಣತಿ ಪ್ರಕಾರ) ಇರುತ್ತದೆ. ಈ ಜಿಲ್ಲೆಯು ದಾವಣಗೆರೆ, ಹರಿಹರ, ಜಗಳೂರು, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳನ್ನೊಳಗೊಂಡಿರುತ್ತದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ 89,918 ಹೆ. ಗಳಷ್ಟು ಅರಣ್ಯ ಪ್ರದೇಶವಿದೆ. ಇದು ಒಟ್ಟು ವಿಸ್ತೀರ್ಣದ ಶೇ. 11.22 ಆಗಿರುತ್ತದೆ. ಈ ಜಿಲ್ಲೆಯಲ್ಲಿರುವ ಕೃಷಿ ಭೂಮಿಯ ಮೂರನೇ ಒಂದು ಭಾಗ ಒಣ ಭೂಮಿ ಆಗಿರುತ್ತದೆ.

ಈ ಜಿಲ್ಲೆಯಲ್ಲಿ ಜನಗಳ ಬೇಡಿಕೆ ಇದ್ದ ಉರುವಲು ಕಟ್ಟಿಗೆ ಸಣ್ಣ ನಾಟಗಳ ಬೇಡಿಕೆಗಳನ್ನು ಪೂರೈಸಲು ಮತ್ತು ಜಿಲ್ಲೆಯ ಹೆಚ್ಚು ಪ್ರದೇಶವು ಒಣ ಭೂಮಿ ಪ್ರದೇಶವಾದುದರಿಂದ ಈ ಪ್ರದೇಶದಲ್ಲಿ ಮರ ಗಿಡಗಳ ಸಂಪನ್ಮೂಲ ಹೆಚ್ಚಿಸಿ ನೀರಿನ ಕೊರತೆಯನ್ನು ನೀಗಿಸಲು ಮತ್ತು ಪರಿಸರವನ್ನು ಅಭಿವೃದ್ಧಿ ಪಡಿಸುವುದು ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸಿ ಅವರ ದಿನ ನಿತ್ಯದ ಉಪಯೋಗಕ್ಕೆ ಮರಗಳ ಉತ್ಪನ್ನಗಳನ್ನು ಬಳಸಿಕೊಂಡು ಸ್ವಾಭಾವಿಕ ಮತ್ತು ಕಾಯ್ದಿಟ್ಟ ಅರಣ್ಯ ಪ್ರದೇಶಗಳ ಮೇಲೆ ಉತ್ತಡ ಕಡಿಮೆ ಮಾಡುವ ಮುಖ್ಯ ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಒಬ್ಬೊಬ್ಬ ವಲಯ ಅರಣ್ಯಾಧಿಕಾರಿಗಳು ಅಂದರೆ ಒಟ್ಟು ಆರು (6) ಜನ ವಲಯ ಅರಣ್ಯಾಧಿಕಾರಿಗಳು ಇರುತ್ತಾರೆ. ಈ ವಿಭಾಗದಲ್ಲಿ ನಡೆಯುವ ಎಲ್ಲಾ ಕಾಮಗಾರಿ ತಪಾಸಣೆ ಹಾಗೂ ಅಗಿಂದಾಗ್ಗೆ ವಲಯ ಅರಣ್ಯಾಧಿಕಾರಿಗಳಿಗೆ ಸಲಹೆ ನೀಡಲು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಹಾಯಕರಾಗಿ ಕೆಲಸದಲ್ಲಿ ಸಹಕರಿಸಲು ಒಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರು ಸಹ ಇರುತ್ತಾರೆ.

ಈಗಾಗಲೇ ಮೇಲೆ ತಿಳಿಸಿದಂತೆ ಒಣ ಭೂಮಿ ಪ್ರದೇಶದಲ್ಲಿ ಉರುವಲು ಕಟ್ಟಿಗೆ, ಮೇವು ಹಾಗೂ ಸಣ್ಣ ನಾಟಗಳಿಗೆ ಜನರ ಬೇಡಿಕೆ ಹೆಚ್ಚಾಗುತ್ತಲೆ ಹೋದ ಹಾಗೆ, ಇವನ್ನು ಪೂರೈಸಲು ಇಲಾಖೆಗೆ ಆಗದೇ ಸ್ವಾಭಾವಿಕವಾಗಿ ಈಗಾಗಲೇ ಇರುವ ಅರಣ್ಯಗಳ ಮೇಲೆ ಒತ್ತಡ ಹೆಚ್ಚಾಗುತ್ತಲೇ ಹೋಗಿರುತ್ತದೆ.

ಈ ಒತ್ತಡವನ್ನು ಕಡಿಮೆ ಮಾಡಲು ಮತ್ತು ಜನರ ಬೇಡಿಕೆ ಪೂರೈಸಲು ಸಾಮಾಜಿಕ ಅರಣ್ಯ ವಿಭಾಗವು ಮುಖ್ಯವಾಗಿ ಈ ಕೆಳಗೆ ವಿವರಿಸಿದ ಭೂಮಿಯಲ್ಲಿ ಮರಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

1) ಗೋಮಾಳ ಭೂಮಿ
2) ಸಿ ಮತ್ತು ಡಿ ದರ್ಜೆ ಭೂಮಿ
3) ಅರಣ್ಯ ಭೂಮಿ
4) ಕೆರೆದಂಡೆ ಪ್ರದೇಶ
5) ನಾಲಾದಂಡೆ
6) ರಸ್ತೆ ಬದಿ ನೆಡುತೋಪು
7) ಶಾಲಾ / ಕಾಲೇಜು ಆವರಣಗಳು
8) ರೈತರ ಸ್ವಂತ ಜಮೀನು
9) ಸರ್ಕಾರ ಮತ್ತು ಇನ್ನಿತರ ಖಾಸಗೀ ಸಂಸ್ಥೆ ಜಮೀನುಗಳು
10) ಕೊನೆಯದಾಗಿ ಮತ್ತು ಅತೀ ಮುಖ್ಯವಾಗಿ ರೈತರಿಗೆ ಸಸಿಗಳ ವಿತರಣೆ

ಅರಣ್ಯ ಇಲಾಖೆಯು ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

1) ಸಾಮಾಜಿಕ ಅರಣ್ಯ ಯೋಜನೆ (ಯೋಜನೇತರ) (ಅಧಿಕಾರಿ/ ಸಿಬ್ಬಂದಿಗಳ ವೇತನ, ಕಚೇರಿ ವೆಚ್ಚ, ವಾಹನ ನಿರ್ವಹಣೆ ಹಾಗೂ ದಿನಗೂಲಿ ಕೆಲಸಗಾರರ ವೇತನ ಪಾವತಿ)
2) ಜೆ.ಬಿ.ಐ.ಸಿ. ನೆರವಿನ (ಕೆ.ಎಸ್.ಎಫ್.ಎಂ.ಬಿ.ಸಿ) ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ವೈವಿಧ್ಯ ಸಂರಕ್ಷಣೆ ಯೋಜನೆಯಡಿ. (ಅರಣ್ಯ ಪ್ರೇರಕರ ಗೌರವಧನ)
3) ಕಟ್ಟಡಗಳ ನಿರ್ವಹಣೆ
4) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.
5) ಸಾಮಾಜಿಕ ಅರಣ್ಯ ಯೋಜನೆ
6) ರಸ್ತೆ ಬದಿ ನೆಡುತೋಪು ನಿರ್ಮಾಣ
7) ಆರ್.ಎಸ್.ಪಿ.ಡಿ ಯೋಜನೆ
8) ಕೆ.ಎಫ್.ಡಿ.ಎಫ್ ಯೋಜನೆ
9) ಜಿ.ಯು.ಎ.ಯೋಜನೆ
10) ಎಸ್.ಎಂ.ಎಫ್. ಯೋಜನೆ

1. ಸಾಮಾಜಿಕ ಅರಣ್ಯ ಯೋಜನೆ (ಯೋಜನೇತರ):

ಈ ಯೋಜನೇತರ ಲೆಕ್ಕ ಶೀರ್ಷಿಕೆಯಲ್ಲಿ ಮುಖ್ಯವಾಗಿ ಅಧಿಕಾರಿ/ಸಿಬ್ಬಂದಿಗಳ ವೇತನ, ಕಚೇರಿ ವೆಚ್ಚ, ವಾಹನ ನಿರ್ವಹಣೆ ಹಾಗೂ ಎಂ.ಆರ್. ದಿನ ಗೂಲಿ ಕೆಲಸಗಾರರ ವೇತನ ಹಾಗೂ ಪಿ.ಸಿ.ಪಿ. ದಿನಗೂಲಿ ಕೆಲಸಗಾರರ ದಿನಗೂಲಿ ಪಾವತಿಸಲಾಗುತ್ತದೆ.

2. ಜೆ.ಬಿ.ಐ.ಸಿ. ನೆರವಿನ (ಕೆ.ಎಸ್.ಎಫ್.ಎಂ.ಬಿ.ಸಿ) ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆ:

ಅರಣ್ಯೀಕರಣ ಕಾಮಗಾರಿಗಳಲ್ಲಿ ಜನಜಾಗೃತಿಯುಂಟು ಮಾಡುವ ಅರಣ್ಯ ಪ್ರೇರಕರ ಗೌರವಧನವನ್ನು ಪಾವತಿ ಮಾಡಲಾಗಿರುತ್ತದೆ.

3. ಕಟ್ಟಡಗಳು :

ಅಸ್ತಿತ್ವದಲ್ಲಿರುವ ಇಲಾಖೆಯ ಹಳೆಯ ಕಟ್ಟಡಗಳ ಸುಣ್ಣ/ಬಣ್ಣ ಹಾಗೂ ದುರಸ್ತಿ ನಿರ್ವಹಣೆ ಕಾರ್ಯಗಳು.

4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

2017–18ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಅನುಷ್ಠಾನಗೊಳಿಸಲಾಗಿದೆ.

2017–18ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಬೆಳೆಸಿದ ಸಸಿಗಳನ್ನು 2017–18ರಲ್ಲಿ ಪೋಷಿಸಿ ವಿತರಣೆ/ ಇಲಾಖೆ ನೆಡುತೋಪುಗಳಿಗೆ ಉಪಯೋಗಿಸಲಾಗಿರುತ್ತದೆ. ಹಾಗೂ 93.00 ಹೆ/ಕಿ.ಮೀ. ನೆಡುತೋಪು ನಿರ್ಮಾಣ ಮಾಡಿ ಒಟ್ಟು 0.286ಲಕ್ಷ ಸಸಿಗಳನ್ನು ನೆಡಲಾಗಿರುತ್ತದೆ. ಮತ್ತು 2017–18ರಲ್ಲಿ ಹೊಸದಾಗಿ 11.00ಲಕ್ಷ ಸಸಿಗಳನ್ನು ಬೆಳೆಸಲಾಗಿರುತ್ತದೆ.

ಸದರಿ ಯೋಜನೆಯಡಿ ಮುಖ್ಯವಾಗಿ ರೈತರಿಗೆ/ಸಾರ್ವಜನಿಕರಿಗೆ, ಸಂಘಸಂಸ್ಥೆಗಳಿಗೆ, ಪರಿಶಿಷ್ಟ ಜಾತಿ/ಪಂಗಡ ಜನಾಂಗದ ರೈತರಿಗೆ ಬೇಕಾದ ಸಸಿಗಳನ್ನು ಉಚಿತವಾಗಿ 2016–17ನೇ ಸಾಲಿನಲ್ಲಿ ಬೆಳೆಸಿ ಲಭ್ಯವಿದ್ದ ಸಸಿಗಳನ್ನು 2017–18ನೇ ಸಾಲಿನಲ್ಲಿ ಒಟ್ಟು 2141 ರೈತ ಫಲಾನುಭವಿಗಳಿಗೆ 7.30 ಲಕ್ಷ ಸಸಿಗಳನ್ನು ವಿತರಿಸಿದೆ.

5. ಸಾಮಾಜಿಕ ಅರಣ್ಯ ಯೋಜನೆ:

ಪ್ರಾದೇಶಿಕ ಅಸಮತೋಲನೆ ನಿವಾರಿಸಲು ರಚಿಸಲಾಗಿದ್ದ ಸಮಿತಿಯ ಶಿಫಾರಸ್ಸಿನ ಪ್ರಕಾರ ರಾಜ್ಯ ಸರ್ಕಾರವು 2017–18ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಈ ವಿಭಾಗದ 06 ತಾಲ್ಲೂಕು ವಲಯಗಳಿಗೆ ಕ್ರಿಯಾ ಯೋಜನೆಯಲ್ಲಿ ಅನುದಾನವನ್ನು ನಿಗಧಿಪಡಿಸಿರುವ ಪ್ರಕಾರ ಅರಣ್ಯೀಕರಣ ಕಾಮಗಾರಿಗಳನ್ನು (ನೆಡುತೋಪು ನಿರ್ಮಾಣ 2017ನೇ ಮಳೆಗಾಲದಲ್ಲಿ–242.00 ಹೆ/ ಕಿ.ಮೀ., ನೆಡುತೋಪು ನಿರ್ವಹಣೆ 2014–15 ಮತ್ತು 2015–16ರಲ್ಲಿ ನಿರ್ಮಿಸಿದ 474.00 ಹೆ/ಕಿ.ಮೀ. ಹಾಗೂ 3.00 ಹೆ/ಕಿ.ಮೀ. ಮುಂಗಡ ಗುಂಡಿ ಕಾಮಗಾರಿಗಳನ್ನು) 2017–18ನೇ ಸಾಲಿನಲ್ಲಿ ಈ ವಿಭಾಗದಿಂದ ಅನುಷ್ಠಾನಗೊಳಿಸಲಾಗಿರುತ್ತದೆ.

6. ರಸ್ತೆ ಬದಿ ನೆಡುತೋಪು ನಿರ್ಮಾಣ ಯೋಜನೆ:

ಸದರಿ ಯೋಜನೆಯಡಿ 06 ವಲಯಗಳಿಂದ ಒಟ್ಟು 15.00 ಕಿ.ಮೀ. (2012ನೇ ಮಳೆಗಾಲದಲ್ಲಿ ನಿರ್ಮಿಸಿದ) 5ನೇ ವರ್ಷ ರಸ್ತೆಬದಿ ನೆಡುತೋಪು ನಿರ್ವಹಣೆ ಹಾಗೂ 6.00 ಕಿ.ಮೀ. (2015ನೇ ಮಳೆಗಾಲದಲ್ಲಿ ನಿರ್ಮಿಸಿದ) 2ನೇ ವರ್ಷದ ನೆಡುತೋಪು ನಿರ್ವಹಣೆ ಮತ್ತು 9.00 ಕಿ.ಮೀ (2016ನೇ ಮಳೆಗಾಲದಲ್ಲಿ ನಿರ್ಮಿಸಿದ) ಮೊದಲನೇ ವರ್ಷದ ನೆಡುತೋಪು ನಿರ್ವಹಣೆ ಮತ್ತು 2017ನೇ ಮಳೆಗಾಲದಲ್ಲಿ 30.00 ಕಿ.ಮೀ. ರಸ್ತೆಬದಿ ನೆಡುತೋಪು ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿರುತ್ತದೆ ಮತ್ತು 2018ನೇ ಮಳೆಗಾಲದಲ್ಲಿ ಕ್ಯಾಜಿಲಿಟಿ ರಿಪ್ಲೇಸ್‌ಮೆಂಟಿಗಾಗಿ 1200 ಸಸಿಗಳನ್ನು ಬೆಳಸಲಾಗಿರುತ್ತದೆ ಹಾಗು 21.00 ಕಿ.ಮೀ ಮುಂಗಡ ಗುಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

7. ಆರ್.ಎಸ್.ಪಿ.ಡಿ

ಸದರಿ ಯೋಜನೆಯಡಿ 2017–18ನೇ ಸಾಲಿನಲ್ಲಿ 8*12 ಅಳತೆಯ 30000 ಸಸಿಗಳನ್ನು 236 ರೈತ ಫಲಾನುಭವಿಗಳಿಗೆ ಪ್ರತಿ ಸಸಿಗೆ ರೂ.3.00ಗಳಂತೆ ಹಣಕ್ಕೆ ವಿತರಿಸಲಾಗಿರುತ್ತದೆ. ಮತ್ತು 2018ನೇ ಮಳೆಗಾಲದಲ್ಲಿ ಸಾರ್ವಜನಿಕರಿಗೆ ವಿತರಿಸಲು ಹೊಸದಾಗಿ 75000 ಸಸಿಗಳನ್ನು ಬೆಳಸಲಾಗಿರುತ್ತದೆ. ಒಟ್ಟಾರೆ ರೂ.8.242ಲಕ್ಷ ವೆಚ್ಚ ಭರಿಸಿದೆ.

8. ಕೆ.ಎಫ್.ಡಿ.ಎಫ್ :

ಸದರಿ ಯೋಜನೆಯಡಿ 181.00 ಹೆ.ನೆಡುತೋಪು ನಿರ್ಮಾಣ ಮಾಡಿ 1.66ಲಕ್ಷ ಸಸಿಗಳನ್ನು ನಡೆಸಲಾಗಿರುತ್ತದೆ ಮತ್ತು 2016–17ರಲ್ಲಿ ಬೆಳೆಸಿದ 18*25 ಅಳತೆಯ ದೊಡ್ಡ ಗಾತ್ರದ ಚೀಲಗಳಲ್ಲಿ 1000 ಸಸಿಗಳನ್ನು ಪೋಷಿಸಲಾಗಿರುತ್ತದೆ.

9. ಎಸ್.ಎಂ.ಎ.ಎಫ್

ಸದರಿ ಯೋಜನೆಯಡಿ 2017–18ನೇ ಸಾಲಿನಲ್ಲಿ 76000 ಸಸಿಗಳನ್ನು 350 ಜನ ರೈತ ಫಲಾನುಭವಿಗಳಿಗೆ ವಿತರಿಸಿ 9.84ಲಕ್ಷಗಳನ್ನು ವೆಚ್ಚ ಭರಿಸಿದೆ. ಚಿಕ್ಕ ನರ್ಸರಿ ರೂ.7.25ಲಕ್ಷ ಮತ್ತು ದೊಡ್ಡ ನರ್ಸರಿ ರೂ.16.00ಲಕ್ಷಗಳನ್ನು ನರ್ಸರಿ ಅಭಿವೃದ್ಧಿಗೆ ವೆಚ್ಚ ಭರಿಸಲಾಗಿದೆ. ಒಟ್ಟಾರೆ ರೂ.38.09ಲಕ್ಷಗಳ ಆರ್ಥಿಕ ಗುರಿಯಲ್ಲಿ ರೂ.33.09ಲಕ್ಷಗಳು ಬಿಡುಗಡೆಯಾಗಿದ್ದು, ಬಿಡುಗಡೆಯಾಗಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲಾಗಿರುತ್ತದೆ.

10. ಜಿ.ಯು.ಎ : ಸದರಿ ಯೋಜನೆಯಡಿ 2017–18ನೇ ಸಾಲಿನಲ್ಲಿ 9.00 ಕಿ.ಮೀ ನಡೆತೋಪು ನಿರ್ಮಿಸಿ 8.242 ಲಕ್ಷಗಳನ್ನು ವೆಚ್ಚ ಭರಿಸಿದೆ ಹಾಗೂ 2018ನೇ ಮಳೆಗಾಲದಲ್ಲಿ ಕ್ಯಾಜುಲಿಟಿ ರಿಪ್ಲೇಸ್‌ಮೆಂಟಿಗಾಗಿ 360 ಸಸಿಗಳನ್ನು ಬೆಳಸಲಾಗಿರುತ್ತದೆ.

ನೆಡುತೋಪು ಮತ್ತು ಸಸಿಗಳ ಬೆಳೆಸುವಿಕೆ ಕಾರ್ಯ ವಿಧಾನಗಳು:

ನೆಡುತೋಪು ಮತ್ತು ಸಸಿಗಳ ಬೆಳೆಸುವಿಕೆಯಲ್ಲಿ ನಾಲ್ಕು ಕಾರ್ಯ ವಿಧಾನಗಳು ಇರುತ್ತವೆ.

ಎ) ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸುವಿಕೆ

ಬಿ) ಮುಂಗಡ ಕಾಮಗಾರಿ

ಸಿ) ನೆಡುತೋಪು ನಿರ್ಮಾಣ

ಡಿ) ನೆಡುತೋಪು ನಿರ್ವಹಣೆ

11. ಸಸಿ ಬೆಳೆಸುವಿಕೆ ಮತ್ತು ನಿರ್ವಹಣೆ :

